Editor: S.Y.GURUSHANTH Publisher: G.N.NAGARAJ
RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE

ದುಡಿಯುವ ಜನರ ಪ್ರಾಣಮಿತ್ರ

ಸಂಪುಟ–19 | ಸಂಚಿಕೆ–22 | ಮೇ 26–ಜೂನ್ 1, 2025 | ಪುಟ 16 | ರೂ.10
Volume-19 | Issue-22 | May 26-June 1, 2025 | Pages:16 | Price: 10/-

ರಾಷ್ಟ್ರಪತಿಗಳ ಉಲ್ಲೇಖ: ಒಂದು ಅಸಂಬದ್ಧ ನಾಟಕರಂಗ



ಕೇರಳ ಅಭಿವೃದ್ಧಿ: ಅಸಾಧ್ಯವಾದುದು ಇಲ್ಲಿ ಸಾಧ್ಯ





ಪುತ್ತೂರು: ರೋಗಿಯ ಕುಟುಂಬ, ವೈದ್ಯರ ವಾಗ್ವಾದಕ್ಕೆ ಕೋಮು ಬಣ್ಣ: ಪ್ರಶ್ನಿಸಿದವರ ಮೇಲೆಯೇ ಕೇಸ್!

ಬಂಡಾಯದ ಬಾನುಗೆ ಬೂಕರ್ ಪ್ರಶಸ್ತಿ



ಪಹಲ್ಗಾವ್: ರಾಷ್ಟ್ರೀಯ ಸಹಮತದ ಉತ್ಪಾದನೆ ಸಲ್ಲದು

ಜಗತ್ತಿನ ಮೊತ್ತ ಮೊದಲ ದುಡಿವ ಜನರ ರಾಜಕೀಯ ಪಕ್ಷ ಜನತೆಯ ಸಾರ್ವಭೌಮತೆ, ಸಾರ್ವತ್ರಿಕ ಮತದಾನದ ಪ್ರತಿಪಾದನೆ

ಭಾಗ 27

ಜಿ.ಎನ್. ನಾಗರಾಜ್

"ಸಂಸತ್ ಸದಸ್ಯರುಗಳೇ, ನಗರದ ಶ್ರೀಮಂತರೇ,

ನಿಮ್ಮ ಸಡಗರದ ರೇಶ್ಮೆ, ವೆಲ್ವೆಟ್ ಬಟ್ಟೆಗಳು, ಝುಗಮಗಿಸುವ ಚಿನ್ನದ, ಬೆಳ್ಳಿಯ ಕಲಾಪತ್ತಿನ ಎಳೆಗಳು ಎಲ್ಲಿಂದ ಬಂದವು? ಅವು ನಮ್ಮ ಹುಬ್ಬಿನಿಂದ ಹರಿದ ಬೆವರಿನ, ನಮ್ಮ ಬೆನ್ನು ಹೊತ್ತ ಭಾರದ, ಹೊಟ್ಟೆಯ ಹಸಿವಿನ ಫಲವಲ್ಲವೇ?

ನಮ್ಮ ಹಸಿವು ಎಂತಹ ಕಲ್ಲಿನ ಕೋಟೆಗಳನ್ನು ಒಡೆದು ಹಾಕುತ್ತದೆ. ಬದುಕಿನ ತುರ್ತುಗಳು ಎಲ್ಲ ಕಾನೂನುಗಳು, ಸರ್ಕಾರಗಳನ್ನು ಕಿತ್ತು ಹಾಕಿಬಿಡುತ್ತವೆ.

ಅವರು ಇನ್ನೂ ಕಿವುಡರಾಗಿದ್ದರೆ ಅವರಿಗೆ ಹೇಳಿ ತುಳಿತಕ್ಕೊಳಗಾದವರ ಕಣ್ಣೀರು ಕೋಡಿಯಾಗಿ ಅವರ ಬಂಗಲೆಗಳ ಅಡಿಪಾಯಗಳನ್ನೇ ಕಿತ್ತೆಸೆದು ಬಿಡುತ್ತದೆ."


"ಪೀತಾಂಬರಗಳ
ಹೊದೆಯುವರಲ್ಲಿ
ಕೌಪೀನಕೆ ಚಿಂದಿಯು ಸಿಗದಿಲ್ಲಿ"
"ಹೊಟ್ಟೆಯ ಪಾಡಿಗೆ ಕಾವಿಯನುಟ್ಟು
ಸುಖ ಸಂಪತ್ತನು ಕೊಂಡವರು"
"ಬಡವರ ಬೆಂಕಿಯು ನಾಲಗೆ ಚಾಚಿ
ಶ್ರೀಮಂತರನಪ್ಪಿತು ಬಾಚಿ!
ಬಡವರ ಸಿಟ್ಟದು ಏನು ಪಿಶಾಚಿ
ಬಡಬಾಗ್ನಿಯೇ ತಲೆತಗ್ಗಿತು ನಾಚಿ
ಶ್ರೀಮಂತರ ಸೌಧಂಗಳ ನೆತ್ತಿ
ಸೀದುದು ಬಡಹೊಟ್ಟೆಯ ಉರಿ ಹೊತ್ತಿ"

ಇದು ರಾಷ್ಟ್ರ ಕವಿ ಕುವೆಂಪುರವರ ಕಾವ್ಯದ ಸಿಡಿನುಡಿ.

"ಗದರುತ್ತಿಹುದು
ಗರ್ಜಿಸುತಿಹುದು
ಬಡವರ ಬಗ್ಗರ
ತುತ್ತಿನ ಚೀಲದ
ಒಳಗಿನ ಒಳಗಿನ
ಒಳದನಿಯೊಂದು "

ಈ ಕವನದ ಈ ಸಾಲುಗಳು ಕವಿ ಬೇಂದ್ರೆಯವರದು.

ಕುವೆಂಪುರವರು, ಬೇಂದ್ರೆಯವರು ಇಪ್ಪತ್ತನೆಯ ಶತಮಾನದ ಕವಿಗಳು. ಇಪ್ಪತ್ತನೆಯ ಶತಮಾನದ ನಂತರ ಎಚ್ಚೆತ್ತ ಭಾರತದ ಕಾರ್ಮಿಕರು, ಕೂಲಿಕಾರರು ಇಂತಹ ಮಾತುಗಳನ್ನಾಡುತ್ತಿದ್ದಾರೆ. ಕಾರ್ಮಿಕ ಸಂಘಗಳು ಬೆಳವಣಿಗೆ ಕಂಡ, ಮಾರ್ಕ್ಸ್‌ವಾದ ಬೆಳವಣಿಗೆ ಕಂಡ 19ನೇ ಶತಮಾನದ ನಂತರ ಯುರೋಪಿನ ಕಾರ್ಮಿಕರು ತಮ್ಮ ಶೋಷಕರ ವಿರುದ್ಧ ಬೆಂಕಿ ಉಗುಳುವ ಇಂತಹ ಮಾತುಗಳನ್ನಾಡಿದ್ದಾರೆ.



ಆದರೆ ಮೊದಲು ಉಲ್ಲೇಖಿಸಿದ ಮಾತುಗಳು 17 ನೆಯ ನಾಲ್ಕು ಶತಮಾನದ ಹಿಂದಿನ ಮಾತುಗಳು. ವಿಶ್ವದೆಲ್ಲೆಡೆ ರಾಜರುಗಳ ಆಡಳಿತ ಮೆರೆಯುತ್ತಿದ್ದ ಕಾಲ. ರಾಜರುಗಳಿಗೆ ವಿಧೇಯತೆ, ಭಕ್ತಿಯಿಂದ ಕಾಲಿಗೆ ಬೀಳುವ ಕಾಲ. ಅಂದಿನ ಬ್ರಿಟನ್‌ನಲ್ಲಿ ಸಾಮಂತರು, ಜಹಗೀರುದಾರರು, ಜಮೀನುದಾರರಗಳಿಂದ ತುಂಬಿದ್ದ ಪಾರ್ಲಿಮೆಂಟ್ ಸದಸ್ಯರು, ಅಂದು ಹೆಚ್ಚಾಗತೊಡಗಿದ್ದ ವ್ಯಾಪಾರದ ಫಲವಾಗಿ ಶ್ರೀಮಂತರಾಗಿದ್ದ ನಗರಗಳ ವ್ಯಾಪಾರಿಗಳನ್ನು ಉದ್ದೇಶಿಸಿ 17 ನೆಯ ಶತಮಾನದಲ್ಲಿ ಅಂದಿನ ರೈತರು, ಕುಶಲಕರ್ಮಿಗಳು ಹೇಳಿದ ಮಾತು. ಇಂತಹ ದುಡಿಯುವ ವರ್ಗದ ಮೊತ್ತ ಮೊದಲ ಸಂಘಟನೆ ಲೆವೆಲರ್ಸ್ (ಸಮಗೊಳಿಸುವವರು) ಹೊರಡಿಸಿದ ಒಂದು ಕರಪತ್ರದ ಮಾತುಗಳು.

ಆಗಿನ ಕಾಲದಲ್ಲಿ ರಾಜರ ವಿರುದ್ಧ ಒಂದು ಸಣ್ಣ ದನಿಯೆತ್ತಿದರೂ ರಾಜದ್ರೋಹವೆಂದು ತಕ್ಷಣವೇ ತಲೆಗಳನ್ನುರುಳಿಸುವ ಕಾಲಘಟ್ಟದಲ್ಲಿ ಈ ಮಾತುಗಳನ್ನು ಗಟ್ಟಿದನಿಯಲ್ಲಿ, ದೃಢವಾಗಿ ಪ್ರತಿಪಾದಿಸಿದರು. ಅದಕ್ಕಾಗಿ ಅಪಾರ ಕಷ್ಟ, ನಷ್ಟ, ದಬ್ಬಾಳಿಕೆ, ಜೈಲುವಾಸಗಳನ್ನು ಅನುಭವಿಸಿದರು. ಅಂದಿನವರೆಗೆ ಜಗತ್ತಿನಲ್ಲಿ ಎಂದೂ ಕೇಳರಿಯದ ಹೊಸ ರಾಜಕೀಯ ತತ್ವಗಳನ್ನು ಮಂಡಿಸಿದರು.

ದೇಶದ ಆಡಳಿತ ನಡೆಸುವ ಹಕ್ಕು, ಬಾಧ್ಯತೆ ಜನರದೇ ಹೊರತು ರಾಜನದಲ್ಲ ಎಂದು ರಾಜಪ್ರಭುತ್ವವನ್ನು ಇಲ್ಲವಾಗಿಸುವ ಜನತೆಯ ಸಾರ್ವಭೌಮತೆಯ ತತ್ವ, ಎಲ್ಲ

ಪುಟ 4 ಕ್ಕೆ

ರೈತ ದಂಗೆಯಿಂದ ಪ್ರಜಾಪ್ರಭುತ್ವ ಕ್ರಾಂತಿಯವರೆಗೆ ಲೊಲ್ಲಾರ್ಡ್ಸ್‌ಗಳಿಂದ ಲೆವಲರ್ಸ್‌ಗಳವರೆಗೆ (ಸಮಗೊಳಿಸುವವರು)

ಬೈಬಲ್‌ನ ಇಂಗ್ಲಿಷ್ ಅನುವಾದದ ಪ್ರಸಾರ ಮೂಡಿಸಿದ ಅರಿವಿನ ಪ್ರಭಾವದಿಂದ 1382 ರಲ್ಲಿ ಲಂಡನ್‌ನನ್ನು ಆಕ್ರಮಿಸುವಷ್ಟು ದೊಡ್ಡ ಪ್ರಮಾಣದ ರೈತ ದಂಗೆ ಸ್ಫೋಟಗೊಂಡಿತಲ್ಲಾ! (ಈ ಮಾಲೆಯ ಹಿಂದಿನ ಲೇಖನ ನೋಡಿ) ನಂತರ ಲೊಲ್ಲಾರ್ಡ್ಸ್‌ಗಳು ಬಹಳ ಅಪಾಯಕಾರಿ ಎಂದು ರಾಜಪ್ರಭುತ್ವ ದಮನಕಾರಿ ಕ್ರಮಗಳನ್ನು ಕೈಗೊಳ್ಳಲಾರಭಿಸಿತು.

ಬೈಬಲ್‌ನ ಇಂಗ್ಲಿಷ್ ಅನುವಾದದಲ್ಲಿ ಪಾಲ್ಗೊಂಡಿದ್ದ, ವೈಕ್ಲಿಫ್‌ರವರ ವಿಚಾರಗಳಿಗೆ ಸಹಮತರಾಗಿದ್ದ ಆಕ್ಸ್‌ಫರ್ಡ್ ವಿದ್ವಾಂಸರು, ರಾಜನ ಸೇವೆಯಲ್ಲಿದ್ದ ಹಲವು ಜಮೀನುದಾರರು, ಅಧಿಕಾರಿಗಳು ಹೆದರಿ ಹಿಂತೆಗೆದರು. ತಮ್ಮ ವಿಚಾರಗಳನ್ನು ಗುಪ್ತವಾಗಿಟ್ಟುಕೊಂಡರು. ಅವರುಗಳು ಸತ್ತಾಗ ಅವರ ಉಯಿಲು (ವಿಲ್) ನಲ್ಲಿ ವ್ಯಕ್ತವಾದ ವಿಚಾರಗಳಿಂದ ಮಾತ್ರ ಅವರು ಲೋಲ್ಲಾರ್ಡ್ಸ್ ವಿಚಾರಗಳನ್ನು ಹೊಂದಿದ್ದರು ಎಂದು ತಿಳಿಯುತ್ತಿತ್ತು.

ಆದರೆ ಲೊಲ್ಲಾರ್ಡ್ಸ್‌ಗಳು 15 ನೆಯ ಶತಮಾನದಲ್ಲಿಯೂ ರಾಜ ಪ್ರಭುತ್ವ ಹಾಗೂ ಧರ್ಮಾಧಿಕಾರಿಗಳಿಗೆ ಅಪಾಯಕಾರಿಯಾಗಿ ಕಂಡಿತ್ತು ಎಂಬುದಕ್ಕೆ ಅವರ ಮೇಲೆ ಎಸಗುತ್ತಿದ್ದ ದಾಳಿ ದಬ್ಬಾಳಿಕೆಗಳ ಸರಣಿಯೇ ಪ್ರಬಲ ಪುರಾವೆ.

1401 ರಲ್ಲಿ ಧಾರ್ಮಿಕ ಭಿನ್ನಾಭಿಪ್ರಾಯಗಳನ್ನು (ಅಂದಿನ ಭಾಷೆಯಲ್ಲಿ ಧರ್ಮಲಂಡರು, ಪಾಷಂಡಿಗಳು) ಅಲ್ಲಿಯವರೆಗೆ ಕೇವಲ ಧರ್ಮಕ್ಕೆ ಸೀಮಿತವಾದ ದೋಷವೆಂದು ಪರಿಗಣಿತವಾಗಿದ್ದುದನ್ನು, ರಾಜದ್ರೋಹ ಎಂಬ ಮಟ್ಟಕ್ಕೇರಿಸಿ ಕಾನೂನು ಮಾಡುವಷ್ಟು ಬೆಳೆಯುತ್ತಿತ್ತು.



1410 ರಲ್ಲಿ ಲೊಲ್ಲಾರ್ಡ್ ವಿಚಾರಧಾರೆಯನ್ನು ಬಿಡಲೊಪ್ಪದ ಒಬ್ಬ ಸಾಮಾನ್ಯ ಕುಶಲ ಕೆಲಸಗಾರರನನ್ನು, ಬಹಿರಂಗವಾಗಿ ಸುಡಲಾಯಿತು. 1413 ರಲ್ಲಿ ರಾಜನ ಆಪ್ತ ಮಿತ್ರನಾಗಿದ್ದ ಒಬ್ಬ ರಾಜ ಮಾನ್ಯನ ಪುಸ್ತಕವೊಂದರಲ್ಲಿ ಲೊಲ್ಲಾರ್ಡ್ ವಿಚಾರಗಳಿದ್ದವೆಂದು ಅವನನ್ನು ವಿಚಾರಣೆಗೊಳಪಡಿಸಲಾಯಿತು. ರಾಜ ಸ್ವತಃ ಒತ್ತಾಯ ಮಾಡಿದರೂ ಅವನು ರಾಜನಿಗಾಗಿ ತಾನು ಎಲ್ಲವನ್ನೂ ತ್ಯಾಗ ಮಾಡಬಲ್ಲೆ ಆದರೆ ಪೋಪರ ಚರ್ಚ್ ಮತ್ತು ಅದರ ಆಚರಣೆಗಳಿಗೆ ಮಣಿಯುವುದಿಲ್ಲ, ತನ್ನ ಲೊಲ್ಲಾರ್ಡ್ ನಂಬಿಕೆಗಳನ್ನು ಬಿಡುವುದಿಲ್ಲ ಎಂದು ಮರಣದಂಡನೆಯ ಶಿಕ್ಷೆಗೊಳಗಾದ. ಒಬ್ಬ ಲೊಲ್ಲಾರ್ಡ್ ಕುಶಲ ಕೆಲಸಗಾರನ ಸಹಾಯದಿಂದ ತಪ್ಪಿಸಿಕೊಂಡು ರಾಜನ ವಿರುದ್ಧ ದಂಗೆಯೆದ್ದು ರಾಜ ಸೈನ್ಯದಿಂದ ಸೆರೆ ಹಿಡಿಯಲ್ಪಟ್ಟ ನಂತರ ಸುಡಲ್ಪಟ್ಟ.

1428 ರಲ್ಲಿ ಕೆಂಟ್ ಎಂಬ ಪ್ರದೇಶದಲ್ಲಿ ಲೊಲ್ಲಾರ್ಡ್ ಪ್ರಚಾರಕ ವಿಲಿಯಂ ವೈಟ್ ಎಂಬುವನ ನಾಯಕತ್ವದಲ್ಲಿ ಸಾವಿರಾರು ಲೊಲ್ಲಾರ್ಡ್‌ಗಳು ಚರ್ಚ್‌ನ ಸುಲಿಗೆ, ದಬ್ಬಾಳಿಕೆಯ ವಿರುದ್ಧ ದಂಗೆ ಎದ್ದರು. ಅದನ್ನು ಸೈನ್ಯ ಕಳುಹಿಸಿ ದಮನ ಮಾಡಲಾಯಿತು. ಎಷ್ಟೆಲ್ಲ ಜನರ ಹತ್ಯೆಯಾಯಿತು ಎಂಬುದರ ವಿವರಗಳಿಲ್ಲ.

ಈ ಎಲ್ಲ ಹಿಂಸೆ ದಮನಗಳ ನಡುವೆಯೂ ಲೊಲ್ಲಾರ್ಡ್ ವಿಚಾರಧಾರೆ ರಹಸ್ಯವಾಗಿ ಹರಡುತ್ತಲೇ ಇತ್ತು. ರಾಜ ಮಾನ್ಯರ ನಡುವೆಯೂ ಅದರ ಪ್ರಭಾವ ಗಣನೀಯವಾಗಿತ್ತು.

ಹದಿನಾರನೆಯ ಶತಮಾನದ ಮೊದಲ 32 ವರ್ಷಗಳಲ್ಲಿ ಕೇವಲ ಮೂರು ಚರ್ಚ್ ಪ್ರಾಂತ್ಯಗಳ ದಾಖಲೆಗಳಲ್ಲಿ ಐನೂರಕ್ಕಿಂತ ಹೆಚ್ಚು ಲೊಲ್ಲಾರ್ಡ್‌ಗಳ ಮೇಲೆ ಚರ್ಚ್ ನ್ಯಾಯಾಲಯದಲ್ಲಿ ಕೇಸು ಹಾಕಿ ವಿಚಾರಣೆಯಲ್ಲಿ ಬಹಳಷ್ಟು ಜನರಿಂದ ತಮ್ಮ ಲೊಲ್ಲಾರ್ಡ್ ಧಾರ್ಮಿಕ ವಿಚಾರಧಾರೆಯನ್ನು ಕೈಬಿಡುತ್ತೇವೆಂದು ಪ್ರಮಾಣ ಪಡೆದು ಕೈಬಿಡಲಾಯಿತು. ಅದಕ್ಕೆ ಒಪ್ಪದ ಹತ್ತು ಜನರನ್ನು ಸುಡಲಾಯಿತು.

ಈಗಲೂ ಇಂಗ್ಲೆಂಡಿನ ಒಂದು ಪ್ರದೇಶದಲ್ಲಿ ಲೊಲ್ಲಾರ್ಡ್ ಪಿಟ್ (ಗುಂಡಿ) ಎಂಬ ಒಂದು ಜಾಗವನ್ನು ಲೊಲ್ಲಾರ್ಡ್‌ಗಳನ್ನು ಸುಟ್ಟು ಹಾಕುತ್ತಿದ್ದ ಸ್ಥಳ ಎಂದು ಗುರುತಿಸುತ್ತಾರೆ.

ವೈಕ್ಲಿಫ್ ಮತ್ತು ಲೊಲ್ಲಾರ್ಡ್ ವಿಚಾರಧಾರೆಯ ಪ್ರಭಾವ, ರೈತ ದಂಗೆಗಳ ಬಿಸಿ ಯುರೋಪಿನ ಹಲವು ಪ್ರದೇಶಗಳಲ್ಲಿ ಹರಡಿತ್ತು. ಇಂದಿನ ಜೆಕೊಸ್ಲೊವಾಕಿಯಾ ಸುತ್ತ ಮತ್ತಲಿನ ಬೊಹೆಮಿಯಾ ಎಂದು ಕರೆಯಲ್ಪಡುತ್ತಿದ್ದ ಪ್ರದೇಶದಲ್ಲಿ ಹುಸ್ಸೈಟ್ ಮತ್ತು ಅದರ ಒಂದು ಮುಂದುವರೆದ ವಿಚಾರಧಾರೆಯಾಗಿ ಟ್ಯಾಬೋರೈಟ್ಸ್ ಎಂಬ ಒಂದು ಧಾರ್ಮಿಕ ಪಂಥ ಪ್ರಭಾವಶಾಲಿಯಾಯಿತು. ಟ್ಯಾಬೊರೈಟ್ಸ್ ಪಂಥವಂತೂ ಒಬ್ಬ ಬೆಟ್ಟದ ಮೇಲೆ ಒಂದು ನಗರವನ್ನೇ ನಿರ್ಮಾಣ ಮಾಡಿದರು. ಅಲ್ಲಿ ಎಲ್ಲವೂ ಸಮುದಾಯದ ಆಸ್ತಿ, ಅಲ್ಲಿನ ನಿವಾಸಿಗಳು ತಾವೇ ಆರಿಸಿಕೊಂಡ ಆಡಳಿತ, ಧಾರ್ಮಿಕ ನೇತಾರರೂ ಜನರಿಂದ ಆಯ್ಕೆಯಾಗಬೇಕೆಂಬ ನಿಯಮಗಳನ್ನು ರೂಪಿಸಿಕೊಂಡರು. ಈ ಪ್ರದೇಶ ರೋಮಿನ ಮತ್ತು ಆ ಪ್ರದೇಶದ ಸೈನ್ಯದ ಧಾಳಿಯಲ್ಲಿ ದಮನವಾಗುವವರೆಗೆ ಎರಡು ದಶಕಗಳ ಕಾಲ ಏಳಿಗೆಯನ್ನು ಕಂಡಿತು.

ಜರ್ಮನಿಯಲ್ಲಿ ಹದಿನಾರನೇ ಶತಮಾನದಲ್ಲಿ ಮಾರ್ಟಿನ್ ಲೂಥರ್, ಕಾಲ್ವಿನ್ ರೂಪಿಸಿದ ಪ್ರಾಟೆಸ್ಟೆಂಟ್ ವಿಚಾರಗಳು ಯುರೋಪಿನಲ್ಲಿ ಪ್ರಭಾವ ಬೀರಲಾರಂಬಿಸಿದ ನಂತರ ಬ್ರಿಟನ್‌ನಲ್ಲಿ ನಡೆದ ಚರ್ಚ್ ಸುಧಾರಣೆಯ ವಿವಿಧ ಪಂಥಗಳೊಡನೆ ಸೇರಿ ಹೋಯಿತು.

ಇಂಗ್ಲೆಂಡ್‌ನ ಪ್ರಜಾಪ್ರಭುತ್ವ ಕ್ರಾಂತಿಯಲ್ಲಿ ಪ್ರಬಲವಾಗಿದ್ದ ಪ್ಯೂರಿಟನ್ ಪಂಥದ ಹಲವು ಒಳಪಂಥಗಳ ಮೇಲೆ ಪ್ರಭಾವ ಬೀರಿತು. ಲೆವಲರ್ಸ್ ಎಂಬುದು ರೈತ ದಂಗೆ ಎತ್ತಿದ ಪ್ರಶ್ನೆಗಳಿಂದ, ಜಾನ್ ಬಾಲ್‌ನ ವಿಚಾರಗಳಿಂದ ಪ್ರಭಾವಿತರಾದ ಒಂದು ಪಂಥ. ಇಂಗ್ಲೆಂಡ್‌ನ ಪ್ರಜಾಪ್ರಭುತ್ವ ಕ್ರಾಂತಿಯಲ್ಲಿ ರಾಜನ ಸೋಲಿನಲ್ಲಿ ಮುಖ್ಯ ಪಾತ್ರ ವಹಿಸಿದ ಪಂಥ.

ರೋಗಿಯ ಕುಟುಂಬ ಮತ್ತು ವೈದ್ಯರ ನಡವಿನ ವಾಗ್ವಾದಕ್ಕೆ 'ಹಿಂದು–ಮುಸ್ಲಿಂ' ಬಣ್ಣ

ಪ್ರಶ್ನಿಸಿದ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ, ವಾರ್ತಾ ಭಾರತಿ ಪತ್ರಿಕೆಯ ಪ್ರಧಾನ ಸಂಪಾದಕರ ವಿರುದ್ಧ ಎಫ್.ಐ.ಆರ್!!

ವೈದ್ಯರು ಮತ್ತು ರೋಗಿ ಸಂಬಂಧಿಗಳ ನಡುವಿನ ವ್ಯಾಜ್ಯವನ್ನು ಹಿಂದು–ಮುಸ್ಲಿಂ ಎಂದು ವಿಭಜಿಸಿ ಅದನ್ನು ವಿಪರೀತಕ್ಕೆ ಒಯ್ಯಲು ಬಯಸಿದ 'ಸ್ವಯಂ ಸೇವಕರ' ಉದ್ದೇಶಗಳು ಪ್ರಶ್ನಾರ್ಹ ಅಲ್ಲವೇ? ಹಾಗೆ ಪ್ರಶ್ನಿಸಿ ಸಮಾಜದ ಸ್ವಾಸ್ಥ್ಯ ಕಾಪಾಡಬೇಕು ಎಂದವರ ಮೇಲೆಯೇ ಹರಿಹಾಯ್ದು ಪಟ್ಟುಬಿಡದೆ ಸುಳ್ಳು ಮೊಕದ್ದಮೆ ಹೂಡಿದ ಹಿಂದಿನ ಹುನ್ನಾರಗಳೇನು? ಪುತ್ತೂರು ಸರಕಾರಿ ಆಸ್ಪತ್ರೆಯಲ್ಲಿ ವೈದ್ಯರು ಮತ್ತು ರೋಗಿ ಸಂಬಂಧಿಗಳ ನಡುವಿನ ವಾಗ್ವಾದ ಪಡೆದ ತಿರುವುಗಳೇನು?

ಸಂಜಯ

ಪುತ್ತೂರು ಸರಕಾರಿ ಆಸ್ಪತ್ರೆಯಲ್ಲಿ ವೈದ್ಯರು ಹಾಗೂ ರೋಗಿಗಳ ಕುಟುಂಬದ ನಡುವೆ ವಾಗ್ವಾದ ನಡೆದಿತ್ತು. ಅದು ವೈದ್ಯರು ಹಾಗು ರೋಗಿಗಳ ನಡುವಿನ ಜಗಳ ಆಗಿ ಪರಿಗಣಿತವಾಗುತ್ತದೆ ವಿನಃ ರೋಗಿಯ ಕಡೆಯವರ ಜಾತಿ, ಧರ್ಮದ ಗುರುತಿನೊಂದಿಗೆ ತಳಕು ಹಾಕಿಕೊಳ್ಳುವುದಿಲ್ಲ. ಆದರೆ ಇಲ್ಲಿ "ವೈದ್ಯರು ಹಾಗೂ ರೋಗಿಯ ಕುಟುಂಬ" ಹೋಗಿ "ವೈದ್ಯರು ಹಾಗೂ ಮುಸ್ಲಿಮರು" ಎಂಬಂತೆ ಬದಲಾಗುತ್ತದೆ! ಇದನ್ನು ಸಿಪಿಐ(ಎಂ) ದಕ್ಷಿಣ ಕನ್ನಡ ಜಿಲ್ಲಾ ಸಮಿತಿಯ ಪರವಾಗಿ ಕಾರ್ಯದರ್ಶಿ ಮುನೀರ್ ಕಾಟಿಪಳ್ಳ ಬಹಿರಂಗವಾಗಿಯೇ ಪ್ರಶ್ನಿಸಿದರು. ಇದರಿಂದ ತೀವ್ರ ಮುಜುಗರಕ್ಕೊಳಗಾದ "ಸ್ವಯಂ ಸೇವಕ" ವೈದ್ಯರುಗಳು, ಮುನೀರ್ ಕಾಟಿಪಳ್ಳ ಹಾಗೂ ಹೇಳಿಕೆಯನ್ನು ಪ್ರಕಟಿಸಿದ 'ವಾರ್ತಾ ಭಾರತಿ' ಪತ್ರಿಕೆ ಸಂಪಾದಕರ ವಿರುದ್ದ ಪೊಲೀಸರಿಗೆ ದೂರು ಕೊಟ್ಟು, ಎಪ್.ಐ.ಆರ್ ದಾಖಲಿಸುವುದರಲ್ಲಿ ಯಶಸ್ವಿಯಾದರು.

ಕರಾವಳಿ ಕೋಮುವಾದದ ಪ್ರಯೋಗ ಶಾಲೆಯಾದರೆ, ಪುತ್ತೂರು ಆ ಪ್ರಯೋಗ ಶಾಲೆಯ ರಾಜಧಾನಿ ಇದ್ದಂತೆ. ಸಂಘಪರಿವಾರದ ನಿಯಂತ್ರಣ ಕೊಠಡಿಯ ಹೆಚ್ಚಿನ ಮೆದುಳುಗಳು ಪುತ್ತೂರುನಲ್ಲಿದೆ. ಪುತ್ತೂರಿನ ಪ್ರತಿಯೊಂದು ಗ್ರಾಮ, ಸಂಸ್ಥೆ, ವಿಭಾಗಗಳೂ ಸಂಘಪರಿವಾರದ ಉಕ್ಕಿನ ಹಿಡಿತದಲ್ಲಿದೆ. ಸಂಘಪರಿವಾರದ ಎಲ್ಲಾ ಪ್ರಯೋಗಗಳು ಪುತ್ತೂರು, ಸುಳ್ಯ ತಾಲೂಕುಗಳಲ್ಲಿ ಶೇಕಡಾ ನೂರು ಪರೀಕ್ಷೆಗೆ ಒಳಪಟ್ಟು ಯಶಸ್ಸು ಕಂಡಿದೆ. ಅದರ ಪರಿಣಾಮವೇ ಈಗ ಸದ್ದು ಮಾಡುತ್ತಿರುವ ಪುತ್ತೂರು ವೈದ್ಯರ ನಿರ್ಲಜ್ಜ ಕೋಮು ರಾಜಕಾರಣದ ಪ್ರಕರಣ. ಇಲ್ಲಿ 'ಸಂಘ'ದ ಅಣತಿ ಮೀರಿ ಯಾವುದೂ ನಡೆಯುವುದಿಲ್ಲ. ಇಲ್ಲಿನ ಹಲವು ವೈದ್ಯರುಗಳು ಆ ಸಂಘದ ಬದ್ದ ಕಾರ್ಯಕರ್ತರಾಗಿದ್ದಾರೆ. ಅವರು ಯಾವುದೆ ಫಿಲ್ಟರ್ ಇಲ್ಲದೆ ಸಂಘಪರಿವಾರದ ಪರ ಕೆಲಸ ಮಾಡುತ್ತಾರೆ. ಅಲ್ಲಿಯ ಭಾರತ ವೈದ್ಯರ ಸಂಘ (ಐಎಂಎ)ದ ನಾಯಕತ್ವವೂ ಸಂಘಪರಿವಾರದ ಸಿದ್ಧಾಂತದ ಪಾಲಕರ ಕೈಯಲ್ಲಿದೆ. ಹಲವು ಬಾರಿ ವೈದ್ಯರ ಸಂಘವು ಸಂಘಪರಿವಾರದ ಸಾಮೂಹಿಕ ಸಂಘಟನೆಯಂತೆ ನಡೆದುಕೊಂಡ ಉದಾಹರಣೆಗಳಿವೆ.

ರೋಗಿಯ ಕುಟುಂಬ ವೈದ್ಯರ ನಡವಿನ ವಾಗ್ವಾದಕ್ಕೆ "ಹಿಂದುತ್ವ– ಮುಸ್ಲಿಂ" ಬಣ್ಣ

ವೈದ್ಯರು ಹಾಗೂ ರೋಗಿಗಳ ಕುಟುಂಬದ ನಡುವೆ ವಾಗ್ವಾದ, ಮಾತಿನ ಚಕಮಕಿ ನಡೆಯುವುದು ಹೊಸ ವಿದ್ಯಮಾನ ಏನಲ್ಲ. ಅದು ಹಲ್ಲೆ, ಸೊತ್ತುಗಳಿಗೆ ಹಾನಿ ಸಂಭವಿಸಿದ ಸಂದರ್ಭದಲ್ಲಿ ಮಾತ್ರ ಪೊಲೀಸ್ ಠಾಣೆ ತಲುಪುತ್ತದೆ. ಖಾಸಗಿ ವೈದ್ಯಕೀಯ ರಂಗದ ಆಡಂಬೊಲ ಆಗಿರುವ ಮಂಗಳೂರು, ಪುತ್ತೂರು ಸೇರಿದಂತೆ ಕರಾವಳಿಯಲ್ಲಿ ಇಂತಹ ಘಟನೆಗಳು ಸಹಜ ಎಂಬಂತೆ ನಡೆಯುತ್ತಿರುತ್ತವೆ. ವೈದ್ಯರ ನಿರ್ಲಕ್ಷ್ಯ, ವಿಪರೀತ ಬಿಲ್ ಗಳ ಗಂಭೀರ ಆರೋಪದ ಸಂದರ್ಭ ಅದು ತೀವ್ರ ಸ್ವರೂಪ ಪಡೆಯುವುದು, ಪೊಲೀಸ್ ಮಧ್ಯ ಪ್ರವೇಶ ಆಗಿರುವುದೂ ಇದೆ.

ಈ ಎಲ್ಲಾ ಸಂದರ್ಭದಲ್ಲಿ ಅದು ವೈದ್ಯರು ಹಾಗು ರೋಗಿಗಳ ನಡುವಿನ ಜಗಳ ಆಗಿ ಪರಿಗಣಿತವಾಗಿತ್ತು. ಅದು ರೋಗಿಯ ಕಡೆಯವರ ಜಾತಿ, ಧರ್ಮದ ಗುರುತಿನೊಂದಿಗೆ ತಳಕು ಹಾಕಿಕೊಂಡಿರಲಿಲ್ಲ. ಪುತ್ತೂರು ಸರಕಾರಿ ಆಸ್ಪತ್ರೆಯಲ್ಲಿ ನಡೆದಿರುವುದೂ ಅಂತಹದ್ದೊಂದು ಸಣ್ಣ ಮಾತಿನ ಚಕಮಕಿ.



ಅಂದು ಆಸ್ಪತ್ರೆಯಲ್ಲಿ ನಡೆದದ್ದೇನು?

ಪುತ್ತೂರು ಸರಕಾರಿ ಆಸ್ಪತ್ರೆಯಲ್ಲಿದ್ದ ಬಾಣಂತಿಯನ್ನು ಕಾಣಲು ಆಕೆಯ ಕುಟುಂಬದ ತಾಯಿ, ಮಗ ಬಂದಿದ್ದಾರೆ. ಅವರು ಬಾಣಂತಿಯನ್ನು ಭೇಟಿಯಾದ ಸಮಯ ಸಂದರ್ಶಕರ ಸಮಯ ಅಲ್ಲ ಎಂಬುದು ಸರಕಾರಿ ವೈದ್ಯಾಧಿಕಾರಿ ಡಾ. ಆಶಾ ಪುತ್ತೂರಾಯ ಅವರ ಆಕ್ಷೇಪ. ಈ ಆಕ್ಷೇಪ ಮಾತಿನ ಚಕಮಕಿಗೆ ಕಾರಣ ಆಗಿದೆ. ಸರಕಾರಿ ವೈದ್ಯರು ಪೊಲೀಸರನ್ನು ಕರೆಸಿದ್ದಾರೆ. ಪೊಲೀಸರು ಎರಡೂ ಕಡೆಯವರನ್ನು ಠಾಣೆಗೆ ಕರೆಸಿದ್ದಾರೆ. ಸರಕಾರಿ ವೈದ್ಯೆಯ ದೂರಿನ ಕುರಿತು ರೋಗಿಯ ಕುಟುಂಬವನ್ನು ವಿಚಾರಿಸಿದ್ದಾರೆ. ತಾಯಿ, ಮಗನಿಂದ ಮುಚ್ಚಳಿಕೆ ಬರೆಸಿಕೊಂಡಿದ್ದಾರೆ. ಎಚ್ಚರಿಕೆ ನೀಡಿ ಕಳುಹಿಸಿದ್ದಾರೆ. ಮಗನ ಮೊಬೈಲ್ ನಲ್ಲಿದ್ದ ಮಾತಿನ ಚಕಮಕಿಯ ವೀಡಿಯೊ ತುಣಕುನ್ನು ಡಿಲೀಟ್ ಮಾಡಿಸಿದ್ದಾರೆ.



ಈ ಮೂಲಕ ಪ್ರಕರಣ ಸಾಮಾನ್ಯವಾಗಿ ಹೇಗೆ ಮುಗಿಯಬೇಕೊ, ಹಾಗೆ ಮುಗಿದಿದೆ.

ವೈದ್ಯರಲ್ಲಿ ಕೆರಳಿದ "ಧರ್ಮ" ಪ್ರಜ್ಞೆ, ಸಂಘಪರಿವಾರದ ಪ್ರವೇಶ

ದೂರುದಾರೆ ಸರಕಾರಿ ವೈದ್ಯೆ ಡಾ.ಆಶಾ ಪುತ್ತೂರಾಯ ಅವರ ಪತಿ ಪುತ್ತೂರಾಯ ಪುತ್ತೂರಿನಲ್ಲಿ ಖಾಸಗಿ ನರ್ಸಿಂಗ್ ಹೋಂ ನಡೆಸುತ್ತಾರೆ. ಸಂಘಪರಿವಾರದೊಂದಿಗೆ ಬಹಿರಂಗ ಒಡನಾಟವನ್ನೂ ಹೊಂದಿದ್ದಾರೆ. ಪುತ್ತೂರು ಸರಕಾರಿ ಆಸ್ಪತ್ರೆಯಲ್ಲಿ ನಡೆದಿರುವ ಮಾತಿನ ಚಕಮಕಿ ಇವರ ಮೂಲಕ ಪುತ್ತೂರು ವೈದ್ಯರ ಸಂಘದ ಗಮನಕ್ಕೆ ಬರುತ್ತದೆ. ಈ ಸಂಘದ ಕಾರ್ಯದರ್ಶಿ ಡಾ. ಗಣೇಶ್ ಪ್ರಸಾದ್ ಮುದ್ರಾಜೆಯವರೂ ಸಂಘಪರಿವಾರದ ಒಡನಾಟ ಹೊಂದಿದವರು. ಸರಕಾರಿ ಆಸ್ಪತ್ರೆಯಲ್ಲಿ ಮಾತಿನ ಚಕಮಕಿ ನಡೆಸಿದ ತಾಯಿ, ಮಗ ಮುಸ್ಲಿಂ ಎಂಬುದು ಗಮನಕ್ಕೆ ಬಂದ ತಕ್ಷಣ ಇವರೊಳಗಡೆಯ 'ರಾಜಕಾರಣ' ಎಚ್ಚೆತ್ತುಕೊಳ್ಳುತ್ತದೆ. ಮುಚ್ಚಳಿಕೆಯ ಮೂಲಕ ಮುಕ್ತಾಯಗೊಂಡಿದ್ದ ಪ್ರಕರಣಕ್ಕೆ ಮರುಜೀವ ನೀಡಲಾಗುತ್ತದೆ. ವೈದ್ಯೆಯೊಂದಿಗೆ ಮಾತಿನ ಚಕಮಕಿ ನಡೆಸಿದ (ಮುಸ್ಲಿಂ) ಕುಟುಂಬದ ಮೇಲೆ ಕಠಿಣ ಕಾಯ್ದೆಗಳಡಿ ಪ್ರಕರಣ ದಾಖಲಿಸಿ ತಕ್ಷಣ ಬಂಧಿಸಬೇಕು ಎಂಬ ಬೇಡಿಕೆ ಮುಂದಿಡಲಾಗುತ್ತದೆ. ಪುತ್ತೂರು ತಾಲೂಕಿನಾದ್ಯಂತ ವೈದ್ಯಕೀಯ ಸೇವೆ ಬಂದ್ ಮಾಡಲಾಗುತ್ತದೆ. ಪೊಲೀಸ್ ಠಾಣೆಗೆ ಮುತ್ತಿಗೆ ಹಾಕಲಾಗುತ್ತದೆ.

ಈ ದಿಢೀರ್ ಪ್ರತಿಭಟನೆ, ಪೊಲೀಸ್ ಠಾಣೆ ಘೇರಾವ್‌ಗೆ ಸಂಘಪರಿವಾರ ಸಹಭಾಗಿತ್ವ ನೀಡುತ್ತದೆ. ನೋಡು ನೋಡುತ್ತಲೆ ಪ್ರಕರಣ ಗಂಭೀರ ಸ್ವರೂಪ ಪಡೆಯುತ್ತದೆ. 'ಮುಸ್ಲಿಂ ಕುಟುಂಬದ ಬಂಧನ ಆಗದೆ ಸ್ಥಳದಿಂದ ತೆರಳುವುದಿಲ್ಲ' ಎಂದು ವೈದ್ಯರ ಸಂಘದ ಪ್ರಮುಖರು, ಸಂಘಪರಿವಾರದ ಅರುಣ್ ಕುಮಾರ್ ಪುತ್ತಿಲ ಮತ್ತಿತರರು ಘೋಷಿಸುತ್ತಾರೆ. ಪ್ರತಿಭಟನೆ ಗಂಟೆಗಳ ಕಾಲ ಮುಂದುವರಿಯುತ್ತದೆ. ಅವರಿಂದ ಮುಸ್ಲಿಂ ದ್ವೇಷದ ಮಾತುಗಳು ಹೊರಡುತ್ತವೆ. ಕೊನೆಗೆ ಠಾಣೆಯ ಮುಂಭಾಗ ರಸ್ತೆ ತಡೆಯೂ ನಡೆಯುತ್ತದೆ. ಸರಕಾರಿ ವೈದ್ಯರು, ಖಾಸಗಿ ವೈದ್ಯರು, ಸಂಘಪರಿವಾರದ ಜನಗಳು ಜಂಟಿಯಾಗಿ ನಡೆಸಿದ ಈ ಪ್ರತಿಭಟನೆ ತೀವ್ರ ಸ್ವರೂಪ, ಆಯಾಮಗಳನ್ನು ಪಡೆಯುತ್ತದೆ. ವಿಷಯ "ವೈದ್ಯರು ಹಾಗೂ ರೋಗಿಯ ಕುಟುಂಬ" ಹೋಗಿ "ವೈದ್ಯರು ಹಾಗೂ ಮುಸ್ಲಿಮರು" ಎಂದಾಗಿ ಬದಲಾಗುತ್ತದೆ. ಅಲ್ಲಿಗೆ ಸಂಘಪರಿವಾರದ ಪ್ರಯೋಗಶಾಲೆಯ ರಾಜಧಾನಿ ಪುತ್ತೂರಿನಲ್ಲಿ ಹೊಸ ಪ್ರಯೋಗದ ಪರೀಕ್ಷೆ ಯಶಸ್ವಿಯಾಗಿ ನಡೆಯುತ್ತದೆ. ಪೊಲೀಸರು ಬೇರೆ ದಾರಿ ಕಾಣದೆ ರೋಗಿಯ ಕುಟುಂಬದ ತಾಯಿ, ಮಗನ ಮೇಲೆ ವೈದ್ಯಕೀಯ ಸೇವೆ ಸುರಕ್ಷಾ ಕಾಯ್ದೆ ಸಹಿತ ವೈದ್ಯ "ಪರಿವಾರ" ಆದೇಶಿಸಿದ ಎಲ್ಲಾ ಕಠಿಣ ಸೆಕ್ಷನ್ ಗಳನ್ನು ಒಳಗೊಂಡು ಎಫ್.ಐ.ಆರ್ ದಾಖಲಿಸುತ್ತಾರೆ.

ವೈದ್ಯಕೀಯ ಧರ್ಮ ಕೈ ಬಿಟ್ಟದ್ದು ಎಷ್ಟು ಸರಿ?

ತಾಲೂಕು ವೈದ್ಯರ ಸಂಘ ಪ್ರಕರಣಕ್ಕೆ ಮತೀಯ ಬಣ್ಣ ಬಳಿದದ್ದು, ಮುಸ್ಲಿಂ ದ್ವೇಷಕ್ಕೆ ಕುಖ್ಯಾತರಾದ ಸಂಘಪರಿವಾರದ ಮುಖಂಡರ ಜೊತೆ ಸೇರಿ ಪ್ರತಿಭಟನೆ ಹಮ್ಮಿಕೊಂಡದ್ದು, ಮತೀಯ ದ್ವೇಷದ ಮಾತುಗಳಿಗೆ ಅವಕಾಶ ಮಾಡಿಕೊಟ್ಟದ್ದು, ಮಾತಿನ ಚಕಮಕಿಯಂತಹ ಸಾಮಾನ್ಯ ಘಟನೆಗೆ ತಾಲೂಕಿನಾದ್ಯಂತ ವೈದ್ಯಕೀಯ ಸೇವೆ ಸ್ಥಗಿತಗೊಳಿಸಿದ್ದು, ಮುತ್ತಿಗೆ, ರಸ್ತೆ ತಡೆಯಂತಹ ತೀವ್ರರೀತಿಯ ಪ್ರತಿಭಟನೆ ನಡೆಸಿದ್ದು ಎಷ್ಟು ಸರಿ ಎಂಬ ಪ್ರಶ್ನೆ ನಾಗರಿಕ ವಲಯದಲ್ಲಿ ಸಹಜವಾಗಿಯೆ ಮೂಡಿದೆ. ಈ ಪ್ರಶ್ನೆಯನ್ನು ಸಿಪಿಐ(ಎಂ) ದಕ್ಷಿಣ ಕನ್ನಡ ಜಿಲ್ಲಾ ಸಮಿತಿಯು ಮಾಧ್ಯಮ ಹೇಳಿಕೆಯ ಮೂಲಕ ಬಹಿರಂಗವಾಗಿಯೆ ಕೇಳಿದೆ. ಕಾರ್ಯದರ್ಶಿ ಮುನೀರ್ ಕಾಟಿಪಳ್ಳ ಅವರು ನೀಡಿದ ಹೆಳಿಕೆಯಲ್ಲಿ ವೈದ್ಯರ ನಡೆಯನ್ನು ಖಂಡಿಸಿದರು. ಇದು ಜಿಲ್ಲೆಯಲ್ಲಿ ಚರ್ಚೆಯನ್ನು ಹುಟ್ಟುಹಾಕಿತು. ವೈದ್ಯರ ಸಂಘದ ಕಾರ್ಯದರ್ಶಿ ಮುದ್ರಾಜೆ, ಹಾಗೂ ದೂರುದಾರೆ ಸರಕಾರಿ ವೈದ್ಯೆಯ ಪತಿ ಡಾ. ಪುತ್ತೂರಾಯ ಈ ಹಿಂದೆ ನೀಡಿದ್ದ ಮತೀಯವಾದಿ ಹೇಳಿಕೆ, ಸಂಘಪರಿವಾರದ ಪರವಾದ ನಿಲುವುಗಳನ್ನು ತಮ್ಮ ಹೇಳಿಕೆಯಲ್ಲಿ ಮುನೀರ್ ಉಲ್ಲೇಖಿಸಿದ್ದರು. ಇದರಿಂದ ತೀವ್ರ ಮುಜುಗರಕ್ಕೊಳಗಾದ "ಸ್ವಯಂ ಸೇವಕ" ವೈದ್ಯರುಗಳು ಮುನೀರ್ ಕಾಟಿಪಳ್ಳ ಹಾಗೂ ಹೇಳಿಕೆ ಪ್ರಕಟಿಸಿದ ವಾರ್ತಾ ಭಾರತಿ ಪತ್ರಿಕೆಯ ಸಂಪಾದಕ ಅಬ್ದುಸ್ಸಲಾಂ ಪುತ್ತಿಗೆ ವಿರುದ್ದ ದೂರು ದಾಖಲಿಸಿದರು. ಕೋಮು ಸಂಘರ್ಷಕ್ಕೆ ಕುಮ್ಮಕ್ಕು, ವೈದ್ಯಕೀಯ ಸೇವಾ ಸುರಕ್ಷಾ ಕಾಯ್ದೆಯಂತಹ ಕಠಿಣ ಕಾಯ್ದೆಯಡಿ ಪ್ರಕರಣ ದಾಖಲಿಸಬೇಕಾಗಿ ಪಟ್ಟು ಹಿಡಿದರು.

ಆದರೆ, ಸಿಪಿಐ(ಎಂ) ದಕ್ಷಿಣ ಕನ್ನಡ ಜಿಲ್ಲಾ ಸಮಿತಿಯ ಕಾರ್ಯದರ್ಶಿ ಮುನೀರ್ ಕಾಟಿಪಳ್ಳ ಹೇಳಿಕೆಯಲ್ಲಿ ನಿಯಮಗಳ ಉಲ್ಲಂಘನೆಯ ಯಾವುದೇ ಅಂಶಗಳು ಇಲ್ಲದೆ ಇರುವುದರಿಂದ ಪೊಲೀಸರು ಎಫ್.ಐ.ಆರ್. ದಾಖಲಿಸುವುದು ಸಾಧ್ಯ ಇಲ್ಲ ಎಂದು ಎನ್.ಸಿ.ಆರ್. ದಾಖಲಿಸಿ ಸುಮ್ಮನಾದರು. ಆದರೂ ಪಟ್ಟು ಬಿಡದ ವೈದ್ಯ "ಪರಿವಾರ" ಮೇಲಿನ ಅಧಿಕಾರಿಗಳಿಗೆ ಮನವಿ, ಖಂಡನಾ ಹೇಳಿಕೆಯನ್ನು ನೀಡಿ ತಿದ್ದುಪಡಿ ಎಫ್.ಐ.ಆರ್ ದಾಖಲಿಸುವಂತೆ ಪಟ್ಟು ಹಿಡಿಯಿತು. 'ಭಾರತ ವೈದ್ಯರ ಸಂಘ'ದ ಮಂಗಳೂರು ಘಟಕವೂ ಕೈ ಜೋಡಿಸಿತು. ಆದರೂ, ಪೊಲೀಸರು ಎಫ್.ಐ.ಆರ್ ದಾಖಲಿಸಲು ಅವಕಾಶ ಇಲ್ಲ ಎಂದು ಕೈ ಚೆಲ್ಲಿದರು. ಇದರಿಂದ ಹತಾಶರಾದ ವೈದ್ಯ "ಪರಿವಾರ" ದ ಕಾರ್ಯದರ್ಶಿ ಡಾ. ಗಣೇಶ್ ಪ್ರಸಾದ್ ಮುದ್ರಾಜೆ, ಮುನೀರ್ ಕಾಟಿಪಳ್ಳರಿಗೆ ಪಾಠ ಕಲಿಸಿಯೇ ಸಿದ್ಧ ಎಂದು ನ್ಯಾಯಾಲಯದಲ್ಲಿ ಖಾಸಗಿ ದೂರು ದಾಖಲಿಸಿದರು. ನ್ಯಾಯಾಲಯ ಎಫ್.ಐ.ಆರ್. ಹಾಕಲು ಸೂಚನೆ ಹೊರಡಿಸಿತು. ಮನವಿಯಲ್ಲಿದ್ದ ಸೆಕ್ಷನ್ ಗಳ ಅಡಿ ಮುನೀರ್ ಕಾಟಿಪಳ್ಳ ಹಾಗೂ ವಾರ್ತಾ ಭಾರತಿಯ ಸಂಪಾದಕರ ಮೇಲೆ ಮೊಕದ್ದಮೆ ದಾಖಲಿಸುವುದರಲ್ಲಿ ಯಶಸ್ವಿಯಾದರು!

ಉಲ್ಟಾ ಹೊಡೆದ ವೈದ್ಯ "ಪರಿವಾರ"ದ ಲೆಕ್ಕಾಚಾರ, ಎದ್ದು ಬಂದ ಜನಾಕ್ರೋಶ

ತುಳುನಾಡಿನ ಮತೀಯ ರಾಜಕಾರಣದ ಸಹಜ ಲೆಕ್ಕಾಚಾರದ ಪ್ರಕಾರ, ಮುನೀರ್ ಕಾಟಿಪಳ್ಳರ ಮೇಲೆ ಪ್ರಕರಣ ಹೂಡಿದ್ದಕ್ಕೆ ಜನ ಶಹಬ್ಬಾಸ್ ಗಿರಿ ನೀಡುತ್ತಾರೆ ಎಂಬ "ಪರಿವಾರ" ವೈದ್ಯರ ಲೆಕ್ಕಾಚಾರ ತಲೆಕೆಳಗಾಗುವ ರೀತಿಯಲ್ಲಿ ಪ್ರಜ್ಞಾವಂತ ಜನತೆ ವೈದ್ಯರ ಸಂಘದ ಈ ನಡೆಯ ವಿರುದ್ದ ಸಾಮಾಜಿಕ ಜಾಲತಾಣಗಳಲ್ಲಿ ಪ್ರಬಲ ವಿರೋಧ ವ್ಯಕ್ತಪಡಿಸಿದರು. ಮುನೀರ್ ಕಾಟಿಪಳ್ಳ ಹಾಗೂ ವಾರ್ತಾಭಾರತಿ ದೈನಿಕದ ಪ್ರಧಾನ ಸಂಪಾದಕರ ಬೆಂಬಲಕ್ಕೆ ನಿಂತರು. ಒಂದು ವಿಭಾಗದ ವೈದ್ಯರ ಮುಸ್ಲಿಂ ವಿರೋಧಿ ದೋರಣೆ, ಕೋಮು ರಾಜಕಾರಣ, ವ್ಯಾಪಾರೀ ಮನೋಧರ್ಮದಿಂದ,ವೈದ್ಯರ

ಪುಟ 4 ಕ್ಕೆ

ರೋಗಿಯ ಕುಟುಂಬ ಮತ್ತು ವೈದ್ಯರ ನಡವಿನ ವಾಗ್ವಾದ....

ಪುಟ 3 ರಿಂದ

ಕುರಿತು ಜನಸಾಮಾನ್ಯರು ನಂಬಿಕೆ ಕಳೆದುಕೊಳ್ಳುತ್ತಿರುವುದನ್ನೂ ಈ ಪ್ರಕರಣಕ್ಕೆ ಸಿಕ್ಕಿರುವ ಪ್ರತಿಕ್ರಿಯೆ ಎತ್ತಿತೋರಿಸಿದೆ.

ವೈದ್ಯರ ಸಂಘದ ಈ ನಡೆ
ದಕ್ಷಿಣ ಕನ್ನಡ ಜಿಲ್ಲೆಗೆ ಹೊಸತಲ್ಲ

ಪುತ್ತೂರಿನ ಪರಿವಾರ ಸಿದ್ಧಾಂತಿ ವೈದ್ಯರ ಮತೀಯ ಪಕ್ಷಪಾತಿ ನಡೆಗಳು ಪುತ್ತೂರಿಗೆ ಹೊಸದೇನಲ್ಲ. ಪುತ್ತೂರಿನಲ್ಲಿ ನರ್ಸಿಂಗ್ ಹೋಂ ಹೊಂದಿರುವ ಡಾ. ಪ್ರಸಾದ್ ಭಂಡಾರಿ ಎಂಬ ಹಿರಿಯ ವೈದ್ಯರು ಸಂಘಪರಿವಾರದ ಅಧಿಕೃತ ಮುಖಂಡರು. ಇವರು ಯಾವ ಹಿಂಜರಿಕೆಯೂ ಇಲ್ಲದೆ ಕೋಮು ಪ್ರಚೋದಕ ಮಾತುಗಳನ್ನು ಹಲವು ಸಂದರ್ಭಗಳಲ್ಲಿ ಆಡಿದ್ದಾರೆ. ಬಿಜೆಪಿ ಪರ ಚುನಾವಣಾ ಕೆಲಸಗಳಲ್ಲಿ ಬಹಿರಂಗವಾಗಿಯೇ ತೊಡಗಿಸಿಕೊಂಡಿದ್ದಾರೆ. ಈ ಬಾರಿಯ ಪ್ರತಿಭಟನೆಯ ಮುಂಚೂಣಿಯಲ್ಲಿದ್ದ ಡಾ.ಪುತ್ತೂರಾಯರು ಕೊರೋನಾ ಸಂದರ್ಭದಲ್ಲಿ "ಕೊರೋನಾ ಹೇಗೂ ಭಾರತಕ್ಕೆ ಬಂದಿದ್ದೀಯಾ, ಮೋದಿ ವಿರೋಧಿಗಳನ್ನು ಭೇಟಿಯಾಗಿ (ಬಲಿ ಪಡೆದು) ಹೋಗು" ಎಂದು ಸಾಮಾಜಿಕ ಜಾಲತಾಣದಲ್ಲಿ ಬರೆದದ್ದು ದೊಡ್ಡ ಚರ್ಚೆಗೆ ಕಾರಣವಾಗಿತ್ತು. ಇವರೂ ಪರಿವಾರದ ಅಜೆಂಡಾ ಜಾರಿಗೊಳಿಸುವುದರಲ್ಲಿ ಸಕ್ರಿಯರಾಗಿರುತ್ತಾರೆ. ಮುನೀರ್ ಕಾಟಿಪಳ್ಳ ಹಾಗೂ ವಾರ್ತಾಭಾರತಿ ಸಂಪಾದಕರ ವಿರುದ್ಧ ಪ್ರಕರಣ ದಾಖಲಿಸಿರುವ, ಪುತ್ತೂರು ವೈದ್ಯರ ಸಂಘದ ಕಾರ್ಯದರ್ಶಿ ಡಾ. ಗಣೇಶ್ ಪ್ರಸಾದ್ ಮುದ್ರಾಜೆ ಅವರಂತೂ ತಾಲೂಕು ವೈದ್ಯರ ಸಂಘವನ್ನು ಪರಿವಾರದ ಸಹಭಾಗಿ ಸಂಘದ ಮಟ್ಟಿಗೆ ಇಳಿಸಿದ ಕುಖ್ಯಾತಿಗೆ ಗುರಿಯಾಗಿದ್ದಾರೆ. ಕಳೆದ ವಿಧಾನಸಭೆ ಚುನಾವಣೆಯ ಸಂದರ್ಭ "ಪುತ್ತೂರಿಗೆ ಕ್ಷಾತ್ರ ತೇಜಸ್ಸಿನ ಶಾಸಕನ ಅಗತ್ಯ ಇದೆ. ಪುತ್ತೂರು ಕೇರಳದ ಜೊತೆಗೆ ಗಡಿ ಹಂಚಿಕೊಂಡಿದೆ.." ಎಂಬ ಲೇಖನವನ್ನೇ ಬರೆದು ಆಕ್ರಮಣಕಾರಿ ಹಿಂದುತ್ವವಾದದ ಪರ ಬ್ಯಾಟ್ ಬೀಸಿದ್ದರು.

ಮತೀಯವಾದ, ವ್ಯಾಪಾರೀ ಹಿತಾಸಕ್ತಿ
ಎತ್ತಿಹಿಡಿಯುವುದರಲ್ಲೆ ಹೆಚ್ಚು ಆಸಕ್ತಿ

ಮಂಗಳೂರು ಕೋಮುವಾದದ ರಾಜಧಾನಿಯೂ ಹೌದು, ಖಾಸಗಿ ಆರೋಗ್ಯ ರಂಗದ ರಾಜಧಾನಿಯೂ ಹೌದು. ಒಂಬತ್ತು ಖಾಸಗಿ ಮೆಡಿಕಲ್ ಕಾಲೇಜು, ಬೀದಿಗೊಂದು ಖಾಸಗಿ ಆಸ್ಪತ್ರೆ ಇರುವ ಮಂಗಳೂರು ವೈದ್ಯಕೀಯ ಕ್ಷೇತ್ರದ ಸಾಧನೆಗೆ ಖ್ಯಾತಿ ಪಡೆದಂತೆ, ವ್ಯಾಪಾರೀಕರಣಕ್ಕೆ ಕುಖ್ಯಾತವೂ ಆಗಿದೆ. ಅದರೊಂದಿಗೆ ವೈದ್ಯರಲ್ಲಿ ಒಂದು ವಿಭಾಗ ಸಂಘ ಪರಿವಾರದ ವಿಚಾರಗಳಿಂದಲೂ ಪ್ರಭಾವಿತವಾಗಿದೆ. ಮಂಗಳೂರು ಐಎಂಎ ನಾಯಕತ್ವ ಇಂತಹ ವೈದ್ಯರ ಕೈಯ್ಯಲ್ಲಿದೆ. ಮಂಗಳೂರು ಐಎಂಎ ಗೆ ವೈದ್ಯಕೀಯ ರಂಗದ ಘನತೆ ಎತ್ತಿಹಿಡಿಯುವುದಕ್ಕಿಂತ, ಮತೀಯವಾದ, ವ್ಯಾಪಾರಿ ಹಿತಾಸಕ್ತಿ ಎತ್ತಿಹಿಡಿಯುವುದರಲ್ಲೆ ಹೆಚ್ಚು ಆಸಕ್ತಿ ಇರುವುದು ಕಾಣುತ್ತದೆ. ಸಹಜವಾಗಿಯೆ ಮಂಗಳೂರು ಐಎಂಎ ಘಟಕವು ಈ ಪ್ರಕರಣದಲ್ಲಿ ಪುತ್ತೂರು ಐಎಂಎ ಘಟಕಕ್ಕೆ ಬೆನ್ನೆಲುಬಾಗಿ ನಿಂತಿತು. ಮಂಗಳೂರಿನಲ್ಲಿ ನಡೆಯುತ್ತಿರುವ ಆರೋಗ್ಯ ಕ್ಷೇತ್ರದ ವ್ಯಾಪಾರೀಕರಣ, ರೋಗಿಗಳಿಗೆ ವಿಧಿಸುವ ದುಬಾರಿ ಬಿಲ್ ಗಳ ವಿರುದ್ದ ಎಡಪಂಥೀಯ ಶಕ್ತಿಗಳು ಹೋರಾಟಗಳನ್ನು ಸಂಘಟಿಸುವುದು, ಖಾಸಗಿ, ಕಾರ್ಪೊರೇಟ್ ಆಸ್ಪತ್ರೆಗಳ ಸುಲಿಗೆ ನೀತಿಗಳ ವಿರುದ್ದ ಪ್ರತಿಭಟನೆಗಳನ್ನು ನಡೆಸುವುದು, ಅಂತಹ ಹೋರಾಟಗಳಲ್ಲಿ ಸಿಪಿಐ(ಎಂ), ಡಿವೈಎಫ್ಐ, ಮುನೀರ್‌ಕಾಟಿಪಳ್ಳ ಮುಂಚೂಣಿಯಲ್ಲಿ ಇರುವುದು, ಮೊದಲೆ ಮಂಗಳೂರಿನ "ಪರಿವಾರ" ವೈದ್ಯರ ಕೆಂಗಣ್ಣಿಗೆ ಗುರಿಯಾಗಿತ್ತು. ಪುತ್ತೂರು ವೈದ್ಯರ ಕೂಟದ ಯೋಜನೆಯೊಂದಿಗೆ ಮಂಗಳೂರು ಐಎಂಎ ಸಹ ಜೊತೆ ಸೇರಿತು.

ತನ್ನ ರಾಷ್ಟ್ರ ಘಟಕದ ನಿಲುವಿಗೆ
ವ್ಯತಿರಿಕ್ತವಾದ ನಿಲುವು

ಮಂಗಳೂರಿನಲ್ಲಿ ಆರೋಗ್ಯ ಕ್ಷೇತ್ರದ ಕಾರ್ಪೊರೇಟಿಕರಣ ಉಂಟು ಮಾಡಿರುವ ತಲ್ಲಣಗಳ ಕುರಿತು ಒಂದು ಚಕಾರವನ್ನೂ ಎತ್ತದ ಐಎಂಎ ಘಟಕ ಮುಸ್ಲಿಮರ ವಿಚಾರ ಬಂದಾಗ ಕೋಮುವಾದಿ ನಿಲುವು ತೆಗೆದುಕೊಂಡದ್ದಕ್ಕೆ ಹಲವು ಘಟನೆಗಳು ಸಾಕ್ಷಿ ನುಡಿಯುತ್ತವೆ. ಅದರಲ್ಲಿ ಒಂದು, ಎನ್.ಆರ್.ಸಿ, ಸಿ.ಎ.ಎ ಹೋರಾಟದ ಸಂದರ್ಭದ ಮಂಗಳೂರು ಗೋಲಿಬಾರ್ ಘಟನೆ. ಆ ಗೋಲಿಬಾರ್ ನಲ್ಲಿ ಇಬ್ಬರು ಮುಸ್ಲಿಂ ಯುವಕರು ಮೃತರಾಗಿ, ಹಲವರು ಗಾಯಗೊಂಡಿದ್ದರು. ಹಾಗೆ ಗಾಯಗೊಂಡವರನ್ನು ನಗರದ ಹೈಲಾಂಡ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಮುಸ್ಲಿಂ ಮಾಲಕತ್ವದ ಈ ಆಸ್ಪತ್ರೆಗೂ ನುಗ್ಗಿದ ಪೊಲೀಸರು, ಆಸ್ಪತ್ರೆ ಆವರಣದಲ್ಲಿ ಅಶ್ರುವಾಯು ಸಿಡಿಸಿದ್ದರು, ತೀವ್ರ ನಿಗಾ ಘಟಕಕ್ಕೂ ನುಗ್ಗಿ ದೌರ್ಜನ್ಯ ಎಸಗಿದ್ದರು. ಈ ಘಟನೆಯನ್ನು ಐಎಂಎ ರಾಷ್ಟ್ರೀಯ ಘಟಕ ಬಲವಾಗಿ ಖಂಡಿಸಿ ಹೇಳಿಕೆ ಬಿಡುಗಡೆ ಮಾಡಿತ್ತು. ಆದರೆ, ಆಘಾತಕಾರಿ ವಿದ್ಯಾಮಾನದಲ್ಲಿ ಐಎಂಎ ಮಂಗಳೂರು ಘಟಕವು ತನ್ನ ರಾಷ್ಟ್ರ ಘಟಕದ ನಿಲುವಿಗೆ ವ್ಯತಿರಿಕ್ತವಾದ ನಿಲುವು ಪ್ರಕಟಿಸಿತು. ಹೈಲ್ಯಾಂಡ್ ಆಸ್ಪತ್ರೆಯಲ್ಲಿ ನಡೆದ ಪೊಲೀಸ್ ದೌರ್ಜನ್ಯ ಪ್ರಕರಣದಲ್ಲಿ ಪೊಲೀಸರಿಗೆ ಕ್ಲೀನ್ ಚಿಟ್ ನೀಡಿತು. ಗೋಲಿಬಾರ್ ಗೂ ಸಮರ್ಥನೆ ಒದಗಿಸಿತು. ಇದು ಕೋಮುವಾದ ಹಾಗೂ ಖಾಸಗಿ ಆರೋಗ್ಯ, ಶಿಕ್ಷಣ ಕ್ಷೇತ್ರದ ರಾಜಧಾನಿ ದಕ್ಷಿಣ ಕನ್ನಡದ ವೈದ್ಯಲೋಕದ ಕತೆ. ಪುತ್ತೂರು ಘಟನೆ ಅದರ ಒಂದು ನಿರ್ಲಜ್ಜ ತುಣುಕು ಮಾತ್ರ.

ಜಗತ್ತಿನ ಮೊತ್ತ ಮೊದಲ ದುಡಿವ ಜನರ ರಾಜಕೀಯ ಪಕ್ಷ....

ಪುಟ 2 ರಿಂದ

ವಯಸ್ಕ ಗಂಡಸರೂ ಆಡಳಿತದಲ್ಲಿ ಭಾಗವಹಿಸುವ ಸಾರ್ವತ್ರಿಕ ಮತದಾನದ ತತ್ವ, ಚುನಾವಣೆಗಳು ಕಾಲ ಕಾಲಕ್ಕೆ ನಡೆದು ಪ್ರಜೆಗಳ ಪ್ರತಿನಿಧಿಗಳು ಹೊಸದಾಗಿ ಆಯ್ಕೆಗೊಳ್ಳಬೇಕು ಎಂಬ ತತ್ವ, ಹೀಗೆ ಚುನಾಯಿತವಾದ ಸಂಸತ್‌ಗೆ ದೇಶದ ಆಡಳಿತ ಮತ್ತು ಎಲ್ಲ ವ್ಯವಹಾರಗಳಲ್ಲಿ ಪರಮಾಧಿಕಾರ, ಅಭಿವ್ಯಕ್ತಿ ಸ್ವಾತಂತ್ರ್ಯ, ಧಾರ್ಮಿಕ ಸ್ವಾತಂತ್ರ್ಯದ ಒತ್ತಾಯಗಳನ್ನು ಇಂಗ್ಲೆಂಡ್‌ನ ಸಂಸತ್ ಮತ್ತು ಜನತೆಯ ಮುಂದೆ ಮಂಡಿಸಿದರು.

ಜಗತ್ತಿನ ಮೊತ್ತ ಮೊದಲ.....
ರೈತ, ಕುಶಲ ಕೆಲಸಗಾರರ ಸೈನ್ಯದ ವಶದಲ್ಲಿ ರಾಜ:

ಇಂಗ್ಲೆಂಡ್‌ನ ರಾಜ ಸೈನ್ಯ ಸಮೇತ ಪಾರ್ಲಿಮೆಂಟ್‌ನ ಬಾಗಿಲಿಗೆ ಬಂದ. ತಾನು ಬಯಸಿದಂತೆ ತೆರಿಗೆ ಹೇರಲು ನಿರಾಕರಿಸುವ ಸಂಸತ್ ಸದಸ್ಯರನ್ನು ಬಂಧಿಸುವುದು ಅವನ ಉದ್ದೇಶವಾಗಿತ್ತು. ತೆರಿಗೆ ಸಂಗ್ರಹದಿಂದ ನೇಮಿಸಿಕೊಳ್ಳಲಾದ ಸೈನ್ಯ ಪಾರ್ಲಿಮೆಂಟ್‌ನ ನಿರ್ದೇಶನದಡಿ ಕಾರ್ಯ ನಿರ್ವಹಿಸಬೇಕು ಎಂದು ಒತ್ತಾಯಿಸುವ ಸಂಸತ್‌ನ ಬಹುಮತದ ಸದಸ್ಯರ ನಿರ್ಧಾರ ನಿರ್ಣಾಯಕ ಅಂಶವಾಗಿತ್ತು. ಏಕೆಂದರೆ ಸೈನ್ಯದ ಬಲವಿಲ್ಲದೆ ರಾಜನಿಗೇನು ಬೆಲೆ? ಯಾವುದೇ ಪ್ರಭುತ್ವದ ಬಲ ನಿಂತಿರುವುದೇ ಸೈನ್ಯದ ಮೇಲಲ್ಲವೇ? ಆದ್ದರಿಂದ ಸದಸ್ಯರನ್ನು ಬಂಧಿಸಿ ಪಾರ್ಲಿಮೆಂಟ್ ತನ್ನ ಹಿಡಿತವನ್ನು ಸ್ಥಾಪಿಸುವುದು ಅವನ ಉದ್ದೇಶವಾಗಿತ್ತು. ರಾಜ–ಪಾರ್ಲಿಮೆಂಟ್ ಸಂಘರ್ಷ ಆರಂಭವಾದಾಗಿನಿಂದ ಪಾರ್ಲಿಮೆಂಟ್‌ನ ಪರವಾಗಿ ಅದರ ಮುಂದೆ ನೆರೆಯುತ್ತಿದ್ದ ಲಂಡನ್‌ನ ಜನ ಸಾಮಾನ್ಯರು ರಾಜನ ಸೈನ್ಯ ಪಾರ್ಲಿಮೆಂಟ್ ಸದಸ್ಯರನ್ನು ಬಂಧನ ಮಾಡುವುದನ್ನು ತಪ್ಪಿಸಿದರು.

ಈ ಎಲ್ಲ ಘಟನೆಗಳು ರಾಜ ಮತ್ತು ಪಾರ್ಲಿಮೆಂಟ್ ನಡುವೆ "ಮಸೆದುದಿತ್ತಂಡಕ್ಕೆ ಕದನವು"ಎಂಬಂತೆಯುದ್ಧ ಅನಿವಾರ್ಯವಾಯಿತು. ಈ ಯುದ್ಧದಲ್ಲಿ ಪಾರ್ಲಿಮೆಂಟ್ ಪರವಾದ ಸೈನ್ಯ ಶಕ್ತಿಯನ್ನು ಹೆಚ್ಚಿಸಲು ಸಂಸತ್ ಸದಸ್ಯನಾಗಿದ್ದ ಕ್ರೋಮ್‌ವೆಲ್, ರಾಜನಿಂದ ಸಂಕಟಕ್ಕೆ ಒಳಗಾಗಿ ಅವನ ವಿರುದ್ಧ ಸಿಟ್ಟಿಗೆದ್ದಿದ್ದ ರೈತರನ್ನು, ಇತರ ಸಾಮಾನ್ಯ ಸದಸ್ಯರನ್ನು ದೊಡ್ಡ ಸಂಖ್ಯೆಯಲ್ಲಿ ಸೈನ್ಯಕ್ಕೆ ಸೇರಿಸಿಕೊಂಡರು. ಇವರಲ್ಲಿ ಬಹುಜನ ಹಿಂದೆ ವಿವರಿಸಿದಂತೆ, ವೈಭವಗಳನ್ನು ನಿರಾಕರಿಸಿದ ಸರಳವಾದ ಆರಾಧನೆ ಬಯಸುವ ಪ್ಯೂರಿಟನ್ ಶುದ್ಧೀಕರಣದ ಪಂಥಕ್ಕೆ ಸೇರಿದವರಾಗಿದ್ದರು.

ಈ ಸೈನ್ಯ ಬಹಳ ಬದ್ಧತೆಯಿಂದ, ರಾಜನ ದಳವನ್ನು ಸೋಲಿಸಲೇಬೇಕೆಂಬ ಛಲದಿಂದ ಹೋರಾಡಿತು. ರಾಜನ ಸೈನ್ಯವನ್ನು ಹಲವು ಕಾಳಗಗಳಲ್ಲಿ ಸೋಲಿಸಿತು. ಒಬ್ಬ ಕೆಳ ಸ್ಥಾನದ ಅಧಿಕಾರಿಯಾಗಿದ್ದ ಕ್ರೋಮ್‌ವೆಲ್‌ಗೆ ಪ್ರಸಿದ್ಧಿಯನ್ನೂ ಲೆಫ್ಟಿನೆಂಟ್ ಜನರಲ್ ಪದವಿಯನ್ನೂ ತಂದುಕೊಟ್ಟಿತು. ರಾಜನನ್ನು ಬಂಧಿಸಲಾಯಿತು.

ಪಾರ್ಲಿಮೆಂಟ್‌ನ ಪರವಾಗಿ ಯುದ್ಧದಲ್ಲಿ ತೊಡಗಿದ್ದವರಲ್ಲಿ ಮೂರು ಸ್ತರದ ಮೂರು ಶಕ್ತಿಗಳನ್ನು ಗುರುತಿಸಬಹುದಾಗಿತ್ತು. ಪಾರ್ಲಿಮೆಂಟ್‌ನ ಒಳಗೆ ಎರಡು ಗುಂಪುಗಳಿದ್ದವು. ಅದರಲ್ಲಿ ಮೇಲ್ಸ್ತರದ ಶ್ರೀಮಂತರು, ಬಂಡವಾಳಶಾಹಿ ಕೃಷಿಕರು, ಸಾಗರ ವ್ಯಾಪಾರಿಗಳ ವರ್ಗಗಳಿಂದ ಕೂಡಿದ ಪ್ರೆಸ್ಬಿಟೇರಿಯನ್ ಎಂಬ ಕ್ರಿಶ್ಚಿಯನ್ ಪಂಥಕ್ಕೆ ಸೇರಿದವರು ಬಹುಮತ ಹೊಂದಿದ್ದರು. ಕ್ರೋಮ್‌ವೆಲ್ ಕೆಳ ಸ್ತರದ ಶ್ರೀಮಂತ ವರ್ಗಕ್ಕೆ, ವ್ಯಾಪಾರಿಗಳ ವರ್ಗಕ್ಕೆ ಸೇರಿದವನಾಗಿ ಪ್ಯೂರಿಟನ್ ಪಂಥಕ್ಕೆ ಸೇರಿದ್ದ. ಪ್ರೆಸ್ಬಿಟೇರಿಯನ್ ಪಂಥದವರಲ್ಲದ ಈ ಸ್ವತಂತ್ರ ಪಂಥಗಳು ಅಲ್ಪ ಸಂಖ್ಯೆಯವರಾಗಿದ್ದರು. ಹೆಚ್ಚು ಸಂಪತ್ತು, ಸಮಾಜದಲ್ಲಿ ಉಚ್ಚ ಸ್ಥಾನವನ್ನೇನೂ ಪಡೆದಿರಲಿಲ್ಲ.

ಮೂರನೆಯ ಗುಂಪು ರೈತರು ಮತ್ತು ನಗರಗಳ ಕುಶಲ ಕೆಲಸಗಾರರದು. ಸೈನ್ಯದಲ್ಲಿ ಬಹು ಸಂಖ್ಯಾತರಾಗಿದ್ದರೂ, ಯುದ್ಧದಲ್ಲಿ ಧೈರ್ಯ, ಶೌರ್ಯ ಬಲಿದಾನಗಳಿಂದ ವಿಜಯಕ್ಕೆ ದೊಡ್ಡ ಕಾಣಿಕೆ ಕೊಟ್ಟಿದ್ದರೂ ಪಾರ್ಲಿಮೆಂಟ್‌ನಲ್ಲಿ ಪ್ರತಿನಿಧಿತ್ವ ಶೂನ್ಯವಾಗಿತ್ತು.

ರಾಜನ ಸೈನ್ಯವನ್ನು ಸೋಲಿಸುವವರೆಗೆ ಇಂಗ್ಲೆಂಡ್‌ನಲ್ಲಿ ಪಾರ್ಲಿಮೆಂಟ್ ಪರವಾಗಿದ್ದ ಎಲ್ಲರೂ ಐಕಮತ್ಯದಿಂದ ಇದ್ದರು. ರಾಜನ ಸೈನ್ಯ ಸೋಲೊಪ್ಪಿ ಬಂಧನವಾದ ಮೇಲೆ ಪ್ರತಿಯೊಂದು ವರ್ಗದ ವರ್ಗ ಸ್ಥಿತಿಗೆ ತಕ್ಕಂತೆ ಅವರ ಗುರಿಗಳು ಬೇರೆಬೇರೆಯಾದವು. ಪಾರ್ಲಿಮೆಂಟ್‌ನಲ್ಲಿ ಬಹುಮತ ಹೊಂದಿದ್ದ ಪ್ರೆಸ್ಬಿಟೇರಿಯನ್‌ಗಳದು ಈ ಸಂಘರ್ಷದ ಸಹವರ್ತಿಗಳನ್ನು ದೂರ ಇಟ್ಟು ತಮ್ಮ ಉದ್ದೇಶಕ್ಕೆ ತಕ್ಕಂತೆ ತಾವೇ ಪ್ರತ್ಯೇಕವಾಗಿ ರಾಜನ ಜೊತೆ ರಾಜಿ ಮಾಡಿಕೊಂಡು ಮತ್ತೆ ಅಧಿಕಾರಕ್ಕೆ ತರುವ ಯೋಚನೆ.

ಅವರ ಸಂಪತ್ತಿನ, ಅದನ್ನು ಗಳಿಸಿದ ಶೋಷಣೆಯ ಮಾರ್ಗಗಳ ರಕ್ಷಣೆ ಹಾಗೂ ಮತ್ತಷ್ಟು ಸಂಪತ್ತನ್ನು ಗಳಿಸುವ ದುರಾಸೆಯಿಂದ ಅವರು ಸೋತ ರಾಜನನ್ನು ತಮ್ಮ ಶರತ್ತುಗಳಿಗೆ ಒಪ್ಪಿಸಿ, ತಮ್ಮ ಕೈಗೊಂಬೆಯಾಗಿ ಮತ್ತೆ ಸಿಂಹಾಸನದ ಮೇಲೆ ಕೂಡಿಸುವ ಯೋಚನೆ ಅವರದು. ಈ ಪ್ರಯತ್ನದಲ್ಲಿ ಕ್ರೋಮ್‌ವೆಲ್ ಮತ್ತು ಸಂಗಡಿಗರು ಯುದ್ಧದ ವಿಜಯದಿಂದ ಪಡೆದುಕೊಂಡ ಜನಪ್ರಿಯತೆ, ಸೈನ್ಯದ ವ್ಯಾಪಕ ಬೆಂಬಲವನ್ನು ಕುಗ್ಗಿಸುವ ಆ ಮೂಲಕ ತಮ್ಮ ಮಾತೇ ನಡೆಯುವಂತಾಗಬೇಕು ಎಂಬ ಒಳಸಂಚು ಕೂಡಾ ನಡೆಸಿದ್ದರು.

ಕ್ರೋಮ್‌ವೆಲ್ ನಂತಹ ಕೆಳ ಸ್ತರದ ಜಮೀನುದಾರರು, ವ್ಯಾಪಾರಗಾರರು ಕೂಡಾ ರಾಜ ಪ್ರಭುತ್ವದ ಚೌಕಟ್ಟಿನಿಂದಾಚೆ ಯೋಚಿಸಲಿಲ್ಲ. ರಾಜನ ಜೊತೆ ರಾಜಿಯೇ ಅವರ ಮಂತ್ರವೂ ಕೂಡಾ. ಆದರೆ ಪಾರ್ಲಿಮೆಂಟ್‌ನ ಅಧೀನದಲ್ಲಿ ಅದರ ನಿರ್ದೇಶನದಲ್ಲಿ ರಾಜ ಆಡಳಿತ ಮಾಡಬೇಕು. ತಮ್ಮ ವರ್ಗದ ಹಿತಾಸಕ್ತಿಗೆ ಸಹಾಯಕವಾದ ಶರತ್ತುಗಳಿಗೆ ಅನುಗುಣವಾದ ರಾಜಿ. ಪ್ರೆಸ್ಬಿಟೇರಿಯನ್ ಶ್ರೀಮಂತರ ಅಧೀನದಿಂದ ಪೂರ್ತಿ ಬಿಡಿಸಿಕೊಳ್ಳುವ ಮನಸ್ಸೂ ಇರಲಿಲ್ಲ.

ಆದರೆ ಹಲವು ವರ್ಷ ನಡೆದ ಈ ಯುದ್ಧದಲ್ಲಿ ವಿಜಯಕ್ಕಾಗಿ ಅಪಾರ ಬಲಿದಾನ ಮಾಡಿದ ಸ್ವತಂತ್ರ ರೈತರು, ಇತರ ದುಡಿಯುವ ಜನರು, ನಗರಗಳ ಕುಶಲ ಕೆಲಸಗಾರರು, ಕೂಲಿಕಾರರು ಇವರುಗಳಿಗೆ ತಿಳಿಯದಂತೆ ರಾಜನ ಜೊತೆ ರಾಜಿ ಎಂಬ ಈ ದುಷ್ಟ ಆಟದಲ್ಲಿ ತೊಡಗಿದ್ದರು.

ಆದರೆ ಈ ವರ್ಗದ ಜನ ಸಮುದಾಯಗಳೇ ರಾಜ ಪ್ರಭುತ್ವದಡಿಯ ಪಾಳೆಯಗಾರಿ ವ್ಯವಸ್ಥೆಯಿಂದ ಸಾಮಂತರು, ಜಹಗೀರುದಾರರು ಮತ್ತಿತರ ಜಮೀನುದಾರರಿಂದ ಬಹು ದೊಡ್ಡ ಕಷ್ಟ, ಸಂಕಟಗಳನ್ನು ಅನುಭವಿಸಿದ ವರ್ಗಗಳು ಇವರು.

ಅವರಿಗೆ ಈ ಎರಡೂ ವರ್ಗಗಳು ಮತ್ತವರ ಪ್ರತಿನಿಧಿಗಳು ಆಡುತ್ತಿದ್ದ ರಾಜಿಯೆಂಬ ವಂಚನೆಯ ಆಟ ಸಹಜವಾಗಿಯೇ ಸಿಟ್ಟು ತರಿಸಿತು. ಸೈನ್ಯದಲ್ಲಿದ್ದ ಈ ವರ್ಗಗಳ ಸೈನಿಕರು, ರಾವುತರು, ಸಣ್ಣ ದಳಪತಿಗಳು ಲೆವಲರ್ಸ್ ಎಂಬ ಗುಂಪಿನವರಾಗಿದ್ದರು. ರಾಜ ಪ್ರಭುತ್ವವನ್ನು ನಿರ್ಮೂಲ ಮಾಡಬೇಕೆಂಬ ಬಗ್ಗೆ, ಮುಂದಿನ ಪ್ರಜಾಪ್ರಭುತ್ವದ ಸ್ವರೂಪ ಹೇಗಿರಬೇಕು ಎಂಬ ಬಗ್ಗೆ ಒಂದಿಷ್ಟು ಸ್ಪಷ್ಟ ಯೋಚನೆಗಳನ್ನು ಮಾಡಿದವರಾಗಿದ್ದರು.

ಈ ಲೆವಲರ್ಸ್ ದಳಪತಿಗಳು ಮತ್ತು ಸೈನಿಕರ ಒಂದು ತುಕಡಿ ರಾಜನನ್ನು ಬಂಧಿಸಿದ ಸ್ಥಳಕ್ಕೆ ಹೋಗಿ ಅವನನ್ನು ತಮ್ಮ ವಶ ಪಡಿಸಿಕೊಂಡರು. ಅವನ ಜೊತೆ ಬೇರಾರೂ ರಾಜಿಯ ಆಟ ಮತ್ತೊಂದ ಮಾಡಲಾಗದಂತೆ ಕಾಯತೊಡಗಿದರು.

ಈ ಲೆವಲರ್ಸ್ ಯಾರು, ಅವರ ವಿಚಾರಧಾರೆ ಏನು? ಅದನ್ನು ಸಾಧಿಸಲು ಅವರು ಮಾಡಿದ ಪ್ರಯತ್ನಗಳೇನು? ರಾಜ ಪ್ರಭುತ್ವದ ನಾಶ ಮತ್ತು ಪ್ರಜಾಪ್ರಭುತ್ವದ ಸ್ಥಾಪನೆಗಾಗಿ ಅವರು ಮಂಡಿಸಿದ ಪ್ರಸ್ತಾವಗಳೇನಾದವು ಮುಂದಿನ ಸಂಚಿಕೆಯಲ್ಲಿ.

ಚನ್ನರಾಯಪಟ್ಟಣ ಭ್ರಷ್ಟ ತಹಶೀಲ್ದಾರ್ ವಿರುದ್ಧ ಯಶಸ್ವೀ ಹೋರಾಟ

ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲ್ಲೂಕಿನ ಕಡುಭ್ರಷ್ಟ ತಹಸಿಲ್ದಾರ್ ವಿ.ಎಸ್. ನವೀನ್ ಕುಮಾರ್ ರನ್ನು ರಾಜ್ಯ ಸರ್ಕಾರ ಯಾವುದೇ ಸ್ಥಳವನ್ನು ತೋರಿಸದೇ ವರ್ಗಾವಣೆ ಮಾಡಿ ಆದೇಶಿಸಿದೆ. ಭ್ರಷ್ಟಾಚಾರ ವಿರೋಧಿ ಆಂದೋಲನ ವೇದಿಕೆಯ ನೇತೃತ್ವದಲ್ಲಿ ಅನಿರ್ದಿಷ್ಟಾವಧಿ ಆಹೋರಾತ್ರಿ ಧರಣಿ, ಭ್ರಷ್ಟಾಚಾರದ ವಿರುದ್ಧ ನಡೆಯುತ್ತಿದ್ದ ಹೋರಾಟದ ವಿರುದ್ಧವೇ ಪ್ರತಿಭಟನೆ, ಜನಪ್ರತಿನಿಧಿಗಳ ಮೌನ, ಪೋಲೀಸರಿಂದ ಪ್ರತಿಭಟನಾಕಾರರ ಬಂಧನ, ಇವೆಲ್ಲವನ್ನೂ ಎದುರಿಸಿ ನಿಂತು, ಹೋರಾಟವನ್ನು ಮುಂದಿನ ಹಂತಕ್ಕೆ ತೆಗೆದುಕೊಂಡು ಹೋಗಲು ಎಲ್ಲಾ ರೀತಿಯ ಸಿದ್ದತೆಗಳನ್ನು ನಡೆಸುತ್ತಿದ್ದಾಗಲೇ ರಾಜ್ಯ ಸರ್ಕಾರ ಈ ಕ್ರಮ ತೆಗೆದುಕೊಂಡಿದೆ. ಇದು ಜನತೆಯ ನಿರಂತರ ಹೋರಾಟಕ್ಕೆ ಸಿಕ್ಕ ಜನತೆಯ ಜಯವಾಗಿದೆ.

ಎಚ್.ಆರ್.ನವೀನ್‌ಕುಮಾರ್
ಹಾಸನ

ಭಾರತದಲ್ಲಿ ಭ್ರಷ್ಟಾಚಾರವನ್ನು ವ್ಯಾಖ್ಯಾನ ಮಾಡುವುದೇ ಕಷ್ಟವೇನೋ ಎನ್ನುವ ಮಟ್ಟಕ್ಕೆ ಭ್ರಷ್ಟಾಚಾರ ಎಂಬುದು ಎಲ್ಲಾ ಹಂತಗಳಲ್ಲೂ ಆಳವಾಗಿ ಬೇರೂರಿದೆ. ಅದರಲ್ಲೂ ಸರ್ಕಾರಿ ಕಛೇರಿಗಳಲ್ಲಿ ಜನಸಾಮಾನ್ಯರು ತಮ್ಮ ಕೆಲಸಗಳನ್ನು ಮಾಡಿಸಿಕೊಳ್ಳಲು ಪ್ರತಿ ಹೆಜ್ಜೆಯಲ್ಲೂ, ಪ್ರತಿ ಟೇಬಲ್ಲಿಗೂ ಹಣ ನೀಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಭ್ರಷ್ಟಾಚಾರದಲ್ಲಿ ತೊಡಗಿರುವವರು ಯಾರೂ ಬಾಯಿಬಿಟ್ಟು ಹಣವನ್ನು ಕೇಳುವುದಿಲ್ಲ. ಆದರೆ ಕೆಲಸ ಮಾಡಿಸಿಕೊಳ್ಳಲು ಬಂದವನಿಗೆ ಏನೂ ಕೊಡದಿದ್ದರೆ ಇಲ್ಲಿ ಯಾವ ಕೆಲಸವೂ ಆಗುವುದಿಲ್ಲ ಎಂಬುದು ಖಾತ್ರಿಯಾಗುತ್ತಿದೆ. ಇದು ಭ್ರಷ್ಟಾಚಾರವನ್ನು ಕಾನೂನಾತ್ಮಕವಾಗಿಸಿದಂತೆ ಗೋಚರಿಸುತ್ತದೆ.

ಭಾರತದ ಸಂವಿಧಾನದ ಮೇಲೆ ಪ್ರಮಾಣವಚನ ಸ್ವೀಕರಿಸಿ, ಜನತೆಯ ಸೇವೆ ಮಾಡಲೆಂದು ಬಂದಿರುವ ಸರ್ಕಾರಿ ಅಧಿಕಾರಿಗಳು, ತಾವು ಜನರ ಸೇವಕರು ಎಂಬುದನ್ನು ಸಂಪೂರ್ಣವಾಗಿ ಮರೆತಿದ್ದಾರೆ. ಇದರ ಮೂಲಕ್ಕೆ ಹೋದರೆ ಅದು ಇಂದು ನಾವುಗಳೆಲ್ಲಾ ಜೀವಿಸುತ್ತಿರುವ ಬಂಡವಾಳಶಾಹಿ ರಾಜಕೀಯ, ಸಾಮಾಜಿಕ, ಆರ್ಥಿಕ ವ್ಯವಸ್ಥೆಯೇ ಇವೆಲ್ಲವಕ್ಕೂ ಮೂಲ ಕಾರಣವಾಗುತ್ತದೆ. ಅಗತ್ಯಕ್ಕಿಂತ ಹೆಚ್ಚು ಗಳಿಸಬೇಕು, ಬೇರೆಯವರನ್ನು ಶೋಷಿಸಿ, ಮೋಸ ಮಾಡಿಯಾದರೂ ತಾನು ಲಾಭಮಾಡಬೇಕು, ಲಾಭ ದಿನದಿಂದ ದಿನಕ್ಕೆ ಹೆಚ್ಚಾಗುತ್ತಾ ಹೋಗಬೇಕು, ಇವೆಲ್ಲವುಗಳಿಂದ ಸಂಪತ್ತಿನ ಶೇಖರಣೆಯಾಗಬೇಕು ಎನ್ನುವ ಬಂಡವಾಳಶಾಹಿಯ ಮೂಲ ಗುಣವೇ ಇಂದು ನಾವು ನೋಡುತ್ತಿರುವ ಭ್ರಹ್ಮಾಂಡ ಭ್ರಷ್ಟಾಚಾರಕ್ಕೆ ಮೂಲ ಕಾರಣ. ಇಷ್ಟೆಲ್ಲಾ ಪೀಠಿಕೆ ಹಾಕುತ್ತಿರುವುದು ಈ ಭ್ರಷ್ಟಾಚಾರದ ಒಂದು ಸಣ್ಣ ತುಣುಕಾಗಿ ಕಾಣುವ, ಆದರೆ ಸಾಮಾನ್ಯ ಜನರಿಗೆ ಅದೇ ಭ್ರಹ್ಮಾಂಡವಾಗಿ ಗೋಚರಿಸುವ ಒಂದು ಸಂಗತಿಯ ಕುರಿತು ಹಂಚಿಕೊಳ್ಳಲು.

ಕಡುಭ್ರಷ್ಟ ಅಧಿಕಾರಿ

ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲ್ಲೂಕು ತೆಂಗು ಕೃಷಿಗೆ ಹೆಸರುವಾಸಿ. ಇಷ್ಟು ಮಾತ್ರವಲ್ಲದೆ ಇದೇ ತಾಲ್ಲೂಕಿನ ಶ್ರವಣಬೆಳಗೊಳದಲ್ಲಿಯೇ ಜಗದ್ವಿಖ್ಯಾತ ಬಾಹುಬಲಿಯ ಏಕಶಿಲಾ ವಿಗ್ರಹವಿರುವುದು. ಇಂತಹ ಮಹತ್ತರವಾದ ತಾಲ್ಲೂಕಿಗೆ ಒಂದು ವರ್ಷಗಳ ಹಿಂದೆ ಕೆಎಎಸ್ ಪ್ರೊಬೆಷನರಿ ಅಧಿಕಾರಿ ವಿ.ಎಸ್.ನವೀನ್ ಕುಮಾರ್ ಎಂಬುವವರು ತಹಸಿಲ್ದಾರರಾಗಿ ಅಧಿಕಾರ ಸ್ವೀಕರಿಸುತ್ತಾರೆ. ಈ ಹಿಂದಿನ ಕಂದಾಯ ಅಧಿಕಾರಿಗಳ ಭ್ರಷ್ಟಾಚಾರದಿಂದ ಬೇಸತ್ತಿದ್ದ ತಾಲ್ಲೂಕಿನ ರೈತಾಪಿ ಮತ್ತು ಸಾಮಾನ್ಯ ಜನತೆ ಹೊಸ ಅಧಿಕಾರಿಯಿಂದ ಹೊಸ ನಿರೀಕ್ಷೆಗಳನ್ನು ಮಾಡಿದ್ದರು. ಆದರೆ ಆ ನಿರೀಕ್ಷೆ ಕೇವಲ ಹುಸಿಯಾಗಿದ್ದು ಮಾತ್ರವಲ್ಲ, ಇಂತಹ ಕಡುಭ್ರಷ್ಟ ಅಧಿಕಾರಿಯನ್ನು ನಮ್ಮ ಜೀವಿತಾವಧಿಯಲ್ಲಿ ಎಂದೂ ನೋಡಿರಲಿಲ್ಲ ಎಂದು ಹೇಳುವ ಮಟ್ಟಕ್ಕೆ ಜನ ಮಾತನಾಡಲು ಆರಂಭಿಸಿದರು.

ಜನರ ಸಂಕಷ್ಟಗಳನ್ನು ಕೇಳಿದ ತಾಲ್ಲೂಕಿನ ರೈತ ಚಳುವಳಿಗಳು ತಹಸಿಲ್ದಾರ್ ರವರ ಈ ನಡವಳಿಕೆಯನ್ನು ಖಂಡಿಸಿ ಮೊದಲ ಹಂತದಲ್ಲಿ ಎಚ್ಚರಿಕೆಯನ್ನೂ ಕೊಟ್ಟಿದ್ದವು. ದಿನಕಳೆದಂತೆ ತಹಸಿಲ್ದಾರ್ ವಿ.ಎಸ್.ನವೀನ್ ಕುಮಾರ್ ರೈತರೊಂದಿಗೆ ನಡೆದುಕೊಳ್ಳುವ ರೀತಿ, ಕೆಲವು ನಿರ್ದಿಷ್ಟ ಪ್ರಕರಣಗಳಲ್ಲಿ ಅವರ ಕೆಲಸದ ವಿಧಾನವನ್ನು ನೋಡಿ, ಅವರ ಮಾತುಗಳನ್ನು ಕೇಳಿದ ಮೇಲೆ ಇಂತಹ ಅಧಿಕಾರಿಗಳಿಂದ ತಾಲ್ಲೂಕಿನ ಜನತೆಗೆ ಯಾವುದೇ ರೀತಿಯ ಪ್ರಯೋಜನವಿಲ್ಲ ಮಾತ್ರವಲ್ಲ, ಜನರು ಅತ್ಯಂತ ಕಷ್ಟವನ್ನು ಅನುಭವಿಸಬೇಕಾಗುತ್ತದೆ ಎಂದು ಚರ್ಚಿಸಿ ಹೋರಾಟದ ಕಣಕ್ಕಿಳಿದರು.

ಭ್ರಷ್ಟಾಚಾರದ ವಿರುದ್ಧ ಪ್ರತಿಭಟನೆ

ತಾಲ್ಲೂಕಿನ ಕರ್ನಾಟಕ ಪ್ರಾಂತ ರೈತ ಸಂಘ (ಕೆಪಿಆರ್‌ಎಸ್) ಸಿಐಟಿಯು, ರಾಜ್ಯ ರೈತ ಸಂಘ, ಭಾರತ ಪ್ರಜಾಸತ್ತಾತ್ಮಕ ಯುವಜನ ಸಂಘಟನೆ (ಡಿವೈಎಫ್‌ಐ), ದಲಿತ ಸಂಘಟನೆಗಳು, ಮಾನವ ಹಕ್ಕುಗಳ ವೇದಿಕೆ, ಪ್ರಜಾಶಕ್ತಿ ಸೇರಿದಂತೆ ವಿವಿಧ ಜನಪರ ಸಂಘಟನೆಗಳ ನೇತೃತ್ವದಲ್ಲಿ ಭ್ರಷ್ಟಾಚಾರ ವಿರೋಧಿ ಆಂದೋಲನ ವೇದಿಕೆಯನ್ನು ರಚಿಸಿಕೊಂಡು 2025 ಫೆಬ್ರವರಿ 6ರಂದು ತಾಲ್ಲೂಕಿನ 32 ಸರ್ಕಾರಿ ಇಲಾಖೆಗಳಲ್ಲಿನ ಭ್ರಷ್ಟಾಚಾರದ ವಿರುದ್ಧ ಪ್ರತಿಭಟನೆ ನಡೆಸಲಾಯಿತು. 'ಕುಂಬಳ ಕಾಯಿ ಕಳ್ಳ ಎಂದರೆ ಹೆಗಲು ಮುಟ್ಟಿಕೊಂಡ' ಎಂಬ ಗಾದೆ ಮಾತಿನಂತೆ ಈ ಹೋರಾಟದ ನಂತರ ತಹಸಿಲ್ದಾರ್ ವಿ.ಎಸ್. ನವೀನ್‌ಕುಮಾರ್ ನಿಜವಾದ ಬಣ್ಣ ಬಯಲಾಗತೊಡಗಿತು. ನೊಂದ ಜನ ಸ್ವಯಂ ಪ್ರೇರಿತವಾಗಿ ತಹಸಿಲ್ದಾರ್ ವಿರುದ್ಧ ವೇದಿಕೆಗೆ ಲಿಖಿತ ದೂರು ನೀಡಲು ಆರಂಭಿಸಿದರು.

ಜಮೀನು ದುರಸ್ತುಮಾಡಲು ಲಕ್ಷಾಂತರ ರೂ. ಲಂಚ

ತಾಲ್ಲೂಕಿನ ಕಲ್ಕೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕಲ್ಕೆರೆ ಗೇಟ್ (ಕಟ್ಟೆಮನೆ) ಸರ್ವೆ ನಂ 154ರಲ್ಲಿ ಸುಮಾರು 60 ಕುಟುಂಬಗಳಿಗೆ ಹಕ್ಕುಪತ್ರ ನೀಡುವಂತೆ ಒತ್ತಾಯಿಸಿ 2021–22 ಸಾಲಿನಲ್ಲಿ ಸರ್ಕಾರದ ಆದೇಶದ ಮೇರೆಗೆ ಕಂದಾಯ ಇಲಾಖೆಯ 94ಸಿ ಅಡಿಯಲ್ಲಿ ಅರ್ಜಿಗಳನ್ನು ಸಲ್ಲಿಸಿದ್ದಾರೆ. ಅಲ್ಲಿನ ನಿವಾಸಿಗಳು ಹತ್ತಾರು ಬಾರಿ ತಾಲ್ಲೂಕು ಕಛೇರಿಗೆ ಸುತ್ತಾಡಿದ್ದಾರೆ. ಕಾನೂನಿನನ್ವಯ ಹಕ್ಕುಪತ್ರ ನೀಡಬೇಕೆಂದು ಹಲವು ಬಾರಿ ಹಕ್ಕೊತ್ತಾಯ ಮಾಡಿದ್ದರೂ ತಹಶೀಲ್ದಾರ್ ಈ ಬಗ್ಗೆ ಯಾವುದೇ ರೀತಿಯ ಕ್ರಮ ವಹಿಸಲಿಲ್ಲ.

ಶ್ರೀಮತಿ ಲಕ್ಷ್ಮಮ್ಮ ಲೇ। ರಂಗೇಗೌಡ, ಶೆಟ್ಟಿಹಳ್ಳಿ ಗ್ರಾಮ, ಕಸಬಾ ಹೋಬಳಿ 35 ಗುಂಟೆ ಜಮೀನನ್ನು ಸರ್ವೆಮಾಡಿ 194 ಹೊಸ ನಂಬರ್ ನೀಡಿದ್ದಾರೆ. ಆಗಸ್ಟ್ 2024ರಂದು ಇದರ ಇಂಡೀಕರಣ ಮಾಡಲು ತಹಶೀಲ್ದಾರ್ ರವರಿಗೆ ಸರ್ವೆಯವರು ನೀಡಿದ್ದಾರೆ. ಹಣ ನೀಡದ ಕಾರಣ ಇಲ್ಲಿಯವರೆಗೂ ಇಂಡೀಕರಣ ಮಾಡಿಲ್ಲ.

ತಹಸಿಲ್ದಾರ್ ವಿ.ಎಸ್. ನವೀನ್ ಕುಮಾರ್ (ಕೆಎಎಸ್) ಚನ್ನರಾಯಪಟ್ಟಣ ನಗರದ ಸುತ್ತ ಮುತ್ತ ಹಳ್ಳಿಗಳಲ್ಲಿ ಜಮೀನು ದುರಸ್ತು ಮಾಡಲು ಎಕರೆಗೆ ಲಕ್ಷಾಂತರ ರೂಪಾಯಿಗಳನ್ನು ರೈತರು ನೀಡಬೇಕೆಂದು ಕೇಳುವ ಮೂಲಕ ನೇರವಾಗಿ ಸುಲಿಗೆಗೆ ಇಳಿದಿದ್ದಾರೆ. ಲಂಚ ನೀಡದೆ ರೈತರ ಜಮೀನು ದುರಸ್ತು ಆಗೋದಿಲ್ಲ. ತಾಲ್ಲೂಕು ಕಛೇರಿಯು ಭ್ರಷ್ಟಾಚಾರ, ಅವ್ಯವಹಾರದ ಮೂಲ ಕೇಂದ್ರವಾಗಿದೆ. ಲಭ್ಯವಿರುವ ದಾಖಲೆಗಳ ಪ್ರಕಾರ ಭ್ರಷ್ಟಾಚಾರ ಮಾಡಿ ಹಣ ಗಳಿಸಬೇಕೆಂಬ ಮೂಲ ಉದ್ದೇಶವನ್ನು ಇಟ್ಟುಕೊಂಡೇ ಚನ್ನರಾಯಪಟ್ಟಣ ತಾಲ್ಲೂಕಿನ ತಹಶೀಲ್ದಾರ್‌ರವರು ಹುದ್ದೆಯನ್ನು ಅಲಂಕರಿಸಿದ್ದಾರೆ.

ಮಹಿಳೆಯರ ಘನತೆಗೆ ಕುಂದುಂಟುಮಾಡುವ ಹೇಳಿಕೆಗಳು

ರಾಜ್ಯ ಸರ್ಕಾರದ ಕುರಿತು ಅತ್ಯಂತ ಅವಾಚ್ಯ ಶಬ್ದಗಳಿಂದ ಮಹಿಳೆಯರನ್ನು ನಿಂದಿಸುವ ಪದಗಳನ್ನು ಬಳಸಿ ಮಾತನಾಡಿರುವ ತಹಶೀಲ್ದಾರ್ ಹಾಗೂ ತಾಲ್ಲೂಕು ದಂಢಾಧಿಕಾರಿ ಹುದ್ದೆಯನ್ನು ಅಪಮಾನಕ್ಕೆ ಈಡುಮಾಡಿದ್ದಾರೆ. ಕರ್ನಾಟಕ ಆಡಳಿತ ಸೇವೆ ಅಧಿಕಾರಿ ಈ ರೀತಿ ಮಾತನಾಡಿದರೆ ಅದೇ ಸರ್ಕಾರದ ಆದೇಶಗಳನ್ನು, ನೀತಿ ನಿಯಮಗಳನ್ನು ಯಾವ ರೀತಿ ಪಾಲಿಸಬಹುದು? ತಾಲ್ಲೂಕಿನ ರೈತರನ್ನು, ಜನತೆಯನ್ನು ಯಾವ ರೀತಿಯಲ್ಲಿ ಕಾಣಬಹುದು? ಈ ರೀತಿಯ ಹೇಳಿಕೆಗಳು ಮಹಿಳೆಯರ ಘನತೆಗೂ ಕುಂದುಂಟುಮಾಡಿದೆ.

ಅನಿರ್ದಿಷ್ಟಾವಧಿ ಆಹೋರಾತ್ರಿ ಧರಣಿ

ಚನ್ನರಾಯಪಟ್ಟಣ ತಾಲ್ಲೂಕಿಗೆ ಬಂದಿರುವುದೇ ಹಣ ಲೂಟಿಮಾಡಲು ಅನ್ನುವ ಮನಸ್ಥಿತಿಯ ತಹಶೀಲ್ದಾರ್‌ರಿಂದ ರೈತರು, ಜನತೆಗೆ ನ್ಯಾಯ ಸಿಗುವುದು ಗಗನ ಕುಸುಮವಾಗಿದೆ. ಇನ್ನೂ ಹಲವು ಆಡಿಯೋಗಳಲ್ಲಿ ಈ ತಹಶೀಲ್ದಾರ್ ಮಾತನಾಡಿರುವುದನ್ನು ಆಲಿಸಿದರೆ ಈತ ಕರ್ನಾಟಕ ಆಡಳಿತ ಸೇವೆಯ ಅಧಿಕಾರಿಯಾಗಿ ಮುಂದುವರೆಯುವ ನೈತಿಕತೆಯೇ ಇಲ್ಲ. ಸರ್ಕಾರಕ್ಕೂ ಕೂಡ ಗೌರವ ಬರುವುದಿಲ್ಲ. ಅತ್ಯಂತ ಕೀಳು ಮನಸ್ಥಿತಿ ಹೊಂದಿರುವ ವಿ.ಎಸ್. ನವೀನ್ ಕುಮಾರ್ ಅವರನ್ನು ತಹಸಿಲ್ದಾರ್ ಸೇವೆಯಿಂದ ಅಮಾನತು ಮಾಡಿ ತಾಲ್ಲೂಕಿನ ಜನತೆಯನ್ನು ರಕ್ಷಿಸಬೇಕು. ಮತ್ತು ಸೂಕ್ತ ತನಿಖೆ ನಡೆಸಿ ಕಾನೂನು ಕ್ರಮ ಕೈಗೊಳ್ಳಬೇಕೆಂದು ಎಲ್ಲ ಜನಪರ ಸಂಘಟನೆಗಳ ವೇದಿಕೆಯಾದ ಭ್ರಷ್ಟಾಚಾರ ವಿರೋಧಿ ಆಂದೋಲನ ವೇದಿಕೆಯ ನೇತೃತ್ವದಲ್ಲಿ 2025 ಮೇ 2 ರಿಂದ ತಹಸಿಲ್ದಾರ್ ಕಛೇರಿ ಎದುರು ಅನಿರ್ದಿಷ್ಟಾವಧಿ ಆಹೋರಾತ್ರಿ ಧರಣಿಯನ್ನು ಆರಂಭಿಸಲಾಯಿತು.

ಚಕಾರ ಎತ್ತದ ಜನಪ್ರತಿನಿಧಿಗಳು

ಈ ಹೋರಾಟ ಸತತ 13ನೇ ದಿನಕ್ಕೆ ಕಾಲಿಟ್ಟರೂ ಜಿಲ್ಲೆಯ ಲೋಕಸಭಾ ಸದ್ಯರಾದ ಕಾಂಗ್ರೆಸ್‌ನ ಶ್ರೇಯಸ್ ಎಂ.ಪಟೇಲ್ ಆಗಲಿ, ಶ್ರವಣಬೆಳಗೊಳ ವಿಧಾನಸಭಾ ಕ್ಷೇತ್ರದ ಸ್ಥಳೀಯ ಶಾಸಕರಾದ ಜೆಡಿಎಸ್‌ನ ಸಿ.ಎಸ್.ಬಾಲಕೃಷ್ಣ ಆಗಲಿ, ಜಿಲ್ಲಾ ಉಸ್ತುವಾರಿ ಸಚಿವ ಕೆ.ಎನ್.ರಾಜಣ್ಣ ಆಗಲಿ ಅಥವಾ ರಾಜ್ಯದಲ್ಲಿ ವಿರೋಧ ಪಕ್ಷದಲ್ಲಿರುವ ಬಿಜೆಪಿಯ ಯಾವ ಶಾಸಕರೂ ಈ ಕುರಿತು ಒಂದು ಸಣ್ಣ ಚಕಾರವನ್ನೂ ಎತ್ತಲಿಲ್ಲ. ಇದರಿಂದ ತಾಲ್ಲೂಕಿನ ಜನತೆ ಇವರೆಲ್ಲಾ ಒಂದೆ ಮನೆಯ ಸದಸ್ಯರಿದ್ದಂತೆ ಎಂಬುದನ್ನು ಸ್ಪಷ್ಟಪಡಿಸಿಕೊಂಡು ಮೇ 14ರಂದು ಈ ಹೋರಾಟವನ್ನು ಮತ್ತೊಂದು ಹಂತಕ್ಕೆ ಒಯ್ದು ತಹಸಿಲ್ದಾರ್ ಕಛೇರಿಗೆ ಮುತ್ತಿಗೆ ಹಾಕಿ ಬೀಗ ಜಡಿಯಲು ನಿರ್ಧರಿಸಿದರು.

ಪ್ರತಿಭಟನಾಕಾರರನ್ನು ಬಂಧಿಸಿದ ಪೊಲೀಸರು

ತಹಸಿಲ್ದಾರ್ ಕಛೇರಿಯಲ್ಲಿ ಪೊಲೀಸರನ್ನು ಸುತ್ತುವರೆದ ಕೋಟೆಯೊಂದನ್ನು ನಿರ್ಮಿಸಲಾಗಿತ್ತು. ಸತತವಾಗಿ 13 ದಿನಗಳ ಕಾಲ ನಡೆಸಿದ ಧರಣಿಯನ್ನು ವಿಫಲಗೊಳಿಸಬೇಕೆಂದು ತಾಲ್ಲೂಕು ಆಡಳಿತ ಎಲ್ಲಾ ಹಂತಗಳಲ್ಲೂ ಪೊಲೀಸರನ್ನು ಬಳಸಲು ಪ್ರಯತ್ನಿಸಿತು. ಆದರೂ ಇದಾವುದಕ್ಕೂ ಜಗ್ಗದ ಪ್ರತಿಭಟನಾಕಾರರು ಹೋರಾಟವನ್ನು ಮುಂದುವರೆಸಿದರು. ತಹಸಿಲ್ದಾರ್ ಪರವಾಗಿ ಹೋರಾಟ ಮಾಡುವವರಿಗೂ ಅಂದೇ ಅವಕಾಶವನ್ನು ಕಲ್ಪಿಸಿ ಅವರನ್ನು ಕಾಂಪೌಂಡ್ ಒಳಗೆ ಬಿಟ್ಟು ಭ್ರಷ್ಟಾಚಾರ ವಿರೋಧಿ ಆಂದೋಲನ ವೇದಿಕೆಯ ಕಾರ್ಯಕರ್ತರನ್ನು ಗೇಟಿನ ಬಳಿಯಲ್ಲೇ ತಡೆದರು. ಪೊಲೀಸರು ಮತ್ತು ಪ್ರತಿಭಟನಾಕಾರರ ನಡುವೆ ಸಂಘರ್ಷ ನಡೆದು ಅಂತಿಮವಾಗಿ ಪ್ರತಿಭಟನಾಕಾರರನ್ನೆಲ್ಲಾ ಬಂಧಿಸಿ ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ ಹಿರಿಯ ದಲಿತ ಮುಖಂಡರಾದ ಎಚ್. ಕೆ.ಸಂದೇಶ್, ಸಿಐಟಿಯು ಜಿಲ್ಲಾ ಅಧ್ಯಕ್ಷರಾದ ಧರ್ಮೇಶ್, ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾಧ್ಯಕ್ಷರಾದ ಎಚ್.ಆರ್. ನವೀನ್ ಕುಮಾರ್, ಹೋರಾಟ ಸಮಿತಿಯ ಮುಖಂಡರಾದ ಎಚ್. ಎಸ್. ಮಂಜುನಾಥ್, ರವಿ ಗೌಡಯ್ಯ, ಶಂಕರಣ್ಣ, ಚಂದ್ರಹಾಸ್, ತೇಜಸ್‌ಗೌಡ, ವಾಸುದೇವ ಕಲ್ಕೆರೆ, ಚಂದ್ರಣ್ಣ, ರಾಮಚಂದ್ರ, ಮಂಜುನಾಥ್ ಮತ್ತಿರರು ಬಂಧನಕ್ಕೊಳಗಾಗಿದ್ದರು.

ಪ್ರತಿಭಟನಾಕಾರರ ವಿರುದ್ದವೇ ಪ್ರತಿಭಟನೆ!!

ತಹಸಿಲ್ದಾರ್ ವಿ.ಎಸ್. ನವೀನ್ ಕುಮಾರ್

ಪುಟ 4 ಕ್ಕೆ





ರಾಷ್ಟ್ರಪತಿ ಮುರ್ಮು ಅವರು ಸಂವಿಧಾನದ 143(1) ನೇ ವಿಧಿಯ ಆಧಾರದ ಮೇಲೆ ಸುಪ್ರೀಂ ಕೋರ್ಟ್‌ಗೆ 14 ಪ್ರಶ್ನೆಗಳನ್ನು ಕೇಳಿದ್ದಾರೆ, ಅವುಗಳಿಗೆ ಉತ್ತರಿಸುವ ಅಗತ್ಯವಿದೆ. ಕಳೆದ 5 ವಾರಗಳಿಂದ "ಆಪರೇಷನ್ ಸಿಂಧೂರ್" ಮೇಲೆ ಕೇಂದ್ರೀಕರಿಸುತ್ತಾ, ನ್ಯಾಯಾಲಯದ ಈ ತೀರ್ಪಿನ ಬಗ್ಗೆ ಕನಿಷ್ಠ ಚರ್ಚೆಯನ್ನು ಹುಟ್ಟುಹಾಕುವ ತಂತ್ರವಾಗಿ, ಈ ವಿಧಾನವನ್ನು ಸರ್ಕಾರ ಆರಿಸಿಕೊಂಡಿದೆ. ಅತ್ಯಂತ ಸಂಕೀರ್ಣವಾದ "ಆಪರೇಷನ್ ಸಿಂಧೂರ್" ಬಗ್ಗೆ ಬಹಳ ಕಡಿಮೆ ಅವಧಿಯಲ್ಲಿ ನಿರ್ಧಾರ ತೆಗೆದುಕೊಳ್ಳಬಹುದಾದ ನಾವು, ಜನರಿಂದ ಆಯ್ಕೆಯಾದ ಶಾಸಕಾಂಗವು ಅಂಗೀಕರಿಸಿದ ಕಾನೂನನ್ನು ಕೇಂದ್ರ ಸರ್ಕಾರವು ನೇಮಿಸಿದ ರಾಜ್ಯಪಾಲರು ತಮ್ಮ ರಾಜಕೀಯ ಅಗತ್ಯಗಳಿಗಾಗಿ ಸಹಿ ಮಾಡದೆ, ರಾಜಕೀಯ ಫುಟ್ಬಾಲ್ ಆಡಲು ಮತ್ತು ಅನಿರ್ದಿಷ್ಟವಾಗಿ ವಿಳಂಬ ಮಾಡಲು ಬಿಡಬಾರದು.

ಕೊನೆಯ ದೃಶ್ಯ ಮುಗಿದಿದೆ; ರಾಜಕೀಯ ನಾಟಕ ಮುಂದುವರೆದಿದೆ

-ನ್ಯಾಯಮೂರ್ತಿ ಕೆ. ಚಂದ್ರು



ರಾಷ್ಟ್ರಪತಿ ಮುರ್ಮು ಅವರು ಸಂವಿಧಾನದ 143(1) ನೇ ವಿಧಿಯ ಆಧಾರದ ಮೇಲೆ ಸುಪ್ರೀಂ ಕೋರ್ಟ್‌ಗೆ 14 ಪ್ರಶ್ನೆಗಳನ್ನು ಕೇಳಿದ್ದಾರೆ, ಅವುಗಳಿಗೆ ಉತ್ತರಿಸುವ ಅಗತ್ಯವಿದೆ. 14 ಕರಡು ಮಸೂದೆಗಳಿಗೆ ತಮಿಳುನಾಡು ರಾಜ್ಯಪಾಲರು ಅಂಕಿತ ಹಾಕಲು ವಿಳಂಬ ಮಾಡುತ್ತಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಇತ್ತೀಚೆಗೆ ನೀಡಿದ ತೀರ್ಪಿನ ಹಿನ್ನೆಲೆಯಲ್ಲಿ ರಾಷ್ಟ್ರಪತಿಗಳ ಮನವಿಯಿಂದ ಕೆಲವರು ಆಶ್ಚರ್ಯಚಕಿತರಾಗಿದ್ದಾರೆ.

ರಾಜ್ಯಪಾಲರ ದುರಹಂಕಾರ

ಸುಪ್ರೀಂ ಕೋರ್ಟ್ ತೀರ್ಪಿನ ನಂತರ, ಕೇಂದ್ರ ಸರ್ಕಾರದೊಳಗೆ ಒಂದು ರೀತಿಯ ಗಂಭೀರ ಮೌನ ಆವರಿಸಿತ್ತು. ಮೊದಲ ಪ್ರತಿಕ್ರಿಯೆ ಉಪರಾಷ್ಟ್ರಪತಿ ಜಗದೀಪ್ ಧನಕರ್ ಅವರಿಂದ ಬಂತು. ಸಂಸತ್ತು ಅಂತಿಮ ಅಧಿಕಾರವಾಗಿದೆ ಮತ್ತು ನ್ಯಾಯಾಂಗವು ತನ್ನದೇ ಆದ ವೇಳಾಪಟ್ಟಿಯನ್ನು (ಮಸೂದೆಗಳಿಗೆ ಸಹಿ ಮಾಡುವ ವಿಷಯದಲ್ಲಿ) ಹೇರಲು ಅಥವಾ ರಾಷ್ಟ್ರಪತಿ ಮತ್ತು ರಾಜ್ಯಪಾಲರ ಅಧಿಕಾರವನ್ನು ಕಸಿದುಕೊಳ್ಳಲು ಸಾಧ್ಯವಿಲ್ಲ ಎಂದು ಧನಕರ್ ಹೇಳಿದರು. ಈ ತೀರ್ಪಿನ ಮೂಲಕ ನೇರವಾಗಿ ಬಾಧಿತರಾದವರು ತಮಿಳುನಾಡು ರಾಜ್ಯಪಾಲ ರವಿಯೇ! ಆದರೆ ಅವರು "ಶಾಂತಿಯ ಮುಖವಾಡ"ದೊಂದಿಗೆ ಈ ವಿಷಯದಲ್ಲಿ ತನಗೆ ಯಾವುದೇ ವಿಷಾದವಿಲ್ಲ ಎಂಬಂತೆ ಇದ್ದರು. ಮುಖ್ಯಮಂತ್ರಿ ಸ್ಟಾಲಿನ್ ಅವರು ತಮಿಳುನಾಡಿನ ಹಲವಾರು ವಿಶ್ವವಿದ್ಯಾಲಯಗಳ ಕುಲಪತಿ ಹುದ್ದೆಯನ್ನು ರಾಜ್ಯಪಾಲರಿಂದ ಕಸಿದುಕೊಂಡಾಗಲೂ, ಏನೂ ಸಂಭವಿಸಿಲ್ಲ ಎಂಬಂತೆ ರವಿ ವರ್ತಿಸಿದರು.

ಅದೇ ಸಮಯದಲ್ಲಿ, ಅವರು ಒಂದು ರೀತಿಯ ಅಹಂಕಾರವನ್ನು ಪ್ರದರ್ಶಿಸಿದರು. ತಮ್ಮ ಕುಲಪತಿ ಹುದ್ದೆಯಿಂದ ವಂಚಿತರಾದ ವಿಶ್ವವಿದ್ಯಾಲಯಗಳ ಉಪಕುಲಪತಿಗಳ ಸಭೆಯನ್ನು ಅವರು ತರಾತುರಿಯಲ್ಲಿ ಕರೆದರು. ಆ ಸಭೆಗೆ ಉಪ ರಾಷ್ಟ್ರಪತಿ ಜಗದೀಪ್ ಧನಕರ್ ಅವರನ್ನು ಕರೆಸಿ ನ್ಯಾಯಾಲಯದ ತೀರ್ಪನ್ನು ವಿರೋಧಿಸಿ "ಯುದ್ಧದ ಕಹಳೆ" ಮೊಳಗಿಸಿದರು. (ವ್ಯಾಪಕ ಆಹ್ವಾನಗಳು ಮತ್ತು ವಾರಗಳ ತಯಾರಿಯ ಹೊರತಾಗಿಯೂ, ಏಪ್ರಿಲ್ 25ರಂದು ಊಟಿಯಲ್ಲಿ ರಾಜಭವನ ಆಯೋಜಿಸಿದ್ದ ವಾರ್ಷಿಕ ಉಪ-ಕುಲಪತಿಗಳ ಸಮ್ಮೇಳನದಲ್ಲಿ ರಾಜ್ಯದ ವಿಶ್ವವಿದ್ಯಾಲಯ ನಾಯಕತ್ವದ ಒಂದು ಭಾಗ ಮಾತ್ರ ಭಾಗವಹಿಸಿತ್ತು. ತಮಿಳುನಾಡಿನ ರಾಜ್ಯ, ಕೇಂದ್ರ ಮತ್ತು ಖಾಸಗಿ ವಿಶ್ವವಿದ್ಯಾಲಯಗಳ ಎರಡು ದಿನಗಳ ಸಮ್ಮೇಳನವನ್ನು ಭಾರತದ ಉಪರಾಷ್ಟ್ರಪತಿ ಜಗದೀಪ್ ಧನಕರ್ ಉದ್ಘಾಟಿಸಿದರು.)

ಸಾಮಾನ್ಯವಾಗಿ, ನೀವು ಸುಪ್ರೀಂ ಕೋರ್ಟ್ ತೀರ್ಪಿನಿಂದ ಅತೃಪ್ತರಾಗಿದ್ದರೆ, ನೀವು ಪುನರ್ವಿಮರ್ಶೆಗೆ ಅರ್ಜಿ ಸಲ್ಲಿಸುತ್ತೀರಿ. ಏಕೆಂದರೆ ಸುಪ್ರೀಂ ಕೋರ್ಟ್ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸಲು ಅದರ ಮೇಲೆ ಯಾವುದೇ ನ್ಯಾಯಾಲಯವಿಲ್ಲ. ತನ್ನ ತೀರ್ಪಿನ ಪುನರ್ ಪರಿಶೀಲನೆಯನ್ನು ಕೋರಲು ಮತ್ತೊಂದು ಕಾರ್ಯವಿಧಾನವನ್ನು ಸಹ ನ್ಯಾಯಾಲಯವು ರಚಿಸಿದೆ. ಕೆಲವು ಅಪರೂಪದ ಸಂದರ್ಭಗಳಲ್ಲಿ, ಕ್ಯುರೇಟಿವ್ ಅರ್ಜಿ(curative petition)ಯನ್ನು ಸಲ್ಲಿಸುವ ಆಯ್ಕೆಯೂ ಇರುತ್ತದೆ. ಆದರೆ ಈ ಕಾರ್ಯವಿಧಾನವನ್ನು ಅನುಸರಿಸಲು, ಸಮರ್ಥನೆಯ ಪ್ರಮಾಣಪತ್ರಗಳನ್ನು ಇಬ್ಬರು ಪ್ರಮುಖ ಹಿರಿಯ ವಕೀಲರಿಂದ ಪಡೆಯಬೇಕು. ಅಲ್ಲೇ ಅವರಿಗೆ ಸಮಸ್ಯೆ ಇದ್ದಿರಬಹುದು. ಅಂತಹ ಹಿರಿಯ ವಕೀಲರು ಲಭ್ಯವಿಲ್ಲದಿರಬಹುದು. ಧನಕರ್ ಅವರ "...ಧ್ವನಿ"ಯನ್ನು ನೋಡುವ ಇನ್ನೊಂದು ವಿಧಾನವಿದೆ. ನ್ಯಾಯಾಲಯದ ತೀರ್ಪಿನ ಆಧಾರವನ್ನು ತೆಗೆದುಹಾಕಲು ಸಂಸತ್ತಿನಲ್ಲಿ ಹೊಸ ಕಾನೂನು ತರಬಹುದು. ಆದರೆ ಈ ಸಮಸ್ಯೆಯ ಪ್ರಾಮುಖ್ಯತೆಯ ಕಾರಣದಿಂದಾಗಿ ಇದು ಅನೇಕ ಚರ್ಚೆಗಳಿಗೆ ಕಾರಣವಾಗುತ್ತದೆ. ಹಾಗಾಗಿ, ಕಳೆದ 5 ವಾರಗಳಿಂದ "ಆಪರೇಷನ್ ಸಿಂಧೂರ್" ಮೇಲೆ ಕೇಂದ್ರೀಕರಿಸುತ್ತಾ, ನ್ಯಾಯಾಲಯದ ಈ ತೀರ್ಪಿನ ಬಗ್ಗೆ ಕನಿಷ್ಠ ಚರ್ಚೆಯನ್ನು ಹುಟ್ಟುಹಾಕುವ ತಂತ್ರವಾಗಿ, ವಿವರಣೆ ನೀಡಬೇಕೆಂದು ರಾಷ್ಟ್ರಪತಿಗಳು ನ್ಯಾಯಾಲಯವನ್ನು ಕೇಳುವ ವಿಧಾನವನ್ನು ಅವರು ಆರಿಸಿಕೊಂಡಿದ್ದಾರೆ.

ಕೇರಳದ ಪ್ರಕರಣದಲ್ಲಿ ಸಂವಿಧಾನದ 74ನೇ ತಿದ್ದುಪಡಿಯ ಪ್ರಕಾರ ರಾಷ್ಟ್ರಪತಿಗಳು ಸರ್ಕಾರದ ನಾಮಮಾತ್ರದ ಮುಖ್ಯಸ್ಥರು ಮಾತ್ರ ಮತ್ತು ಅವರು ಸಚಿವ ಸಂಪುಟದ ಸೂಚನೆಗಳ ಮೇರೆಗೆ ಕಾರ್ಯನಿರ್ವಹಿಸಬೇಕು ಎಂದು ಸ್ಪಷ್ಟಪಡಿಸಿದ ನಂತರವೂ, ರಾಷ್ಟ್ರಪತಿಗಳ ಮೂಲಕ ನ್ಯಾಯಾಲಯವನ್ನು ವಿವರಣೆ ಕೇಳುತ್ತಿರುವವರು ನಿಜವಾಗಿಯೂ ಯಾರು? ಅವರು ಪ್ರಧಾನಿ ನರೇಂದ್ರ ಮೋದಿ ತಾನೆ! ಅನೇಕ ಸಾಂವಿಧಾನಿಕ ಕಾನೂನು ತಜ್ಞರು ಸರ್ಕಾರದ ಕೈಯಲ್ಲಿದ್ದಾರೆ. ಅವರಲ್ಲಿ, ಸರ್ಕಾರಿ ಕಾನೂನು ತಜ್ಞರಲ್ಲಿ ಬಹಳ ಮುಖ್ಯರಾದ ಅಟಾರ್ನಿ ಜನರಲ್ ಕೂಡ ಸೇರಿದ್ದಾರೆ. ಅವರು ಸಂವಿಧಾನದ 76(2)ನೇ ವಿಧಿಯ ಅಡಿಯಲ್ಲಿ ನೇಮಿಸಲ್ಪಟ್ಟವರು. ಅವರು ಕೇಂದ್ರ ಸರ್ಕಾರಕ್ಕೆ ಮತ್ತು ರಾಷ್ಟ್ರಪತಿಗಳಿಗೆ ಕಾನೂನು ವಿಷಯಗಳಲ್ಲಿ ಸಲಹೆ ಮತ್ತು ಸೂಚನೆಗಳನ್ನು ನೀಡುವ ಜವಾಬ್ದಾರಿಯನ್ನು ಹೊಂದಿರುತ್ತಾರೆ. ಅವರ ಅಭಿಪ್ರಾಯವನ್ನು ಏಕೆ ಕೇಳಲಿಲ್ಲ ಎಂಬುದು ಸ್ಪಷ್ಟವಾಗಿಲ್ಲ.

ತಮಿಳುನಾಡಿನ ಬಗ್ಗೆ ನ್ಯಾಯಾಲಯದ ತೀರ್ಪು ಬಂದ ನಂತರ ನಡೆಯುತ್ತಿರುವ ಘಟನೆಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ, ಕೇಂದ್ರ ಸರ್ಕಾರವು ತೆರೆಮರೆಯಲ್ಲಿ ಮೋಸದ ನಾಟಕವಾಡಲು ಪ್ರಯತ್ನಿಸುತ್ತಿದೆ ಎಂದು ತೋರುತ್ತದೆ. ತಮಿಳುನಾಡು ಪ್ರಕರಣದ ತೀರ್ಪು ಕೇರಳ ಸರ್ಕಾರದ ಪ್ರಕರಣಕ್ಕೂ ಅನ್ವಯಿಸುತ್ತದೆ ಎಂದು ಹೇಳುವ ಮೂಲಕ ಖ್ಯಾತ ರಾಜಕೀಯ ನ್ಯಾಯಶಾಸ್ತ್ರಜ್ಞ ಕೆ.ಕೆ. ವೇಣುಗೋಪಾಲ್ ಕೇರಳದ ಪ್ರಕರಣವನ್ನು ಹಿಂಪಡೆಯಲು ಪ್ರಯತ್ನಿಸಿದಾಗ, ಕೇಂದ್ರ ಸರ್ಕಾರವು ಆಕ್ಷೇಪಿಸಿತು. ತಮಿಳುನಾಡು ಮತ್ತು ಕೇರಳದ ಪ್ರಕರಣಗಳು ಅದು ಒಂದೇ ಅಲ್ಲ ಎಂದು ಹೇಳಿದೆ.

ಇದು ನಿಜವಾಗಿದ್ದರೆ ಕೇಂದ್ರ ಸರ್ಕಾರವು ಪ್ರಕರಣವನ್ನು ವಾದಿಸಬಹುದಿತ್ತು; ಅಥವಾ ಅವರು ಕೇರಳದ ಪ್ರಕರಣವನ್ನು ಹೆಚ್ಚುವರಿ ನ್ಯಾಯಾಧೀಶರನ್ನು ಹೊಂದಿರುವ ಪೀಠಕ್ಕೆ ವರ್ಗಾಯಿಸಲು ಕೇಳಬಹುದಿತ್ತು. ಆದರೆ ಅವರು ಹಾಗೆ ಮಾಡಲಿಲ್ಲ. ಅವರ ಮೋಸದ ಆಟವು ಹಲವು ಅಂಶಗಳನ್ನು ಹೊಂದಿರುವಂತೆ ತೋರುತ್ತದೆ. ಈ ವಿಷಯದ ಮೇಲಿನ ಕಾನೂನು ಚರ್ಚೆಗಳನ್ನು ಕುದಿಯುವ ಹಂತದಲ್ಲಿ ಇರಿಸುವಾಗ, ಅವರು ಕಡಿಮೆ ಹಾನಿಕಾರಕ ಕಾನೂನು ತಂತ್ರವನ್ನು ಅಳವಡಿಸಿಕೊಂಡಿದ್ದಾರೆ, ಅವುಗಳೆಂದರೆ, ರಾಷ್ಟಪತಿ ಮೂಲಕ ನ್ಯಾಯಾಲಯದಿಂದ ವಿವರಣೆಯನ್ನು ಕೇಳುವ ವಿಧಾನ.

ಮೂರು ಸಂಭಾವ್ಯ ಪ್ರತಿಕ್ರಿಯೆಗಳು

ರಾಷ್ಟಪತಿಯವರಿಂದ ವಿವರಣೆಯನ್ನು ಕೋರುವ ಕಾರ್ಯವಿಧಾನಗಳ ಬಗ್ಗೆ ತಿಳಿದಿರುವವರಿಗೆ ನ್ಯಾಯಾಲಯವು ಮೂರು ಸಂಭಾವ್ಯ ಪ್ರತಿಕ್ರಿಯೆಗಳಲ್ಲಿ ಯಾವುದನ್ನಾದರೂ ಪ್ರಸ್ತುತಪಡಿಸಬಹುದು ಎಂಬುದು ಚೆನ್ನಾಗಿ ತಿಳಿದಿದೆ. ನ್ಯಾಯಾಲಯವು ತನ್ನ ಅಭಿಪ್ರಾಯವನ್ನು ನೀಡಲು ನಿರಾಕರಿಸಬಹುದು. ನ್ಯಾಯಾಲಯವು ಒಂದು ಅಭಿಪ್ರಾಯವನ್ನು ನೀಡಿದರೂ, ಅದು ರಾಷ್ಟಪತಿಯವರನ್ನು (ಅಂದರೆ ಸಚಿವ ಸಂಪುಟ) ನಿಯಂತ್ರಿಸುವುದಿಲ್ಲ. ನ್ಯಾಯಾಲಯದ ಅಭಿಪ್ರಾಯವು ಕೇವಲ ಒಂದು ಅಭಿಪ್ರಾಯವಾಗಿಯೇ ಇರುತ್ತದೆ. ಅದನ್ನು ಜಾರಿಗೊಳಿಸಲು ಯಾರಿಂದಲೂ ಸಾಧ್ಯವಿಲ್ಲ. ಸುಪ್ರೀಂ ಕೋರ್ಟ್ ಸಂವಿಧಾನದ 141 ನೇ ವಿಧಿಯ ಅಡಿಯಲ್ಲಿ ಜಾರಿಗೆ ತಂದ ಕಾನೂನುಗಳು ಮಾತ್ರವೇ ಕೆಳ ನ್ಯಾಯಾಲಯಗಳು ಸೇರಿದಂತೆ ಎಲ್ಲವೂ ಬದ್ಧವಾಗಿರುತ್ತವೆ. ಅಥವಾ ನ್ಯಾಯಾಲಯದ ಅಭಿಪ್ರಾಯ ಸರ್ಕಾರಕ್ಕೆ ಕಹಿಯಾಗುವ ಸಾಧ್ಯತೆ ಇದೆ. ಈ ಎಲ್ಲಾ ಮೂರು ಸಂದರ್ಭಗಳಲ್ಲಿ, ಚರ್ಚೆಯನ್ನು ಅನಿರ್ದಿಷ್ಟವಾಗಿ ಕುದಿಯುತ್ತಿರುವಂತೆ ಇರಿಸಬಹುದು.

ಸಂವಿಧಾನ ಜಾರಿಗೆ ಬಂದ 75 ವರ್ಷಗಳಲ್ಲಿ, ರಾಷ್ಟಪತಿ ಮತ್ತು ರಾಜ್ಯಪಾಲರ ಅಧಿಕಾರ ವ್ಯಾಪ್ತಿಗೆ ಸಂಬಂಧಿಸಿದಂತೆ ಹಲವಾರು ಪ್ರಕರಣಗಳು ದಾಖಲಾಗಿವೆ. 1974 ರ ಶಂಶೇರ್ ಸಿಂಗ್ (ಶಂಶೇರ್ ಸಿಂಗ್ ತಿ. ಪಂಜಾಬ್ ರಾಜ್ಯ) ಪ್ರಕರಣವು ಅತ್ಯಂತ ಮಹತ್ವದ ನಿರ್ಣಾಯಕ ಪ್ರಕರಣವಾಗಿದೆ. ಈ ಪ್ರಕರಣದಲ್ಲಿಯೇ ಸುಪ್ರೀಂ ಕೋರ್ಟ್, ರಾಜ್ಯಪಾಲರು ಸಚಿವ ಸಂಪುಟದ ಸೂಚನೆಗಳ ಮೇರೆಗೆ ಕಾರ್ಯನಿರ್ವಹಿಸಬೇಕು ಮತ್ತು ತಮ್ಮನ್ನು ಬ್ರಿಟನ್ನಿನ ಚಕ್ರವರ್ತಿ ಅಥವಾ ಅಮೆರಿಕದ ಅಧ್ಯಕ್ಷರೆಂದು ಭಾವಿಸಬಾರದು ಎಂದು ತೀರ್ಪು ನೀಡಿತು. ರಾಜ್ಯಪಾಲರು ಸಚಿವ ಸಂಪುಟದ ಜೊತೆ ಸಮಾಲೋಚಿಸದೆ ಜಿಲ್ಲಾ ನ್ಯಾಯಾಧೀಶರನ್ನು ವಜಾಗೊಳಿಸುವ ಧೈರ್ಯ ಮಾಡಿದರು ಮತ್ತು ಈ ವಿಷಯವನ್ನು ರಾಜ್ಯಪಾಲರು ಅಥವಾ ಸರ್ಕಾರಕ್ಕೆ ಹಿಂತಿರುಗಿಸುವ ಬದಲು, ನ್ಯಾಯಾಲಯದ ಏಳು ನ್ಯಾಯಾಧೀಶರ ಪೀಠವು ನೇರವಾಗಿ ತೀರ್ಪಿನ ಮೂಲಕ ಪರಿಹಾರವನ್ನು ಜಾರಿಗೆ ತಂದಿತು. ಮತ್ತು ಈ ಪ್ರಕರಣದಲ್ಲಿಯೇ ನ್ಯಾಯಾಲಯವು "ಅನುಪಯುಕ್ತ ವಿಳಂಬ ಕ್ರಮಗಳ ಸಿದ್ಧಾಂತ"ವನ್ನು ಎದುರಿಸಿತು.

ಅನುಮೋದಿಸುವ ಹಕ್ಕು ಮಾತ್ರ

ಶಂಶೇರ್ ಸಿಂಗ್ ಪ್ರಕರಣವು ಸಂವಿಧಾನದ 163 ನೇ ವಿಧಿ ಮತ್ತು 200 ಮತ್ತು 201 ನೇ ವಿಧಿಗಳ ಅಡಿಯಲ್ಲಿ ರಾಜ್ಯಪಾಲರ ಕಾನೂನುಗಳ ಅನುಮೋದನೆಯ ಬಗ್ಗೆ ಸ್ಪಷ್ಟವಾದ ತೀರ್ಪನ್ನು ನೀಡಿತು: ರಾಜ್ಯಪಾಲರು ಒಂದು ಕಾನೂನು ಸರಿಯೋ ತಪ್ಪೋ ಎಂದು ನಿರ್ಣಯಿಸುವವರಲ್ಲ; ಕಾನೂನುಗಳಿಗೆ ಅಂಗೀಕಾರ ನೀಡುವ ಹಕ್ಕನ್ನು ಮಾತ್ರವೇ ಹೊಂದಿರುತ್ತಾರೆ. ಶಾಸಕಾಂಗವು ಒಂದು ಕಾನೂನನ್ನು ಅಂಗೀಕರಿಸಿದಾಗ ರಾಜ್ಯಪಾಲರು ಅದನ್ನು ತಮ್ಮ ಆಕ್ಷೇಪಣೆಯೊಂದಿಗೆ ಹಿಂದಿರುಗಿಸಿದರೆ, ಮತ್ತು ಶಾಸಕಾಂಗವು ಅದೇ ಕಾನೂನನ್ನು ಮತ್ತೊಮ್ಮೆ ಅಂಗೀಕರಿಸಿ ರಾಜ್ಯಪಾಲರಿಗೆ ಕಳುಹಿಸಿದರೆ, ಅವರು ಆ ಕಾನೂನನ್ನು ಅನುಮೋದಿಸಬೇಕು. ಅವರಿಗೆ ಬೇರೆ ದಾರಿಯಿಲ್ಲ. ಆದರೆ ರಾಜ್ಯಪಾಲರು ಎಷ್ಟು ಸಮಯದೊಳಗೆ ಅನುಮೋದನೆ ನೀಡಬೇಕು? ರಾಜ್ಯಪಾಲರು ಎಷ್ಟು ಸಮಯ ತೆಗೆದುಕೊಳ್ಳಬಹುದು?

ಸಹಿ ಮಾಡಲು ಗಡುವು ಏನು?

ನಮ್ಮ ಸಂವಿಧಾನದ ನಿರ್ಮಾತೃಗಳು ಈ ಅವಧಿಯನ್ನು "ಸಾಧ್ಯವಾದಷ್ಟು ಬೇಗ" ಎಂದು ಸೂಕ್ಷ್ಮವಾಗಿ ವ್ಯಾಖ್ಯಾನಿಸಿದ್ದಾರೆ. ಆದರೆ, ರಾಜ್ಯಪಾಲರು ಇದನ್ನು ಅನಿರ್ಧಿಷ್ಟವಾಗಿ ವಿಳಂಬಗೊಳಿಸಲು ಪರವಾನಗಿಯನ್ನಾಗಿ ದುರುಪಯೋಗಪಡಿಸಿಕೊಂಡರೆ ನ್ಯಾಯಾಂಗದ ಮುಂದೆ ಯಾವ ಕಾನೂನು ನೆರವು ಲಭ್ಯವಿದೆ? ಆದ್ದರಿಂದ, ಯಾವುದೇ ಸಮರ್ಥನೆ ಇಲ್ಲದೆ ವಿಳಂಬವಾದ ಮಸೂದೆಗಳಿಗೆ ತಕ್ಷಣವೇ ಅನುಮೋದನೆ ನೀಡಿ ಎಂದು ನ್ಯಾಯಾಲಯಗಳು ಕೇಳುತ್ತಿವೆ. ರಾಜ್ಯಪಾಲ ಆರ್.ಎನ್.ರವಿ ಸಮಸ್ಯೆಯಿಂದ ಉಂಟಾದ ಈ ವಿಳಂಬ ಎರಡು ವರ್ಷಗಳಿಂದ ನಡೆಯುತ್ತಿದೆ. ಆದ್ದರಿಂದ, ನ್ಯಾಯಾಲಯವು ಮತ್ತೊಮ್ಮೆ "ಅನುಪಯುಕ್ತ ವಿಳಂಬ ಕ್ರಮಗಳ ಸಿದ್ಧಾಂತ"ವನ್ನು ಎದುರಿಸಿತು ಮತ್ತು ಮಸೂದೆಗಳಿಗೆ ನೇರವಾಗಿ ಅಂಗೀಕಾರ ಕೊಟ್ಟಿತು.

"ಸಾಧ್ಯವಾದಷ್ಟು ಬೇಗ" ಎಂಬುದಕ್ಕೆ ಸಂಬಂಧಿಸಿದಂತೆ ರಾಷ್ಟ್ರಪತಿಗಳಿಂದ ನ್ಯಾಯಾಲಯದಿಂದ ವಿವರಣೆ ಕೇಳುವ ಅಗತ್ಯವಿಲ್ಲ. ಶ್ರೀಲಂಕಾದ ಸಂವಿಧಾನದ ಪ್ರಕಾರ, ಅಲ್ಲಿ ಕಾನೂನು ಜಾರಿಗೆ ತರುವ ಮೊದಲು ಸುಪ್ರೀಂ ಕೋರ್ಟ್‌ನ ಅಭಿಪ್ರಾಯವನ್ನು ಪಡೆಯಲಾಗುತ್ತದೆ. ನ್ಯಾಯಾಧೀಶರ ಅಭಿಪ್ರಾಯದ ನಂತರ ಕಾನೂನನ್ನು ಅಂಗೀಕರಿಸಿದರೆ, ಅದರ ವಿರುದ್ಧ ಯಾರೂ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಲು ಸಾಧ್ಯವಿಲ್ಲ. ಆದರೆ ಭಾರತದಲ್ಲಿ, ಯಾವುದೇ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡುವ ಮೂಲಕ ಯಾರಾದರೂ ಯಾವುದೇ ಕಾನೂನನ್ನು ಪ್ರಶ್ನಿಸಬಹುದು. ನ್ಯಾಯಾಲಯದ ಅಭಿಪ್ರಾಯವು ಸರಕಾರಕ್ಕೆ ಕಟ್ಟಪ್ಪಣೆ ಎಂದು ಕಾಣದಿರುವಾಗ, ಸರ್ಕಾರವು ಈ ಅನಗತ್ಯ ಮತ್ತು ಅತಿರಂಜಿತ ವಿಧಾನವನ್ನು ಅಳವಡಿಸಿಕೊಳ್ಳುತ್ತಿರುವುದು ದುರದೃಷ್ಟಕರ. ಇದು ಕೆಲ ಕಾನೂನು ಪಂಡಿತರ ಜೇಬು ತುಂಬಿಸುವ ಉದ್ದೇಶವಿದೆಯೇ ಎಂಬುದು ಗೊತ್ತಾಗಿಲ್ಲ. ಇದೂ ಅಲ್ಲದೆ, ರಾಷ್ಟ್ರವು ಬಿಕ್ಕಟ್ಟನ್ನು ಎದುರಿಸುತ್ತಿರುವ ಈ ಸಮಯದಲ್ಲಿ ಇಂತಹ ಕ್ರಮಗಳ ಅಗತ್ಯವಿದೆಯೇ ಎಂಬ ಪ್ರಶ್ನೆ ಮೂಡುತ್ತದೆ.

ಪುಟ 12 ಕ್ಕೆ

ರಾಷ್ಟ್ರೀಯ ಸಹಮತದ 'ಉತ್ಪಾದನೆ' ಸಲ್ಲದು

ಪ್ರಕಾಶ್ ಕಾರತ್


ಪಹಲ್ಗಾಮ್‌ನ ಬೈಸರನ್ ಕಣಿವೆಯಲ್ಲಿ ನಡೆದ ಘೋರ ಹತ್ಯಾಕಾಂಡಕ್ಕೆ ಭಾರತದ ಸಂಭಾವ್ಯ ಪ್ರತಿಕ್ರಿಯೆ ಏನಿರಬೇಕು ಎನ್ನುವುದನ್ನು ಚರ್ಚಿಸಲು ಸಂಸತ್ತಿನಲ್ಲಿ ಕರೆಯಲಾದ ನಾನಾ ರಾಜಕೀಯ ಪಕ್ಷಗಳ ನಾಯಕರು ಭಾಗವಹಿಸಿದ್ದ ಎರಡೂ ಸರ್ವ–ಪಕ್ಷ ಸಭೆಗಳಿಂದ ಪ್ರಧಾನಿ ನರೇಂದ್ರ ಮೋದಿ ದೂರವುಳಿದ ವಾಸ್ತವಿಕತೆಯ ಹೊರತಾಗಿಯೂ ಲಷ್ಕರ್–ಎ–ತೈಬಾಗೆ (ಎಲ್‌ಇಟಿ) ಸಂಪರ್ಕವಿರುವ ಭಯೋತ್ಪಾದಕರು ನಡೆಸಿದ್ದ ಹತ್ಯೆಗಳನ್ನು ಸಭೆಗಳಲ್ಲಿ ಭಾಗವಹಿಸಿದ್ದ ಎಲ್ಲ ಪಕ್ಷಗಳು ಏಕ ಕಂಠದಿಂದ ಖಂಡಿಸಿದವು. ಸಭೆಗಳಲ್ಲಿ ಭಾಗವಹಿಸದೇ ಇದ್ದುದಕ್ಕೆ ಕಾರಣವೇನು ಎಂಬುದು ಪ್ರಧಾನಿ ಮೋದಿಗೇ ಗೊತ್ತಿರಬೇಕು. ಎಲ್‌ಇಟಿಯನ್ನು ಭಯೋತ್ಪಾದಕ ಸಂಘಟನೆ ಎಂದು ವಿಶ್ವ ಸಂಸ್ಥೆಯ ಸಂಬಂಧಪಟ್ಟ ಸಮಿತಿ ಘೋಷಿಸಿದೆ. ಸಭೆಯಲ್ಲಿ ಪಾಲ್ಗೊಂಡಿದ್ದ ಎಲ್ಲ ಪಕ್ಷಗಳ ನೇತಾರರು ಹತ್ಯೆಗಳಿಗೆ ಪ್ರತಿಯಾಗಿ ಸರ್ಕಾರ ಕೈಗೊಳ್ಳುವ ಸೂಕ್ತ ಕ್ರಮಗಳಿಗೆ ಬೆಂಬಲವನ್ನು ಸೂಚಿಸಿದರು. ಮಿಲಿಟರಿ ಕಾರ್ಯಾಚರಣೆ ಮುಕ್ತಾಯವಾಗುವವರೆಗೆ ಸರ್ವಪಕ್ಷಗಳು ಯಾವುದೇ ಪ್ರಶ್ನೆಗಳನ್ನು ಎತ್ತದಿರುವುದರಿಂದ ಕದನ ವಿರಾಮ ಘೋಷಣೆಯಾಗುವವರೆಗೆ ಈ ಒಮ್ಮತ ಅಚಲವಾಗಿತ್ತು.

ಆದರೆ, ತಾವು ಹಾಗೂ ತಮ್ಮ ಆಡಳಿತದ ಮಧ್ಯಸ್ಥಿಕೆಯಿಂದಾಗಿ ಕದನ ವಿರಾಮ ಏರ್ಪಟ್ಟಿತು ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಏಕಪಕ್ಷೀಯವಾಗಿ ಪ್ರಕಟಿಸಿದ್ದು ಮತ್ತು ವಾಣಿಜ್ಯ ಪರಿಣಾಮಗಳ ಬಗೆಗಿನ ಬೆದರಿಕೆಯಿಂದಾಗಿ ಭಾರತ ಮತ್ತು ಪಾಕಿಸ್ತಾನ ಕದನ ವಿರಾಮಕ್ಕೆ ಒಪ್ಪುವ ಒತ್ತಡಕ್ಕೆ ಒಳಗಾಗುವಂತೆ ಮಾಡಲಾಯಿತೆಂದು ಟ್ರಂಪ್ ಆನಂತರ ಪದೇ ಪದೇ ಹೇಳಿಕೊಂಡಿದ್ದು ಅಚ್ಚರಿದಾಯಕ ಮಾತ್ರವಲ್ಲದೆ ಸಿಮ್ಲಾ ಒಪ್ಪಂದದಲ್ಲಿ ಅಡಕವಾಗಿರುವ ತತ್ವಗಳ ಉಲ್ಲಂಘನೆಯೂ ಆಗಿದೆ. ಸಂಧಾನ ಮಾತುಕತೆಗಳ ಮೂಲಕ ರೂಪುಗೊಂಡ ಸಿಮ್ಲಾ ಒಡಂಬಡಿಕೆಯು ಎಲ್ಲ ಸಂಕೀರ್ಣ ವಿಷಯಗಳನ್ನು ಚರ್ಚೆಯ ಮೂಲಕ ದ್ವಿಪಕ್ಷೀಯವಾಗಿ ಬಗೆಹರಿಸಿಕೊಳ್ಳಲು ಬದ್ಧವಾಗಿದೆ. ಆದಾಗ್ಯೂ ಕಾಶ್ಮೀರ ವಿಚಾರವನ್ನು ಅಂತಾರಾಷ್ಟ್ರೀಯಗೊಳಿಸಲು ಪಾಕಿಸ್ತಾನ ಸತತವಾಗಿ ಪ್ರಯತ್ನಿಸುತ್ತಾ ಬಂದಿದೆ. ಒಂದು ವೇಳೆ ಟ್ರಂಪ್ ಹೇಳಿಕೆಯನ್ನು ಹಾಗೆಯೇ ಒಪ್ಪಿಕೊಂಡಲ್ಲಿ ಕಾಶ್ಮೀರವನ್ನು ಅಂತಾರಾಷ್ಟ್ರೀಯಗೊಳಿಸಲಾಗಿದೆ ಎನ್ನುವುದು ಇದರಿಂದ ಗೊತ್ತಾಗುತ್ತದೆ. ವ್ಯೂಹಾತ್ಮಕ ಮತ್ತು ರಾಜತಾಂತ್ರಿಕ ಪರಿಣಾಮಗಳನ್ನು ಅದು ಒಳಗೊಂಡಿದೆ.

ಕದನ ವಿರಾಮವು ದ್ವಿಪಕ್ಷೀಯ ಚರ್ಚೆಗಳ ಫಲವೆಂದು ಭಾರತೀಯ ಅಧಿಕಾರಿಗಳು ಹೇಳುತ್ತಲೇ ಬಂದಿದ್ದರೂ ಸಾಕಷ್ಟು ಗೊಂದಲಗಳು ಉಳಿದುಕೊಂಡಿವೆ; ನಿಜವಾದ ಅನುಮಾನ ಅಲ್ಲದಿದ್ದರೂ ಈ ಹೇಳಿಕೆಗಳ ಸತ್ಯಾಸತ್ಯತೆ ಬಗ್ಗೆ ಅನುಮಾನಗಳಂತೂ ಇದ್ದೇ ಇವೆ.

ಅಧಿಕೃತ ಸ್ಪಷ್ಟನೆ ಅಗತ್ಯ

ಈ ಮುಖ್ಯ ವಿಚಾರವಲ್ಲದೆ ಅಧಿಕೃತ ಸ್ಪಷ್ಟನೆ ಅಗತ್ಯವಾದ ಇತರ ವಿಷಯಗಳೂ ಇವೆ. ವಿಶೇಷವಾಗಿ ಮಿಲಿಟರಿ ಕಾರ್ಯಾಚರಣೆಗಳ ಸುತ್ತ ಹಬ್ಬಿರುವ ವರದಿಗಳ ಬಗ್ಗೆ ಸ್ಪಷ್ಟನೆ ಬೇಕಾಗಿದೆ.



ಮುಖ್ಯವಾಹಿನಿ ಮಾಧ್ಯಮಗಳು ವಿಲಕ್ಷಣ ಪ್ರಚಾರ ಹಾಗೂ ಪರಿಶೀಲಿಸದ ಕ್ಲೇಮುಗಳನ್ನು ಮಾಡುತ್ತಿರುವುದರಿಂದ ವಿಶೇಷವಾಗಿ ಸ್ಪಷ್ಟನೆಯ ಅಗತ್ಯವಿದೆ. ಈ ವರದಿಗಳು, ಅದರಲ್ಲೂ ಮುಖ್ಯವಾಗಿ ಮೇ 8ರ ರಾತ್ರಿ ಮಾಡಿದ ಪ್ರಸಾರಗಳು ಎಷ್ಟು ಅತಿರೇಕದ್ದಾಗಿತ್ತೆಂದರೆ, ಭಾರತೀಯ ಮಾಧ್ಯಮಗಳನ್ನು ಬಹುತೇಕ ಅಂತಾರಾಷ್ಟ್ರೀಯ ಸಮುದಾಯ ಖಂಡಿಸಿದೆ. ಈ ತಪ್ಪು ವರದಿಗಳು ಅಂತಿಮವಾಗಿ ನಮ್ಮ ರಾಷ್ಟ್ರೀಯ ಹಿತಾಸಕ್ತಿಗೆ ನೋವುಂಟು ಮಾಡುತ್ತವೆ. ಹೀಗಾಗಿ ಕದನವಿರಾಮದ ನಂತರ, ಸರಕಾರ ಸಂಸತ್ತಿನಲ್ಲಿ ಅಧಿಕೃತ ಹೇಳಿಕೆ ನೀಡುವುದು ತುರ್ತು ಅಗತ್ಯವಾಗಿದೆ. ಇಷ್ಟು ಮಾತ್ರವಲ್ಲದೆ, ಒಂದು ಶತಕೋಟಿ ಡಾಲರ್ ಸಾಲಕ್ಕೆ ಪಾಕಿಸ್ತಾನ ಮಾಡಿಕೊಂಡಿದ್ದ ಮನವಿಗೆ ಅಂತಾರಾಷ್ಟ್ರೀಯ ಹಣಕಾಸು ನಿಧಿಯ (ಐಎಂಎಫ್) ಆಡಳಿತ ಮಂಡಳಿಯಿಂದ ಯಾವುದೇ ಅಭ್ಯಂತರ ಅಥವಾ ವಿಳಂಬವಿಲ್ಲದೆ ಅನುಮತಿ ಸಿಕ್ಕ ವಿಚಾರದಲ್ಲಿ ರಾಜತಾಂತ್ರಿಕ ವೈಫಲ್ಯವಾಗಿರುವುದು ಸ್ಪಷ್ಟವಾಗಿದೆ.

ಸಂಸತ್ತಿನ ವಿಶೇಷ ಅಧಿವೇಶನವನ್ನು ನಡೆಸುವುದು ಈ ಹಿನ್ನೆಲೆಯಲ್ಲಿ ತುರ್ತು ಮಹತ್ವದ್ದಾಗಿದೆ. ಸರಕಾರ ನೀಡುವ ಅಧಿಕೃತ ಹೇಳಿಕೆ ಹಾಗೂ ಅದರ ಬೆನ್ನಲ್ಲೇ ಸದನದಲ್ಲಿ ನಡೆಯುವ ಚರ್ಚೆಯು ನಿಜವಾದ ರಾಷ್ಟ್ರೀಯ ಸಹಮತವನ್ನು ರೂಪಿಸಲು ಅವಕಾಶ ನೀಡುತ್ತಿತ್ತು. ಇಂಥ ಒಂದು ಕ್ರಮವು ಪಾರದರ್ಶಕತೆ ಮತ್ತು ರಾಜಕೀಯ ಕ್ಷೇತ್ರದಲ್ಲಿರುವ ಬಹುಮುಖಿ ಹಾಗೂ ವೈವಿಧ್ಯಮಯ ಪರಿಕಲ್ಪನೆಗಳ ಸಂಯೋಜನೆಯನ್ನು ಖಾತರಿಪಡಿಸಬಹುದಿತ್ತು.

ಉತ್ಪಾದನೆಯಲ್ಲ

ವ್ಯಾಖ್ಯಾನದ ಪ್ರಕಾರ ಹೇಳುವುದಾದರೆ, ಸಹಮತವು ಹೇರುವಂಥದ್ದಲ್ಲ ಅಥವಾ ಉತ್ಪಾದಿಸುವಂಥದ್ದೂ ಅಲ್ಲ; ಅದು ಪ್ರಜಾಸತ್ತಾತ್ಮಕ ಪ್ರಕ್ರಿಯೆ ಮೂಲಕ ರೂಪುಗೊಳ್ಳಬೇಕು. ವಿವಿಧ ಅಭಿಪ್ರಾಯಗಳ ಅಭಿವ್ಯಕ್ತಿಯು ಈ ಸಹಮತ ರೂಪುಗೊಳ್ಳುವಲ್ಲಿ ಮಹತ್ವದ ಭಾಗವಾಗಿರುತ್ತದೆ. ಆದಾಗ್ಯೂ ತನಗೇ ಗೊತ್ತಿರುವ ಕಾರಣಗಳಿಗಾಗಿ ಸರಕಾರವು ವಿಶೇಷ ಅಧಿವೇಶನದ ಈ ಬೇಡಿಕೆಗೆ ಧನಾತ್ಮಕವಾಗಿ ಸ್ಪಂದಿಸಿಲ್ಲ. ಅದಕ್ಕೆ ಬದಲಾಗಿ, ಭಯೋತ್ಪಾದನೆ ಮತ್ತು ಅದರ ಪೋಷಕರನ್ನು ಖಂಡಿಸುವಲ್ಲಿ ರಾಜಕೀಯ ಪಕ್ಷಗಳ ಬೆಂಬಲವೇ ವಿಶಾಲ ರಾಷ್ಟ್ರೀಯ ಸಹಮತದ ಪ್ರದರ್ಶನವಾಗುತ್ತದೆ ಎಂದು ಸರಕಾರ ಭಾವಿಸಿದೆ.

ಮಿಲಿಟರಿ ಕಾರ್ಯಾಚರಣೆಗಳ ಸಮಯ, ಅಧಿಕೃತ ಮಾಧ್ಯಮ ಗೋಷ್ಠಿಯೊಂದರಲ್ಲಿ ಭಾರತೀಯರು ತಮ್ಮದೇ ಸರಕಾರವನ್ನು ಟೀಕಿಸಿದ್ದಾರೆಂದು ಪಾಕಿಸ್ತಾನಿ ನಾಯಕರೊಬ್ಬರು ಮಾಡಿದ್ದ ಟಿಪ್ಪಣಿಗೆ ವಿದೇಶಾಂಗ ಕಾರ್ಯದರ್ಶಿ ವಿಕ್ರಂ ಮಿಸ್ರಿ ಸರಿಯಾಗಿಯೇ ಸ್ಪಂದಿಸಿದರು. ಭಾರತವು ಒಂದು ಸ್ಪಂದನಶೀಲ ಪ್ರಜಾಪ್ರಭುತ್ವವಾಗಿದ್ದು ಸರಕಾರವು ಜನರಿಗೆ ಉತ್ತರದಾಯಿತ್ವ ಹೊಂದಿದೆ ಎಂದು ಹೇಳುವ ಮೂಲಕ ಮಿಸ್ರಿ ಪಾಕ್ ನಾಯಕನಿಗೆ ಎದಿರೇಟು ನೀಡಿದರು. ಭಾರತದ ಸಂವಿಧಾನ ಮತ್ತು ಅದರ ಜಾತ್ಯತೀತ, ಜನತಾಂತ್ರಿಕ ಗಣರಾಜ್ಯ ಸ್ವರೂಪವೇ ಆಂತರಿಕ ಹಾಗೂ ವಿದೇಶಿ ಸವಾಲುಗಳನ್ನು ಎದುರಿಸುವಲ್ಲಿ ನಮ್ಮ ಪ್ರಧಾನ ಶಕ್ತಿಯಾಗಿವೆ.

ಒಂದು ನೈಜ ರಾಷ್ಟ್ರೀಯ ಸಹಮತವನ್ನು ರೂಪಿಸಲು (ಅದನ್ನು ಉತ್ಪಾದಿಸಲಾಗದು) ಸರಿಯಾದ, ಪಾರದರ್ಶಕ ಮತ್ತು ಪ್ರಜಾಸತ್ತಾತ್ಮಕ ಚರ್ಚೆಯನ್ನು ನಡೆಸುವ ಮೂಲಕ ಮತ್ತೊಮ್ಮೆ ಈ ಬಲಗಳನ್ನು ಪುನಃ ದೃಢೀಕರಿಸಲು ರಾಷ್ಟ್ರೀಯ ಲೆಕ್ಕಾಚಾರದ ಈ ಕ್ಷಣವು ಒಂದು ನಿರ್ಣಾಯಕ ಅವಕಾಶವಾಗಿದೆ.

ಈ ಹಿನ್ನೆಲೆಯಲ್ಲಿ, ರಾಜತಾಂತ್ರಿಕವಾಗಿ ತಲುಪುವಿಕೆಯನ್ನು (ಔಟ್‌ರೀಚ್) ಹೆಚ್ಚಿಸಲು ರಾಜಕೀಯ ಒಗ್ಗಟ್ಟನ್ನು ಒಂದು ಸಾಧನವಾಗಿ ಪ್ರದರ್ಶಿಸಲು ಸರಕಾರ ಪ್ರಯತ್ನಿಸಿದೆ. ಆದರೆ ಒಂದು ಸೂಕ್ತ ಹಾಗೂ ಒಳಗೊಳ್ಳುವ ಸಹಮತವಿಲ್ಲದೇ ಆ ರಾಜತಾಂತ್ರಿಕ ಉಪಕ್ರಮ ಕೂಡ ಹೆಚ್ಚು ಸಮಯ ಉಳಿದುಕೊಳ್ಳುವುದು ಕಷ್ಟವಾಗುತ್ತದೆ. ಏನೇ ಇರಲಿ, ಭಾರತದ ತಾಳಿಕೆಯ ಶಕ್ತಿಯು ಅದರ ಸಂವಿಧಾನದ ಮುಖ್ಯ ಮೌಲ್ಯಗಳಲ್ಲಿ ಅಡಕವಾಗಿದೆ. ಗಡಿಯಾಚೆಯಿಂದ ನಡೆಯುವ ಭಯೋತ್ಪಾದನೆಯ ಸಮಕಾಲೀನ ಸವಾಲನ್ನು ಎದುರಿಸಲು ಇವುಗಳನ್ನು ಹೊಸ ಹುಮ್ಮಸ್ಸಿನಿಂದ ಪ್ರದರ್ಶಿಸಬೇಕು.

ಆದ್ದರಿಂದ, ಎಲ್ಲ ಬಗೆಯ ಅಸ್ಮಿತೆಗಳಿಂದ ಪ್ರೇರಿತವಾದ ಸಂಕುಚಿತ ರಾಜಕೀಯದ ವಿರುದ್ಧ ಹೋರಾಡುತ್ತಲೇ ಪ್ರಜಾಪ್ರಭುತ್ವಕ್ಕಾಗಿ ಸೆಣಸುವುದು ಪ್ರಸ್ತುತ ಅನಿವಾರ್ಯತೆಯಾಗಿದೆ. ಧ್ರುವೀಕರಣವನ್ನು ಪ್ರಚೋದಿಸಲು ಸತತ ಪ್ರಯತ್ನಗಳು ನಡೆಯುತ್ತಿರುವ ಸಂದರ್ಭದಲ್ಲಿ ಇದು ದುಪ್ಪಟ್ಟು ಮಹತ್ವದ್ದಾಗುತ್ತದೆ. ಆದರೆ, ಇಂಥ ಕಾಳಜಿಗಳ ಕಾರಣದಿಂದ ಭಯೋತ್ಪಾದನೆ ವಿರುದ್ಧ ನಮ್ಮ ಅಭಿಯಾನವನ್ನು ಮುಂದುವರಿಸುವ ಅಗತ್ಯದಿಂದ ಯಾವುದೇ ರೀತಿ ವಿಮುಖರಾಗುವ ಅಗತ್ಯವಿಲ್ಲ. ಪಾಕಿಸ್ತಾನದಿಂದ ಭಾರತ ಭಿನ್ನವಾದುದು ಎಂದು ತೋರಿಸುವ ರಾಜತಾಂತ್ರಿಕ ಪ್ರಯತ್ನಗಳನ್ನು ಬಲಪಡಿಸುವುದೂ ಅಗತ್ಯ. ಈ ನಿರ್ಣಾಯಕ ಕಾಲಘಟ್ಟದಲ್ಲಿ ಈ ಅವಳಿ ಅನಿವಾರ್ಯತೆಗಳನ್ನು ಒಗ್ಗೂಡಿಸುವುದು ನಮ್ಮ ಗುರಿಯಾಗಬೇಕು.

ಅನು: ವಿಶ್ವ

ಚನ್ನರಾಯಪಟ್ಟಣ ತಹಸಿಲ್ದಾರ್ ವಿರುದ್ಧ........ ಪುಟ 3 ರಿಂದ

ಭ್ರಷ್ಟಾಚಾರ ಮತ್ತು ದುರ್ವರ್ತನೆ ಇಷ್ಟೆಲ್ಲಾ ಬಹಿರಂಗವಾಗಿದ್ದರೂ, ನಾವು ಸಂವಿಧಾನದ ಪರ ಎಂದು ಹೇಳಿಕೊಳ್ಳುವ ಕೆಲವರು ಆತನ ಪರವಾಗಿ ಹಾಗೂ ಭ್ರಷ್ಟಾಚಾರದ ವಿರುದ್ಧ ನಡೆಯುತ್ತಿರುವ ಹೋರಾಟದ ವಿರುದ್ಧವೇ ಪ್ರತಿಭಟನೆ ನಡೆಸುತ್ತಾರೆ ಎಂದರೆ ತಹಸಿಲ್ದಾರರ ಪರವಾದ ಪ್ರತಿಭಟನೆಯಲ್ಲಿಯೂ ಭ್ರಷ್ಟಾಚಾರ ನಡೆದಿದೆ ಎನ್ನುವುದು ಸ್ಪಷ್ಟವಾಗುತ್ತದೆ. ತಾಲ್ಲೂಕಿನ ಕೆಲವು ಹೋರಾಟಗಾರರು ತಲುಪಿರುವ ಸ್ಥಿತಿ ನೋಡಿ ತುಂಬಾ ಬೇಸರವಾಗುತ್ತದೆ ಎಂದು ಪ್ರತಿಭಟನಾಕಾರರು ಹೇಳಿದ್ದಾರೆ.



ಈ ಹೋರಾಟವನ್ನು ಮುಂದಿನ ಹಂತಕ್ಕೆ ತೆಗೆದುಕೊಂಡು ಹೋಗಲು ಎಲ್ಲಾ ರೀತಿಯ ಸಿದ್ದತೆಗಳನ್ನು ನಡೆಸುತ್ತಿರುವಾಗಲೇ ರಾಜ್ಯ ಸರ್ಕಾರ ತಹಸಿಲ್ದಾರ್ ವಿ.ಎಸ್. ನವೀನ್ ಕುಮಾರನ್ನು ಯಾವುದೇ ಸ್ಥಳವನ್ನು ತೋರಿಸದೇ ವರ್ಗಾವಣೆ ಮಾಡಿ ಆದೇಶಿಸಿದೆ.

ಇದು ನಿರಂತರ ಮತ್ತು ದಿಟ್ಟ ಹೋರಾಟಕ್ಕೆ ಸಿಕ್ಕ ಜನತೆಯ ಜಯವಾಗಿದ್ದು ಒಂದು ದ್ವಿದಳಧಾನ್ಯ ಫಲ ಕೊಡಬೇಕೆಂದರೆ ಮೂರು ತಿಂಗಳು ಬೇಕು, ಭತ್ತ, ತೊಗರಿ, ಜೋಳ ಆರು ತಿಂಗಳು ಬೇಕು, ಶುಂಠಿ, ಕಬ್ಬು ಒಂದು ವರ್ಷ ಬೇಕು, ಒಂದು ತೆಂಗಿನ ಮರ ಫಸಲು ಕೊಡಬೇಕಾದರೆ ಐದಾರು ವರ್ಷದಿಂದ 12 ವರ್ಷ ಬೇಕು. ಕೆಲವರು ಮತ್ತು ಭ್ರಷ್ಟಾಚಾರಿಗಳು ಹೇಳುತ್ತಿದ್ದ ಮಾತು 13 ದಿವಸ ಅಹೋರಾತ್ರಿ ಧರಣಿ ನಡೆಸಿ ತಹಸಿಲ್ದಾರ್ ವಿ.ಎಸ್. ನವೀನ್ ಕುಮಾರ್ ರವರನ್ನು ಏನು ಮಾಡಲು ಆಗೋದಿಲ್ಲ ಎಂದಿದ್ದರು. ಅಂತವರಿಗೆ ಇದು ಅರ್ಪಣೆ ಎಂದು ಹೋರಾಟದ ಪ್ರಧಾನ ಸಂಚಾಲಕರಾದ ಎಚ್.ಎಸ್ ಮಂಜುನಾಥ್ ಹೇಳಿದ್ದಾರೆ.

ಮುಂದೆ ಬರುವ ಅಧಿಕಾರಿಗಳಿಗೆ ಪಾಠವಾಗಬೇಕು ಮತ್ತು ಜನಸಾಮಾನ್ಯರು ಜಾಗೃತಗೊಂಡು ಸಂಘಟಿತ ಹೋರಾಟ ಮಾಡಿದರೆ ನ್ಯಾಯ ಸಿಗುವುದು ಖಾತರಿ ಎಂಬುದನ್ನು ಈ ಹೋರಾಟವು ತೋರಿಸಿಕೊಟ್ಟಿದೆ.





ಕೇರಳ ಅಭಿವೃದ್ಧಿ: ಅಸಾಧ್ಯವಾದುದು ಇಲ್ಲಿ ಸಾಧ್ಯ

ಮೇ 2021 ರಲ್ಲಿ ಅಧಿಕಾರಕ್ಕೆ ಬಂದ ಎಡ ಪ್ರಜಾಸತ್ತಾತ್ಮಕ ರಂಗ (ಎಲ್‌ಡಿಎಫ್) ಸರ್ಕಾರವು ತನ್ನ ಐದನೇ ವರ್ಷಕ್ಕೆ ಬಹಳ ಉತ್ಸಾಹದಿಂದ ಕಾಲಿಡುತ್ತಿದೆ. ಈ ಸರ್ಕಾರ 2016ರಲ್ಲಿ ಅಧಿಕಾರಕ್ಕೆ ಬಂದ ಸರ್ಕಾರದ ಮುಂದುವರಿಕೆಯಾಗಿದೆ. ಆದ್ದರಿಂದ, ಒಂದು ಅರ್ಥದಲ್ಲಿ, ಇದು ಒಂಬತ್ತನೇ ವಾರ್ಷಿಕೋತ್ಸವವಾಗುತ್ತಿದೆ. ಭೂರಹಿತ ಕೇರಳದ ಗುರಿಯತ್ತ ಕ್ರಮೇಣ ಹತ್ತಿರವಾಗುತ್ತಿದೆ. 'ಎಲ್ಲರಿಗೂ ಮನೆ' ಎಂಬ ಗುರಿಯೊಂದಿಗೆ, ಲೈಫ್ ಮಿಷನ್ ಯೋಜನೆಯಡಿಯಲ್ಲಿ ಈಗಾಗಲೇ 5,79,568 ಮನೆಗಳನ್ನು ಹಂಚಿಕೆ ಮಾಡಿದೆ. ಕೇರಳವು ಕಡು ಬಡತನವಿಲ್ಲದ ಭಾರತದ ಮೊದಲ ರಾಜ್ಯವಾಗುತ್ತಿದೆ. 50,000ಕ್ಕೂ ಹೆಚ್ಚು ತರಗತಿ ಕೊಠಡಿಗಳನ್ನು ಹೈಟೆಕ್ ಆಗಿ ಪರಿವರ್ತಿಸಲಾಗಿದೆ.



ಕೇರಳವು ಅಭಿವೃದ್ಧಿಯತ್ತ ದಾಪುಗಾಲು ಇಡುತ್ತಿದೆ. ಕೇರಳ ರಾಜ್ಯ ಸರ್ಕಾರ ರಾಜ್ಯದ ಎಲ್ಲಾ ವಲಯಗಳ ಪ್ರಗತಿಯತ್ತ ಶ್ರಮಿಸುತ್ತಿದೆ. ಸರ್ಕಾರದ ಗುರಿ ನವ ಕೇರಳ ನಿರ್ಮಾಣ. ಸಮಕಾಲೀನ ಬಿಕ್ಕಟ್ಟುಗಳನ್ನು ನಿವಾರಿಸುವ ಅದರ ಸಾಮರ್ಥ್ಯ, ಜೊತೆಗೆ ಕೇರಳದ ಭವಿಷ್ಯದ ಬಗ್ಗೆ ಅದರ ಬಲವಾದ ದೃಷ್ಟಿಕೋನ ಮತ್ತು ಅವುಗಳನ್ನು ಸಾಕಾರಗೊಳಿಸುವ ಅದರ ದೂರದೃಷ್ಟಿಯ ಕ್ರಮಗಳು ಇಂತಹ ನವ ಕೇರಳ ಯೋಜನೆಯನ್ನು ವಿಶೇಷವಾಗಿಸುತ್ತದೆ. ರಾಜ್ಯ ಸರ್ಕಾರವು ಕೇರಳದ ಭವಿಷ್ಯದ ಪೀಳಿಗೆಯನ್ನು ಗಮನದಲ್ಲಿ ಇಟ್ಟುಕೊಂಡು ನೀತಿಗಳು ಮತ್ತು ಕ್ರಿಯಾ ಯೋಜನೆಗಳನ್ನು ರೂಪಿಸುತ್ತಿದೆ.

ಸಮಾನತೆ ಮತ್ತು ಸಹೋದರತ್ವ

ನವ ಕೇರಳವು ಸಮಾನತೆ ಮತ್ತು ಸಹೋದರತ್ವವು ಸಮೃದ್ಧವಾಗಿರುವ ಅಭಿವೃದ್ಧಿ ಹೊಂದಿದ ಸಮಾಜವಾಗಿರುತ್ತದೆ. ಕಾನೂನು ಮತ್ತು ಸುವ್ಯವಸ್ಥೆಯಲ್ಲಿ ಶ್ರೇಷ್ಠತೆ, ಸಾಮಾಜಿಕ ಸಾಮರಸ್ಯ, ಸಾರ್ವಜನಿಕ ಜೀವನದಲ್ಲಿ ಭದ್ರತೆ, ಅಲ್ಪಾವಧಿಯ ಸಮಗ್ರ ಕಲ್ಯಾಣ ಪರಿಹಾರ ಕ್ರಮಗಳು ಮತ್ತು ದೀರ್ಘಾವಧಿಯ ಅಭಿವೃದ್ಧಿ ಯೋಜನೆಗಳು ಆಡಳಿತದ ವಿಶಿಷ್ಟ ಲಕ್ಷಣಗಳಾಗಿವೆ. ಕೇರಳದ ಎಲ್‌ಡಿಎಫ್ ಸರ್ಕಾರವು ರಾಷ್ಟ್ರೀಯ ಮಟ್ಟದಲ್ಲಿ ಎದ್ದು ಕಾಣುವ ಆಡಳಿತ ಸಂಸ್ಕೃತಿಯನ್ನು ಸೃಷ್ಟಿಸಿದೆ. ಅದು ತನಗಿರುವ ಮಿತಿಗಳು, ಕೇಂದ್ರ ದರ್ಕಾರದ ನಿರ್ಲಕ್ಷ್ಯ, ಹಲವು ಬಿಕ್ಕಟ್ಟುಗಳು ಮತ್ತು ಸವಾಲುಗಳನ್ನು ಮೀರಿ ಬದುಕುಳಿದಿದೆ.

ಲೆಕ್ಕವಿಲ್ಲದಷ್ಟು ಸಮಸ್ಯೆಗಳನ್ನು ಎದುರಿಸಿತು

ಭ್ರಷ್ಟಾಚಾರ ಮತ್ತು ದುರುಪಯೋಗದಿಂದಾಗಿ ಕೇರಳದ ಅಭಿವೃದ್ಧಿ ಮತ್ತು ಜನರ ಕಲ್ಯಾಣವು ಬಿಕ್ಕಟ್ಟುಗಳನ್ನು ಎದುರಿಸುತ್ತಿದ್ದ ಸಮಯದಲ್ಲಿ 2016ರಲ್ಲಿ ಎಡ ಪ್ರಜಾಸತ್ತಾತ್ಮಕ ರಂಗ ಸರ್ಕಾರ ಅಧಿಕಾರಕ್ಕೆ ಬಂದಿತು. ಅದರ ಮುಂದೆ ಹಲವು ಸವಾಲುಗಳಿದ್ದವು.

ಆ ಸಮಯದಲ್ಲಿ, ನೇಮಕಾತಿ ಸ್ಥಗಿತ, ಸಾರ್ವಜನಿಕ ವಲಯದ ಕುಸಿತ, ಸಾರ್ವಜನಿಕ ಶಾಲೆಗಳ ಮುಚ್ಚುವಿಕೆ, ಕೃಷಿ ಮತ್ತು ಕೈಗಾರಿಕಾ ವಲಯಗಳಲ್ಲಿನ ನಿಶ್ಚಲತೆ, ಕೈಗಾರಿಕಾ ಹೂಡಿಕೆಯ ಕೊರತೆ, ಗಂಭೀರ ಆರ್ಥಿಕ ಹಿಂಜರಿತ ಮತ್ತು ಬಂಡವಾಳ ವೆಚ್ಚಕ್ಕೂ ಹಣವಿಲ್ಲದೆ ಅಭಿವೃದ್ಧಿ ಸ್ಥಗಿತ ಸೇರಿದಂತೆ ಲೆಕ್ಕವಿಲ್ಲದಷ್ಟು ಸಮಸ್ಯೆಗಳನ್ನು ಎಲ್‌ಡಿಎಫ್ ಸರ್ಕಾರ ಎದುರಿಸಿತು. ಶಿಥಿಲಗೊಂಡ ರಸ್ತೆಗಳು, ಸೇತುವೆಗಳು, ಕೇವಲ ಕಂಬಗಳಂತಿದ್ದ ಕೊಚ್ಚಿ ಮೆಟ್ರೋ, ಬೇಲಿಯೂ ಇಲ್ಲದ ಮಣ್ಣಿನ ರಸ್ತೆಯಲ್ಲಿ ಫೈಟರ್ ಜೆಟ್ ಇಳಿಯುವಷ್ಟರಲ್ಲಿಯೇ ಉದ್ಘಾಟನೆಯಾದ ವಿಮಾನ ನಿಲ್ದಾಣ, ಲೋಡ್ ಶೆಡ್ಡಿಂಗ್ ಮತ್ತು ಗಂಟೆಗಟ್ಟಲೆ ವಿದ್ಯುತ್ ಕಡಿತ, ಇಲ್ಲಿ ಏನೂ ಆಗುವುದಿಲ್ಲ ಎಂದು ಹೇಳಿ ಕೇರಳವನ್ನು ತೊರೆದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಮತ್ತು ದೂರುಗಳಿಂದ ತುಂಬಿದ ಸರ್ಕಾರಿ ಆಸ್ಪತ್ರೆಗಳು ಎಲ್‌ಡಿಎಫ್ ಸರ್ಕಾರವನ್ನು ಸ್ವಾಗತಿಸಿದವು.

ದೇಶದ ಅಭಿವೃದ್ಧಿಗೆ ಅಗತ್ಯವಾದ ಎಲ್ಲಾ ಯೋಜನೆಗಳನ್ನು ಅಸಾಧ್ಯವೆಂದು ತಿರಸ್ಕರಿಸಿದ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಸರ್ಕಾರದ ಯುಗವನ್ನು ಇಂದು ಕೇರಳ ಹೆಚ್ಚಾಗಿ ಮರೆತಿದೆ. ಆ ಜಡ ಸ್ಥಿತಿಯಿಂದ ಎಡ ಪ್ರಜಾಸತ್ತಾತ್ಮಕ ರಂಗ ಸರ್ಕಾರ ಕೇರಳವನ್ನು ಮೇಲೆತ್ತಿತು. ಆ ನಿಟ್ಟಿನಲ್ಲಿ, ಅವರು ಸಮಗ್ರ ಕ್ರಿಯಾ ಯೋಜನೆಯನ್ನು ಒಳಗೊಂಡಿರುವ ಪ್ರಣಾಳಿಕೆಯೊಂದಿಗೆ ಮುಂದುವರೆದರು.

ಅಭೂತಪೂರ್ವ ಅಭಿವೃದ್ಧಿ

ಈ ಅವಧಿಯಲ್ಲಿ ಕೇರಳದಲ್ಲಿ ಏನೂ ಆಗುವುದಿಲ್ಲ ಎಂಬ ಗ್ರಹಿಕೆ ಮಾಯವಾಯಿತು. ವಿಶ್ವ ಭೂಪಟದಲ್ಲಿ ಕೇರಳವನ್ನು ಗುರುತಿಸುವ ವಿಝಿಂಜಂ ಅಂತರರಾಷ್ಟ್ರೀಯ ಬಂದರನ್ನು ವಾಸ್ತವಗೊಳಿಸಲಾಗಿದೆ. ಹಿಂದಿನ ಎಲ್‌ಡಿಎಫ್ ಸರ್ಕಾರದ ಕಾಲದಿಂದ ಈ ಯೋಜನೆಯ ನಿರ್ಮಾಣ ಕಾರ್ಯವು ನೂರಕ್ಕೆ ನೂರು ಪೂರ್ಣಗೊಂಡಿದೆ. ಮೂಲಸೌಕರ್ಯಗಳ ವಿಷಯದಲ್ಲಿ ಬೆರಗುಗೊಳಿಸುವ ಅಭಿವೃದ್ಧಿಯು ಉತ್ಪ್ರೇಕ್ಷೆಯಲ್ಲ, ಬದಲಾಗಿ ಪ್ರತಿಯೊಬ್ಬ ಮನುಷ್ಯನಿಗೂ ಸ್ಪಷ್ಟವಾಗಿ ಗೋಚರಿಸುವ ವಾಸ್ತವವಾಗಿದೆ. ಕಾಂಗ್ರೆಸ್ ನೇತೃತ್ವದ ಯುಡಿಎಫ್ ಸರ್ಕಾರದ ತೀವ್ರ ನಿರ್ಲಕ್ಷ್ಯದಿಂದಾಗಿ ಸ್ಥಗಿತಗೊಂಡಿದ್ದ ರಾಷ್ಟ್ರೀಯ ಹೆದ್ದಾರಿಯ ಅಭಿವೃದ್ಧಿ ಎಲ್‌ಡಿಎಫ್ ಸರ್ಕಾರದ ಇಚ್ಛಾಶಕ್ತಿಯಿಂದ ಮಾತ್ರ ಸಾಧ್ಯವಾಯಿತು. ತಮ್ಮ ಅಧಿಕಾರಾವಧಿಯಲ್ಲಿ ಸಕಾಲದಲ್ಲಿ ಭೂಮಿಯನ್ನು ಸ್ವಾಧೀನಪಡಿಸಿಕೊಂಡು ಒದಗಿಸುವಲ್ಲಿ ವಿಫಲವಾದ ಕಾರಣ ಕೇರಳದಲ್ಲಿ ರಾಷ್ಟ್ರೀಯ ಹೆದ್ದಾರಿಗಳ ಅಭಿವೃದ್ಧಿಯನ್ನು ನಿಲ್ಲಿಸುವುದಾಗಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಪದೇ ಪದೇ ಹೇಳಿತು. ಆದರೂ ಏನೂ ಆಗದಿದ್ದಾಗ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ತನ್ನ ಕಚೇರಿಯನ್ನು ಮುಚ್ಚಿ ಕೇರಳವನ್ನು ತೊರೆಯಿತು.

ಕೇಂದ್ರದಿಂದ ಊಹಿಸಲಾಗದ ಷರತ್ತುಗಳು

2016ರಲ್ಲಿ ಎಲ್‌ಡಿಎಫ್ ಸರ್ಕಾರ ಅಧಿಕಾರಕ್ಕೆ ಬಂದಾಗ, ಹೆದ್ದಾರಿ ಅಭಿವೃದ್ಧಿಯನ್ನು ತನ್ನ ಪ್ರಮುಖ ಗುರಿಗಳಲ್ಲಿ ಒಂದಾಗಿ ಪರಿಗಣಿಸಿತು. ಬೇರೆ ಯಾವುದೇ ದೇಶದಲ್ಲಿ ಊಹಿಸಲೂ ಸಾಧ್ಯವಾಗದ ಷರತ್ತುಗಳನ್ನು ಕೇಂದ್ರ ಸರ್ಕಾರ ಕೇರಳದ ಮೇಲೆ ವಿಧಿಸಿತು. ಇದರ ನಂತರ, ರಾಜ್ಯ ಸರ್ಕಾರವು ಭೂಸ್ವಾಧೀನ ವೆಚ್ಚದ 25 ಪ್ರತಿಶತವನ್ನು ಅಂದರೆ ಸುಮಾರು 6,000 ಕೋಟಿ ರೂ.ಗಳನ್ನು ಭರಿಸಲು ನಿರ್ಧರಿಸಿತು. ಆ ಎಲ್ಲಾ ಬಿಕ್ಕಟ್ಟುಗಳನ್ನು ನಿವಾರಿಸುವಲ್ಲಿ ಕೇರಳ ಯಶಸ್ವಿಯಾಗಿದೆ, ಜನರಿಗೆ ನ್ಯಾಯಯುತ ಪರಿಹಾರ ಮತ್ತು ಪುನರ್ವಸತಿಯನ್ನು ಖಚಿತಪಡಿಸಿಕೊಳ್ಳುವ ಮೂಲಕ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು

ಪುಟ 10 ಕ್ಕೆ







ರಾಷ್ಟ್ರಪತಿಗಳ ಉಲ್ಲೇಖ: ಒಂದು ಅಸಂಬದ್ಧ ನಾಟಕರಂಗ

ನಾವು ಈ ಅಸಂಬದ್ಧ ನಾಟಕರಂಗದಲ್ಲಿ ಸಿಕ್ಕಿಹಾಕಿಕೊಂಡಿದ್ದೇವೆ. ಸುಪ್ರೀಂ ಕೋರ್ಟ್ ರಾಷ್ಟ್ರಪತಿಗಳ ಪ್ರಶ್ನೆಗಳಿಗೆ ಸ್ಪಂದಿಸಬಹುದು ಅಥವಾ ಸ್ಪಂದಿಸದೇ ಇರಬಹುದು. ಒಂದು ವೇಳೆ ಸ್ಪಂದಿಸಿದರೂ, ಅದಕ್ಕೆ ಬದ್ಧವಾಗಿರಬೇಕಿಲ್ಲ. ನಮ್ಮ ಸಂವಿಧಾನವು ಇಂದು ತನ್ನ ನೆಲೆಗಟ್ಟಾಗಿರುವ ಆದರ್ಶಗಳ ಮೇಲಿನ ಅತಿಕ್ರಮಣಗಳ ವಿರುದ್ಧ ಭದ್ರಕೋಟೆಯಾಗಿ ನಿಂತಿದೆ ಎಂಬುದು ಮತ್ತೊಮ್ಮೆ ಸ್ವಯಂವೇದ್ಯಗೊಂಡಿದೆ. ಈ ಉಲ್ಲೇಖದ ನಿಜವಾದ ಉದ್ದೇಶ "ಎಎಸ್‌ಎಪಿ" ಅಂದರೆ "ಸಾಧ್ಯವಾದಷ್ಟು ಬೇಗ" ಎಂಬುದನ್ನು ಕುರಿತಂತೆ ಸಾಂವಿಧಾನಿಕ ವ್ಯಾಖ್ಯಾನವನ್ನು ಪಡೆಯುವುದಲ್ಲ, ಬದಲಾಗಿ ಪ್ರಜಾಸತ್ತಾತ್ಮಕವಾಗಿ ಚುನಾಯಿತವಾದ ಶಾಸಕಾಂಗಗಳ ಸಾರ್ವಭೌಮ ಅಧಿಕಾರವನ್ನು ದುರ್ಬಲಗೊಳಿಸುವುದು. – 'ಪೀಪಲ್ಸ್ ಡೆಮಾಕ್ರಸಿ' ಪತ್ರಿಕೆಯ ಸಂಪಾದಕೀಯ

ದಿಲ್ಲಿಯಲ್ಲೀಗ ಒಂದು ಅಗ್ಗದ ರಾಜಕೀಯ ನಾಟಕ ಅನಾವರಣಗೊಳ್ಳುತ್ತಿದೆ. ಸುಪ್ರಿಂ ಕೋರ್ಟಿನ ಇತ್ತೀಚಿನ ನಿರ್ಧಾರವನ್ನು ಈಗ ಅದಕ್ಕೆ ಸ್ಪಷ್ಟೀಕರಣ ಕೇಳಿ ಉಲ್ಲೇಖಿಸಲಾಗಿದೆ. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರ ಆದೇಶದ ಮೇರೆಗೆ ಕಳಿಸಿರುವ ಈ ಉಲ್ಲೇಖ ಒಂದು ಅಸಂಬದ್ಧ ನಾಟಕರಂಗವಲ್ಲದೆ ಇನ್ನೇನೂ ಅಲ್ಲ. ರಾಜ್ಯ ಶಾಸಕಾಂಗವು ಅಂಗೀಕರಿಸಿದ ಮಸೂದೆಗಳಿಗೆ ರಾಜ್ಯಪಾಲರು ಒಪ್ಪಿಗೆ ನೀಡುವ ಅಥವಾ ಹಿಂದಿರುಗಿಸುವ ಸಮಯಪಟ್ಟಿಯ ಕುರಿತು ಸುಪ್ರಿಂ ಕೋರ್ಟ್ ನೀಡಿರುವ ಆದೇಶಕ್ಕೆ ಸಂಬಂಧಿಸಿದಂತೆ ಸ್ಪಷ್ಟೀಕರಣವನ್ನು ಕೋರಲಾಗಿದೆ. ನ್ಯಾಯಾಲಯದ ಮೂಲ ಆದೇಶವು ಬೇಕಾಬಿಟ್ಟಿಯಾಗಿರಲಿಲ್ಲ; ಅದು ಹಲವಾರು ತೀರ್ಪುಗಳಿಂದ ರೂಪುಗೊಂಡ ದೀರ್ಘ–ಕಾಲದಿಂದ ಸ್ಥಾಪಿತವಾದ ನ್ಯಾಯತತ್ವಗಳ ಸಾಲಿನಲ್ಲಿ ನೆಲೆಗೊಂಡಿರುವಂತದ್ದು.

ತಮಿಳುನಾಡು ರಾಜ್ಯಪಾಲ ಆರ್. ಎನ್. ರವಿ ಅವರ ನಡವಳಿಕೆಯ ಕುರಿತ ಆದೇಶಕ್ಕೆ ಸಂಬಂಧಿಸಿದಂತೆ ಹದಿನಾಲ್ಕು ಪ್ರಶ್ನೆಗಳನ್ನು ಎತ್ತುವ ಮೂಲಕ ಸಂವಿಧಾನದ 143(1)ನೇ ವಿಧಿಯ ಅಡಿಯಲ್ಲಿ ರಾಷ್ಟ್ರಪತಿಗಳು ಸುಪ್ರೀಂ ಕೋರ್ಟ್‌ಗೆ ಉಲ್ಲೇಖ ಕಳಿಸಿದ್ದಾರೆ. ತಮಿಳುನಾಡು ವಿಧಾನಸಭೆ ಅಂಗೀಕರಿಸಿದ ಹದಿನಾಲ್ಕು ಮಸೂದೆಗಳಿಗೆ ಒಪ್ಪಿಗೆ ನೀಡುವಲ್ಲಿ ರಾಜ್ಯದ ರಾಜ್ಯಪಾಲರ ಅತಿಯಾದ ವಿಳಂಬವನ್ನು ಉಲ್ಲೇಖಿಸಿ ತಮಿಳುನಾಡು ಸರ್ಕಾರ ಸುಪ್ರೀಂ ಕೋರ್ಟ್ ಮೊರೆ ಹೋಗಿತ್ತು. ಸಂವಿಧಾನ ರಚನೆಕಾರರು ಒಂದು ಮಸೂದೆಯನ್ನು ರಾಜ್ಯಪಾಲರ ಒಪ್ಪಿಗೆಗೆ ಅಥವಾ ಅದನ್ನು ಹಿಂದೆ ಕಳಿಸಲು ನಿರೀಕ್ಷಿತ ಸಮಯದ ಅವಧಿಯನ್ನು ವರ್ಣಿಸಲು "ಸಾಧ್ಯವಾದಷ್ಟು ಬೇಗ" ಎಂಬ ಪದಗುಚ್ಛವನ್ನು ಬಳಸಿರುವುದು ಉದ್ದೇಶಪೂರ್ವಕವಾದ ವಿನಯದಿಂದಲೇ ಹೊರತು, ಅನಿರ್ದಿಷ್ಟ ಎಂಬರ್ಥದಲ್ಲಿ ಅಲ್ಲ. ಕೆಲವು ಇತರ ಸಂವಿಧಾನಗಳಿಗಿಂತ ಭಿನ್ನವಾಗಿ, ನಮ್ಮ ಸಂವಿಧಾನವು ಕಾನೂನನ್ನು ಪ್ರಶ್ನಿಸಲು ರಾಷ್ಟ್ರಾಧ್ಯಕ್ಷರ ಉಲ್ಲೇಖ ಅಗತ್ಯ ಎಂದು ವಿಧಿಸುವುದಿಲ್ಲ. ಯಾವುದೇ ನಾಗರಿಕರು ನ್ಯಾಯಾಲಯಗಳನ್ನು (ಕೆಳ ನ್ಯಾಯಾಂಗದಿಂದ ಸುಪ್ರೀಂ ಕೋರ್ಟ್‌ವರೆಗೆ) ಸಂಪರ್ಕಿಸಬಹುದು ನ್ಯಾಯಾಲಯದ ಅಭಿಪ್ರಾಯವನ್ನು ಪಡೆಯುವ ನಿಬಂಧನೆಯನ್ನು ಸ್ಪಷ್ಟವಾಗಿ ನಿರೂಪಿಸಲಾಗಿದೆ, ಮತ್ತು ಅಂತಹ ಅಭಿಪ್ರಾಯವನ್ನು ಈ ನಿಬಂಧನೆಯ ಅಡಿಯಲ್ಲಿ ಕೋರಿದಾಗಲೂ ಸಹ, ಅದಕ್ಕೆ ಬಾಧ್ಯವಾಗಿ ಇರಬೇಕಿಲ್ಲ.

ಹೀಗಿರುವಾಗ, ಈ ರಾಜಕೀಯ ಪ್ರದರ್ಶನದಲ್ಲಿ ತೊಡಗಿಸಿಕೊಳ್ಳುವ ಕೇಂದ್ರದ ನಿರ್ಧಾರಕ್ಕೆ ಕಾರಣಗಳು ಬೇರೆಯೇ ಇವೆ. ಪ್ರಸ್ತುತ ಮೋದಿ ಸರ್ಕಾರದ ಸಂದರ್ಭದಲ್ಲಿ, ನ್ಯಾಯಾಲಯದ ನಿರ್ಧಾರ ಅದಕ್ಕೆ ಭಾರೀ ಇರುಸುಮುರಿಸು ಉಂಟುಮಾಡಿದೆ ಎಂದು ಭಾವಿಸದಿದ್ದರೂ, ಅದನ್ನು ಒಪ್ಪಿಕೊಳ್ಳುವಲ್ಲಿ ಹಿಂಜರಿಕೆಯಂತೂ ಇದೆ ಎಂದು ಊಹಿಸಿಕೊಳ್ಳಬಹುದು. ಇದು, ಒಂದು ಬಿಜೆಪಿಯೇತರ ನೇತೃತ್ವದ ರಾಜ್ಯ ವಿಧಾನಸಭೆ ತನ್ನ ಶಾಸಕಾಂಗ ಅಧಿಕಾರವನ್ನು ಮುಕ್ತವಾಗಿ ಚಲಾಯಿಸುವುದಕ್ಕೆ ಅದರ ರಾಜಕೀಯ ವಿರೋಧದಿಂದ ಹೊಮ್ಮಿಬಂದಿದೆ ಎನ್ನಬಹುದೇನೋ.

ತಮಿಳುನಾಡು ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ತೀರ್ಪಿನ ನಂತರ, ಯಾವುದೇ ಗದ್ದಲ ಎಬ್ಬಿಸಲಿಲ್ಲ, ರಾಜ್ಯಪಾಲರ ಮೌನ ಎದ್ದು ಕಾಣುವಂತಿತ್ತು. ಆದರೂ, ಸದಾ ಕುದಿಯುತ್ತಿರುವ ಉಪರಾಷ್ಟ್ರಪತಿ ಜಗದೀಪ್ ಧಂಕರ್ ಒಂದು ರಾಜಕೀಯ ಹಗ್ಗ ಜಗ್ಗಾಟವನ್ನು ಪ್ರಚೋದಿಸಿದರು. ಈ ತೀರ್ಪನ್ನು ಉಲ್ಲೇಖಿಸುತ್ತ ಸುಪ್ರೀಂ ಕೋರ್ಟ್ "ಸೂಪರ್ ಪಾರ್ಲಿಮೆಂಟ್" ಆಗಿ ಬದಲಾಗಿದೆ ಎಂಬ ಒಂದು ಬೀಸು ಹೇಳಿಕೆ ನೀಡಿದರು. ಈ ನಡುವೆ, ರಾಜ್ಯಪಾಲ ರವಿ ಏನೂ ಸಂಭವಿಸಿಯೇ ಇಲ್ಲವೆಂಬಂತೆ ವರ್ತಿಸುತ್ತಿದರು. ಹಲವಾರು ತಮಿಳು ರಾಜ್ಯ ವಿಶ್ವವಿದ್ಯಾಲಯಗಳ ಕುಲಪತಿಯ ಪಾತ್ರದಿಂದ ಅವರನ್ನು ತೆಗೆದುಹಾಕಿದ ನಂತರವೂ, ಅವರು ಒಂದು ಸುಂದರವಾದ ಗಿರಿಧಾಮದಲ್ಲಿ ಅವುಗಳ ಕುಲಪತಿಗಳ ಸಭೆಯನ್ನು ಕರೆದರು.


ತೀರ್ಪಿನ ಬಗ್ಗೆ ಅತೃಪ್ತಿಯಿದ್ದಲ್ಲಿ ಹಿಡಿಯುವ ಸಾಮಾನ್ಯ ಕಾನೂನು ಮಾರ್ಗವೆಂದರೆ ಒಂದು ಮರು ಪರಿಶೀಲನಾ ಅರ್ಜಿಯನ್ನು ಸಲ್ಲಿಸುವುದು– ಏಕೆಂದರೆ ಸುಪ್ರೀಂ ಕೋರ್ಟ್ ನಿರ್ಧಾರವನ್ನು ಮೀರಿ ಯಾವುದೇ ಮೇಲ್ಮನವಿಗಳಿಲ್ಲ. ಅಪರೂಪದ ಸಂದರ್ಭಗಳಲ್ಲಿ, ಕ್ಯುರೇಟಿವ್ ಅರ್ಜಿಯನ್ನು ಸಹ ಸಲ್ಲಿಸಬಹುದು. ಇನ್ನೊಂದು ಆಯ್ಕೆಯೆಂದರೆ, ತೀರ್ಪಿನ ಪರಿಣಾಮವನ್ನು ರದ್ದುಗೊಳಿಸಲು ಸಂಸತ್ತಿನಲ್ಲಿ ಶಾಸನವನ್ನು ತರುವುದು–ಚುನಾವಣಾ ಆಯುಕ್ತರ ನೇಮಕಕ್ಕೆ ಶೋಧನಾ ಸಮಿತಿಯ ಸಂಯೋಜನೆಗೆ ಸಂಬಂಧಪಟ್ಟಂತೆ ಈ ಸರ್ಕಾರ ಮಾಡಿದಂತೆ. ಆದರೆ ಈ ಯಾವುದೇ ಮಾರ್ಗಗಳನ್ನು ಅನುಸರಿಸಲಿಲ್ಲ. ಸರ್ಕಾರವು ಇಂತಹ ವಿಷಯಗಳಲ್ಲಿ ಸಾಂವಿಧಾನಿಕ ಅಧಿಕಾರ ಹೊಂದಿರುವ ಅಟಾರ್ನಿ ಜನರಲ್‌ರೊಂದಿಗೆ ಸಮಾಲೋಚನೆ ಕೂಡ ನಡೆಸಲಿಲ್ಲ.

ಇಲ್ಲಿ ಯಾವುದೇ ಗೊಂದಲ ಬೇಡ. 74ನೇ ವಿಧಿಗೆ 42ನೇ ತಿದ್ದುಪಡಿಯ ನಂತರ, ರಾಷ್ಟ್ರಪತಿಗಳು ಸಾಂವಿಧಾನಿಕವಾಗಿ ಮಂತ್ರಿಮಂಡಲದ ಸಲಹೆಯಂತೆ ಕಾರ್ಯನಿರ್ವಹಿಸಲು ಬದ್ಧರಾಗಿದ್ದಾರೆ. ರಾಷ್ಟ್ರಪತಿಯವರ ಈ ಪ್ರಸ್ತುತ ಉಲ್ಲೇಖವು ರಾಜಕೀಯ ಸಂದೇಶಕ್ಕಿಂತ ಹೆಚ್ಚೇನೂ ಅಲ್ಲ– "ಸಾಧ್ಯವಾದಷ್ಟು ಬೇಗ" ಎಂದರೆ ಒಂದು ನಿರೂಪಿತ ಸಮಯಮಿತಿ ಎಂಬ ಸುಪ್ರೀಂ ಕೋರ್ಟ್‌ನ ವ್ಯಾಖ್ಯಾನವನ್ನು ಸರ್ಕಾರವು ಒಪ್ಪಿಕೊಳ್ಳುವುದಿಲ್ಲ ಎಂಬ ಸಾಂಕೇತಿಕ ಪ್ರತಿಪಾದನೆಯಾಗಿದೆ. ಈ ನಿಲುವು ಸ್ಥಾಪಿತ ನ್ಯಾಯತತ್ವಕ್ಕೆ ತದ್ವಿರುದ್ಧವಾಗಿದೆ; ವಿಶೇಷವಾಗಿ, ಒಂದು ಮೈಲಿಗಲ್ಲೆನಿಸಿದ 1974ರ ಶಂಶೇರ್‌ಸಿಂಗ್ ಪ್ರಕರಣದ ತೀರ್ಪಿನಲ್ಲಿ ಹೇಳಿದಂತೆ ರಾಜ್ಯಪಾಲರುಗಳು ಚುನಾಯಿತ ರಾಜ್ಯ ಸಚಿವ ಸಂಪುಟದ ಸಲಹೆಯ ಮೇರೆಗೆ ಕಾರ್ಯನಿರ್ವಹಿಸಬೇಕು, ಅವರು ಯುನೈಟೆಡ್ ಕಿಂಗ್‌ಡಂ ನ ಚಕ್ರಾಧಿಪತಿಗಳು ಅಥವಾ ಅಮೆರಿಕದ ಅಧ್ಯಕ್ಷರುಗಳಂತೆ ಸ್ವತಂತ್ರ ಕಾರ್ಯಭಾರಿ ಅಲ್ಲ.

ಹೀಗಾಗಿ, ನಾವು ಈ ಅಸಂಬದ್ಧ ನಾಟಕರಂಗದಲ್ಲಿ ಸಿಕ್ಕಿಹಾಕಿಕೊಂಡಿದ್ದೇವೆ– ಸುಪ್ರೀಂ ಕೋರ್ಟ್ ರಾಷ್ಟ್ರಪತಿಗಳ ಪ್ರಶ್ನೆಗಳಿಗೆ ಸ್ಪಂದಿಸಬಹುದು ಅಥವಾ ಸ್ಪಂದಿಸದೇ ಇರಬಹುದು – ಮತ್ತು ಒಂದು ವೇಳೆ ಸ್ಪಂದಿಸಿದರೂ, ಅದಕ್ಕೆ ಬದ್ಧವಾಗಿರಬೇಕಿಲ್ಲ.

ಮೋದಿ ಸರ್ಕಾರದ ಈ ಭವ್ಯ ಪ್ರದರ್ಶನ, ಮಂದವಾದ ವಿಪರೀತ ನಡವಳಿಕೆಯಂತೆ ತೋರುತ್ತದೆಯಾದರೂ, ವಿಶೇಷವಾಗಿ ಅದು ಪ್ರಸ್ತುತ ಎದುರಿಸುತ್ತಿರುವ ಸವಾಲುಗಳ ಬೆಳಕಿನಲ್ಲಿ ಬಹಳಷ್ಟು ಆಳವಾದದ್ದನ್ನು ತಿಳಿಯಪಡಿಸುತ್ತದೆ. ಆದರೆ ಇದು ಕೇವಲ ರಾಜಕೀಯ ನಾಟಕ ಪತ್ರದರ್ಶನ ಎಂದಷ್ಟೇ ಭಾವಿಸುವುದು ಮೊದ್ದುತನವಾಗುತ್ತದೆ. ಇದು ಸೈದ್ಧಾಂತಿಕವಾಗಿ ಹಿಂದುತ್ವ–ಚಾಲಿತ, ಭಾರತೀಯ ಸಂವಿಧಾನದ ಅಡಿಗಲ್ಲಾಗಿರುವ ಚೇತನವನ್ನು ಮತ್ತು ಏರ್ಪಾಡುಗಳನ್ನು ತಿರಸ್ಕರಿಸುವ ಒಂದು ಕಣ್ಣೋಟದಿಂದ ಚಾಲಿತವಾದ ಸರಕಾರ. ಆರ್‌ಎಸ್‌ಎಸ್, ಅದರ ಪ್ರಧಾನ ಸಿದ್ಧಾಂತಿ ಎಂ.ಎಸ್.ಗೋಲ್ವಾಲ್ಕರ್, ಒಕ್ಕೂಟ ತತ್ವವನ್ನು ಅದರ ನಿಜವಾದ ಅರ್ಥದಲ್ಲಿ ಎಂದಿಗೂ ಒಪ್ಪಿಕೊಂಡಿಲ್ಲ. ಅವರು ಸದಾ ಸಣ್ಣ ರಾಜ್ಯಗಳು ಮತ್ತು ಕೇಂದ್ರೀಕೃತ ಏಕಘಟಕ ಸರ್ಕಾರವನ್ನು ಪ್ರತಿಪಾದಿಸುತ್ತಿದ್ದರು.

ನಮ್ಮ ಸಂವಿಧಾನವು ಇಂದು ತನ್ನ ನೆಲೆಗಟ್ಟಾಗಿರುವ ಆದರ್ಶಗಳ ಮೇಲಿನ ಅತಿಕ್ರಮಣಗಳ ವಿರುದ್ಧ ಭದ್ರಕೋಟೆಯಾಗಿ ನಿಂತಿದೆ ಎಂಬುದನ್ನು, ಸಾರರೂಪದಲ್ಲಿ ಒಂದು ಅಸಂಬದ್ಧ ನಾಟಕವೇ ಆಗಿರುವ ಈ ಘಟನೆಯ ಮೂಲಕ ಮತ್ತೊಮ್ಮೆ ಸ್ವಯಂವೇದ್ಯಗೊಳಿಸಿದೆ. ನಿಜವಾದ ಉದ್ದೇಶ "ಎಎಸ್‌ಎಪಿ" ಅಂದರೆ "ಸಾಧ್ಯವಾದಷ್ಟು ಬೇಗ" ಎಂಬುದನ್ನು ಕುರಿತಂತೆ ಸಾಂವಿಧಾನಿಕ ವ್ಯಾಖ್ಯಾನವನ್ನು ಪಡೆಯುವುದಲ್ಲ, ಬದಲಾಗಿ ಪ್ರಜಾಸತ್ತಾತ್ಮಕವಾಗಿ ಚುನಾಯಿತವಾದ ಶಾಸಕಾಂಗಗಳ ಸಾರ್ವಭೌಮ ಅಧಿಕಾರವನ್ನು ದುರ್ಬಲಗೊಳಿಸುವುದು.



ವ್ಯಂಗ್ಯಚಿತ್ರ: ಸತೀಶ ಆಚಾರ್ಯ, ಸೌತ್ ಫಸ್ಟ್

ನವೆಂಬರ್ 1 ರೊಳಗೆ ಕೇರಳ ಕಡು ಬಡತನ ಮುಕ್ತ ರಾಜ್ಯವಾಗಲಿದೆ
ಎಲ್‌ಡಿಎಫ್‌ನ 4ನೇ ವಾರ್ಷಿಕೋತ್ಸವ ಸಮಾರಂಭದಲ್ಲಿ ಪಿಣರಾಯಿ ವಿಜಯನ್



ತಿರುವನಂತಪುರಂ: ಈ ವರ್ಷದ ನವೆಂಬರ್ 1 ರ ವೇಳೆಗೆ ಕೇರಳ ಕಡು ಬಡತನ ಮುಕ್ತ ರಾಜ್ಯವಾಗಿ ಹೊರಹೊಮ್ಮಲಿದೆ ಎಂದು ಕೇರಳದ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಹೇಳಿದ್ದಾರೆ. ಮೇ 23ರಂದು ತಿರುವನಂತಪುರಂನಲ್ಲಿ ನಡೆದ ಎಲ್‌ಡಿಎಫ್ ಸರ್ಕಾರದ ನಾಲ್ಕನೇ ವಾರ್ಷಿಕೋತ್ಸವ ಸಮಾರಂಭದಲ್ಲಿ ಅವರು ಮಾತನಾಡುತ್ತಿದ್ದರು. ಕೇರಳವು ದೇಶದಲ್ಲೇ ಅತ್ಯಂತ ಕಡಿಮೆ ಬಡತನ ಮಟ್ಟವನ್ನು ಹೊಂದಿದೆ, ಬಲವಾದ ಮತ್ತು ಪರಿಣಾಮಕಾರಿ ಸಾರ್ವಜನಿಕ ವಿತರಣಾ ವ್ಯವಸ್ಥೆಯಿಂದ ಇದನ್ನು ಸಾಧಿಸಲಾಗಿದೆ ಮತ್ತು ತಮ್ಮ ಸರ್ಕಾರ ಕಳೆದ ಕೆಲವು ವರ್ಷಗಳಿಂದ ಈ ಅಭಿವೃದ್ಧಿಯನ್ನು ಸ್ಥಿರವಾಗಿ ಬಲಪಡಿಸುತ್ತಿದೆ. ಸಾರ್ವಜನಿಕ–ಖಾಸಗಿ ಸಹಭಾಗಿತ್ವ ನೀತಿಗಳನ್ನು ಕೈಗಾರಿಕಾ ತಂತ್ರಗಳೊಂದಿಗೆ ಸಂಯೋಜಿಸುವ ಮೂಲಕ ಕೇರಳ ಅಭಿವೃದ್ಧಿಯತ್ತ ಮುನ್ನಡೆಯುತ್ತಿದೆ ಎಂದು ಅವರು ಹೇಳಿದರು.

ಅತಿ ಕಡಿಮೆ ಹಣದುಬ್ಬರ

ಕೇರಳವು ದೇಶದಲ್ಲಿಯೇ ಅತ್ಯಂತ ಕಡಿಮೆ ಹಣದುಬ್ಬರ ಹೊಂದಿರುವ ರಾಜ್ಯವಾಗಿದ್ದು, ನವೆಂಬರ್ 1 ರ ವೇಳೆಗೆ ಬಡತನ ಮುಕ್ತ ರಾಜ್ಯವಾಗಲಿದೆ ಎಂದು ಒತ್ತಿ ಹೇಳಿದ ಅವರು, 2016ರಲ್ಲಿ ಎಲ್‌ಡಿಎಫ್ ಸರ್ಕಾರ ಅಧಿಕಾರ ವಹಿಸಿಕೊಂಡಾಗ, ರಾಜ್ಯದಲ್ಲಿ ಹೂಡಿಕೆ ವಾತಾವರಣವನ್ನು ಬದಲಾಯಿಸುವುದು ಪ್ರಮುಖ ಕಾಳಜಿಗಳಲ್ಲಿ ಒಂದಾಗಿತ್ತು ಎಂದು ನೆನಪಿಸಿಕೊಂಡರು. ಕಳವಳಗಳನ್ನು ಪರಿಹರಿಸಲು ತಮ್ಮ ಸರ್ಕಾರ ಕೈಗಾರಿಕೋದ್ಯಮಿಗಳು ಮತ್ತು ಪಾಲುದಾರರೊಂದಿಗೆ ವಿವರವಾದ ಚರ್ಚೆಗಳನ್ನು ನಡೆಸಿದೆ ಮತ್ತು ಯೋಜನೆಗಳ ವಿನ್ಯಾಸದಲ್ಲಿ ಅವರ ಅಭಿಪ್ರಾಯಗಳನ್ನು ಸಹ ಸೇರಿಸಲಾಗಿದೆ. ಇದರ ಪರಿಣಾಮವಾಗಿ, ರಾಜ್ಯದಲ್ಲಿ ವ್ಯವಹಾರವನ್ನು ಸುಗಮಗೊಳಿಸಲು ಕಾನೂನು ಮತ್ತು ನಿಯಮಗಳನ್ನು ತಿದ್ದುಪಡಿ ಮಾಡಲಾಗಿದೆ ಮತ್ತು ಅನೇಕ ರಚನಾತ್ಮಕ ಸುಧಾರಣೆಗಳನ್ನು ಪರಿಚಯಿಸಲಾಗಿದೆ. ಯೋಜನೆಗಳಲ್ಲಿನ ಬದಲಾವಣೆಗಳ ಜೊತೆಗೆ, ಕೈಗಾರಿಕೀಕರಣಕ್ಕೆ ಅನುಗುಣವಾಗಿ ಸಾಮಾಜಿಕ ದೃಷ್ಟಿಕೋನವನ್ನು ಬದಲಾಯಿಸುವ ಅಗತ್ಯವನ್ನು ನಾವು ಗುರುತಿಸಿದ್ದೇವೆ, ಅದಕ್ಕಾಗಿಯೇ ನಾವು ಕೇರಳದಲ್ಲಿ 'ಉದ್ಯಮಶೀಲತಾ ವರ್ಷ'ವನ್ನು ಪ್ರಾರಂಭಿಸಿದ್ದೇವೆ. ಕೇಂದ್ರ ಸರ್ಕಾರ ಈ ಮಾದರಿಯನ್ನು ರಾಷ್ಟ್ರೀಯ ಮಾದರಿ ಎಂದು ಗುರುತಿಸಿದೆ ಎಂದು ವಿಜಯನ್ ಹೇಳಿದ್ದಾರೆ.

ಕೇಂದ್ರವು ಕೇರಳದ ಬಗ್ಗೆ ಹಠಮಾರಿಯಾಗಿದೆ

ತೆರಿಗೆ ಆದಾಯ ವಿತರಣೆಯನ್ನು ಪಡೆಯುವ ಹಕ್ಕನ್ನು ರಾಜ್ಯವು ನಿರಾಕರಿಸಿದ್ದಕ್ಕಾಗಿ ಕೇಂದ್ರವನ್ನು ಟೀಕಿಸಿದ ಪಿಣರಾಯ್ ಅವರು, ಕೇಂದ್ರ ಸರ್ಕಾರವು ರಾಜ್ಯದ ತೆರಿಗೆ ಆದಾಯದ ಪಾಲನ್ನು ನ್ಯಾಯಯುತವಾಗಿ ಹಂಚಿಕೆ ಮಾಡಿದ್ದರೆ, 2022–23ರಲ್ಲಿ 2,282 ಕೋಟಿ ರೂ.ಗಳು ಮತ್ತು 2023–24ರಲ್ಲಿ 2,071 ಕೋಟಿ ರೂ.ಗಳು ಹೆಚ್ಚುವರಿಯಾಗಿ ಬರಬೇಕಿತ್ತು. 2022–23 ಮತ್ತು 2023–24ರ ಹಣಕಾಸು ವರ್ಷಗಳಲ್ಲಿ, ದೇಶದ ಎಲ್ಲಾ ರಾಜ್ಯಗಳ ಒಟ್ಟು ತೆರಿಗೆ ಆದಾಯದಲ್ಲಿ ಕೇರಳದ ಪಾಲು ಶೇ. 3.7ರಷ್ಟಿದೆ. ಅದೇ ಸಮಯದಲ್ಲಿ, ಕೇಂದ್ರದಿಂದ ಕೇರಳಕ್ಕೆ ಬಂದ ತೆರಿಗೆ ಪಾಲು ಕ್ರಮವಾಗಿ ಶೇ. 1.53 ಮತ್ತು ಶೇ. 1.13 ಮಾತ್ರ. ಕೇರಳದ ಜನಸಂಖ್ಯೆಯ ಆಧಾರದ ಮೇಲೆ ರಾಜ್ಯವು ಶೇಕಡಾ 2.7 ರಷ್ಟು ಪಾಲನ್ನು ಪಡೆಯಬೇಕು ಮತ್ತು ಇದು ಹೆಚ್ಚುವರಿ ಬೇಡಿಕೆಯಲ್ಲ, ಆದು ಕೇರಳವು ಪಡೆಯಬೇಕಾದ ನಿಜವಾದ ಪಾಲು ಎಂದು ಅವರು ವಿವರಿಸಿದರು.

ಕೇರಳ ಅಭಿವೃದ್ಧಿ: ಅಸಾಧ್ಯವಾದುದು ಇಲ್ಲಿ ಸಾಧ್ಯ......

ಪುಟ 8 ರಿಂದ

ಸಾಧ್ಯವಾಯಿತು ಮತ್ತು ಕೇರಳದ ಹೆದ್ದಾರಿ ಅಭಿವೃದ್ಧಿಯ ಬಹುದಿನಗಳ ಕನಸನ್ನು ನನಸಾಗಿಸಲು ಸಾಧ್ಯವಾಯಿತು. ಬಹಳ ದಿನಗಳಿಂದ ವಿಳಂಬವಾಗುತ್ತಿದ್ದ ಕೊಚ್ಚಿ ಮೆಟ್ರೋ ರೈಲು ಮತ್ತು ಕಣ್ಣೂರು ವಿಮಾನ ನಿಲ್ದಾಣವನ್ನು ಸಮರೋಪಾದಿಯಲ್ಲಿ ಪೂರ್ಣಗೊಳಿಸಿ ದೇಶಕ್ಕೆ ಅರ್ಪಿಸಲಾಯಿತು. ಯುಡಿಎಫ್ ಸರ್ಕಾರ ಕೈಬಿಟ್ಟಿದ್ದ ಮತ್ತು ಅನೇಕರು ಅಸಾಧ್ಯವೆಂದು ಸವಾಲು ಹಾಕಿದ ಗ್ಯೆಲ್ ಪೈಪ್‌ಲೈನ್ ಯೋಜನೆಯನ್ನು ಎಲ್‌ಡಿಎಫ್ ಸರ್ಕಾರ ಪೂರ್ಣಗೊಳಿಸಿತು, ಜನರ ಎಲ್ಲಾ ಕಳವಳಗಳನ್ನು ಪರಿಹರಿಸಿತು. ಅದೇ ರೀತಿ, ಕೇರಳದ ವಿದ್ಯುತ್ ಪ್ರಸರಣ ಮತ್ತು ವಿತರಣಾ ವಲಯ, ಕೃಷಿ ಮತ್ತು ಕೈಗಾರಿಕಾ ವಲಯಗಳಲ್ಲಿ ಭಾರಿ ಜಿಗಿತಕ್ಕೆ ದಾರಿ ಮಾಡಿಕೊಟ್ಟ ಇಡಮನ್–ಕೊಚ್ಚಿ ವಿದ್ಯುತ್ ಹೆದ್ದಾರಿಯನ್ನು ಸಹ ಸರ್ಕಾರವು ತನ್ನ ಪರಿತ್ಯಕ್ತ ರಾಜ್ಯದಿಂದ ಬೇರ್ಪಟ್ಟ ನಂತರ ಪೂರ್ಣಗೊಳಿಸಿತು.

ಪ್ರಗತಿಯಲ್ಲಿ ಹಲವು ಪ್ರಮುಖ ಯೋಜನೆಗಳು

ಅಂತರರಾಷ್ಟ್ರೀಯ ಆಯುರ್ವೇದ ಸಂಶೋಧನಾ ಕೇಂದ್ರ, ಕೊಚ್ಚಿ–ಬೆಂಗಳೂರು ಕೈಗಾರಿಕಾ ಕಾರಿಡಾರ್, ನಗರ ಅನಿಲ ವಿತರಣಾ ಯೋಜನೆ, ಐಟಿ ಕಾರಿಡಾರ್, ಪುದುವೈಪೆ ಎಲ್‌ಪಿಜಿ ಟರ್ಮಿನಲ್, ಕರಾವಳಿ ಹೆದ್ದಾರಿ, ವಯನಾಡ್ ಸುರಂಗ, ಕೆ–ಫೋನ್, ಕೊಚ್ಚಿ ವಾಟರ್ ಮೆಟ್ರೋ, ಪಶ್ಚಿಮ ಕರಾವಳಿ ಕಾಲುವೆ ಅಭಿವೃದ್ಧಿ ಯೋಜನೆ, ತಿರುವನಂತಪುರಂ ಹೊರ ವರ್ತುಲ ರಸ್ತೆ ಮತ್ತು ಡಿಜಿಟಲ್ ಸೈನ್ಸ್ ಪಾರ್ಕ್ ಸೇರಿದಂತೆ ಕೇರಳದ ಹಲವು ಪ್ರಮುಖ ಯೋಜನೆಗಳು ಪ್ರಗತಿಯಲ್ಲಿವೆ.

ಕರಾವಳಿ ಹೆದ್ದಾರಿ ಮತ್ತು ಪರ್ವತ ಹೆದ್ದಾರಿಯ ನಿರ್ಮಾಣ ಕಾರ್ಯಗಳು ಉತ್ತಮವಾಗಿ ಪ್ರಗತಿಯಲ್ಲಿವೆ. ಇಡುಕ್ಕಿ, ವಯನಾಡು ಮತ್ತು ಕಾಸರಗೋಡಿನಲ್ಲಿ ಏರ್‌ಸ್ಟ್ರಿಪ್‌ಗಳ ಸ್ಥಾಪನೆಗೆ ಡಿಪಿಆರ್ ಕೆಲಸ ಪ್ರಾರಂಭವಾಗಿದೆ. ಪ್ರತಿ ಏರ್‌ಸ್ಟ್ರಿಪ್ ಗೆ ಅಂದಾಜು 125 ಕೋಟಿ ರೂ. ವೆಚ್ಚವಾಗಲಿದೆ. ಮೂಲಸೌಕರ್ಯ ಅಭಿವೃದ್ಧಿಯು ಭವಿಷ್ಯದ ಅಭಿವೃದ್ಧಿಯಲ್ಲಿ ಹೂಡಿಕೆಯೂ ಆಗಿದೆ ಎಂಬ ತಿಳುವಳಿಕೆಯೊಂದಿಗೆ ಸರ್ಕಾರ ಮುಂದುವರಿಯುತ್ತಿದೆ. ಸರ್ಕಾರವು ಸಮಾಜದ ಅತ್ಯಂತ ದುರ್ಬಲ ವರ್ಗಗಳ ಕಲ್ಯಾಣ ಮತ್ತು ಅವರ ಪ್ರಗತಿಯನ್ನು ತುರ್ತು ಪ್ರಾಮುಖ್ಯತೆಯೊಂದಿಗೆ ಪರಿಗಣಿಸುತ್ತಿದೆ.

ಎಲ್ಲರಿಗೂ ಮನೆ

ನಿರಾಶ್ರಿತ ಮುಕ್ತವಾದ ಕೇರಳದ ಕನಸನ್ನು ನನಸಾಗಿಸಲು ಪ್ರಾರಂಭಿಸಲಾದ ಲೈಫ್ ಮಿಷನ್ ಯೋಜನೆಯಡಿಯಲ್ಲಿ, ಸರ್ಕಾರವು ಈಗಾಗಲೇ 5,79,568 ಮನೆಗಳನ್ನು ಹಂಚಿಕೆ ಮಾಡಿದೆ ಮತ್ತು ಅವುಗಳಲ್ಲಿ 4,52,156 ಮನೆಗಳನ್ನು ಪೂರ್ಣಗೊಳಿಸಿದೆ. ಉಳಿದವು ನಿರ್ಮಾಣ ಪ್ರಗತಿಯ ವಿವಿಧ ಹಂತಗಳಲ್ಲಿವೆ. ಲೈಫ್ ಮಿಷನ್ ಮೂಲಕ 1,51,992 ಪರಿಶಿಷ್ಟ ಜಾತಿ ಕುಟುಂಬಗಳಿಗೆ ಹಾಗೂ 45,048 ಪರಿಶಿಷ್ಟ ಪಂಗಡಗಳಿಗೆ ಮನೆಗಳನ್ನು ಹಂಚಿಕೆ ಮಾಡಲಾಗಿದೆ. ಅಂದರೆ ಲೈಫ್ ಮಿಷನ್ ಮೂಲಕ ಹಂಚಿಕೆಯಾದ ಒಟ್ಟು ಮನೆಗಳಲ್ಲಿ ಸುಮಾರು 34 ಪ್ರತಿಶತವು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಹೋಗಿದೆ.

ಮೀನುಗಾರ ಕುಟುಂಬಗಳಿಗೆ ಪುನರ್ವಸತಿ ಕಲ್ಪಿಸುವ ಪುನರ್ಗೆಹಂ ಯೋಜನೆಯ ಮೂಲಕ ಈಗಾಗಲೇ ಸುಮಾರು 2,300 ಮನೆಗಳನ್ನು ಒದಗಿಸಲಾಗಿದೆ. 390 ಫ್ಲಾಟ್‌ಗಳನ್ನು ಸಹ ಹಸ್ತಾಂತರಿಸಲಾಗಿದೆ. 944ರ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ.

1600 ರೂ. ಕಲ್ಯಾಣ ಪಿಂಚಣಿ

ಕಲ್ಯಾಣ ಪಿಂಚಣಿಗಳನ್ನು ಒದಗಿಸಲು ರಾಜ್ಯ ಸರ್ಕಾರ ವಾರ್ಷಿಕವಾಗಿ ಸುಮಾರು 11,000 ಕೋಟಿ ರೂ.ಗಳನ್ನು ಖರ್ಚು ಮಾಡುತ್ತದೆ. 2016ರಲ್ಲಿ ಯುಡಿಎಫ್ ಅವಧಿಯಲ್ಲಿ 34 ಲಕ್ಷ ಮಂದಿ 600 ರೂ.ನಂತೆ ಕಲ್ಯಾಣ ಪಿಂಚಣಿ ಪಡೆಯುತ್ತಿದ್ದರು. ಪ್ರಸ್ತುತ ಎಲ್‌ಡಿಎಫ್ ಸರಕಾರ 60 ಲಕ್ಷ ಜನರಿಗೆ ತಲಾ 1600 ರೂ.ಗಳನ್ನು ನೀಡುತ್ತಿದೆ. ಕಲ್ಯಾಣ ಪಿಂಚಣಿಗಾಗಿ 2011–16 ಹಂತದಲ್ಲಿ ಯುಡಿಎಫ್ ಸರ್ಕಾರದ ಒಟ್ಟು ವೆಚ್ಚ 9,000 ಕೋಟಿ ರೂ. ಗಳಾಗಿದ್ದರೆ, ಎಲ್‌ಡಿಎಫ್ ಸರ್ಕಾರಗಳು ಕಳೆದ ಒಂಬತ್ತು ವರ್ಷಗಳಲ್ಲಿ ಸುಮಾರು 72,000 ಕೋಟಿ ರೂ.ಗಳನ್ನು ಖರ್ಚು ಮಾಡಿವೆ.

4 ಲಕ್ಷಕ್ಕೂ ಹೆಚ್ಚು ಕುಟುಂಬಗಳು ಭೂಮಿಯ ವಾರಸುದಾರರಾದರು

ಕೇರಳದ ಇತಿಹಾಸದಲ್ಲಿ ಅತಿ ಹೆಚ್ಚು ಸಂಖ್ಯೆಯ ಪಟ್ಟಾಗಳನ್ನು ವಿತರಿಸಿದ ಸರ್ಕಾರ ಎಂಬ ಹೆಗ್ಗಳಿಕೆ ಈ ಸರ್ಕಾರಕ್ಕೆ ಬಂದಿದೆ. ನಾಲ್ಕನೇ ವಾರ್ಷಿಕೋತ್ಸವದ ಅಂಗವಾಗಿ, ಇನ್ನೂ 43,058 ಪಟ್ಟಾಗಳನ್ನು ವಿತರಣೆಯೊಂದಿಗೆ, ಈ ನಾಲ್ಕು ವರ್ಷಗಳಲ್ಲಿ ಒಟ್ಟು 2,23,945 ಪಟ್ಟಾಗಳನ್ನು ವಿತರಿಸಲಾಗಿದೆ. ಹಿಂದಿನ ಎಲ್‌ಡಿಎಫ್ ಸರ್ಕಾರದ ಅವಧಿಯಲ್ಲಿ 1,77,011 ಭೂ ಹಕ್ಕುಪತ್ರಗಳನ್ನು ವಿತರಿಸಿದ್ದ ದಾಖಲೆಯನ್ನು ಈ ಎಲ್‌ಡಿಎಫ್ ಸರ್ಕಾರ ಹಿಂದಿಕ್ಕಿದೆ. ಕಳೆದ ಒಂಬತ್ತು ವರ್ಷಗಳಲ್ಲಿ, ನಾಲ್ಕು ಲಕ್ಷಕ್ಕೂ ಹೆಚ್ಚು ಕುಟುಂಬಗಳು ಭೂಮಿಯ ಒಡೆಯರಾದ್ದಾರೆ. ಇದು ದೇಶದ ಯಾವುದೇ ರಾಜ್ಯ ಸರ್ಕಾರವು ಹೇಳಿಕೊಳ್ಳಲಾಗದ ಸಾಧನೆಯಾಗಿದೆ. ಮುಂದಿನ ವರ್ಷದೊಳಗೆ ಎಲ್‌ಡಿಎಫ್ ಸರ್ಕಾರವು ಒಂದು ಲಕ್ಷಕ್ಕೂ ಹೆಚ್ಚು ಪಟ್ಟಾಗಳನ್ನು ವಿತರಿಸಲು ಉದ್ದೇಶಿಸಿದೆ. ಭೂರಹಿತರ ಕೇರಳದ ಗುರಿಯತ್ತ ಕ್ರಮೇಣ ಹತ್ತಿರವಾಗುತ್ತಿದೆ.

ಕಡು ಬಡತನವಿಲ್ಲದ ಕೇರಳ

ಕೇರಳವು ಕಡು ಬಡತನವಿಲ್ಲದ ಭಾರತದ ಮೊದಲ ರಾಜ್ಯವಾಗುತ್ತಿದೆ. ಏಪ್ರಿಲ್ 15, 2025ರ ವೇಳೆಗೆ ಕಡು ಬಡತನ ನಿರ್ಮೂಲನಾ ಯೋಜನೆಯ ದತ್ತಾಂಶದ ಪ್ರಕಾರ, ಗುರುತಿಸಲಾದ ಒಟ್ಟು ಕುಟುಂಬಗಳಲ್ಲಿ, ಇಲ್ಲಿಯವರೆಗೆ ಕಡು ಬಡತನದಲ್ಲಿ ವಾಸಿಸುತ್ತಿರುವ ಒಟ್ಟು ಕುಟುಂಬಗಳಲ್ಲಿ 50,401 ಕುಟುಂಬಗಳನ್ನು (ಶೇ.78.74) ಮೇಲೆತ್ತಲು ಸಾಧ್ಯವಾಗಿದೆ. ನವೆಂಬರ್ 1, 2025ರ ವೇಳೆಗೆ ರಾಜ್ಯವನ್ನು ಕಡು ಬಡತನದಿಂದ ಸಂಪೂರ್ಣವಾಗಿ ಮುಕ್ತಗೊಳಿಸಲು ಸಮರೋಪಾದಿಯಲ್ಲಿ ಪ್ರಯತ್ನಗಳನ್ನು ಮಾಡಲಾಗುತ್ತಿದೆ.

50,000ಕ್ಕೂ ಹೆಚ್ಚು ತರಗತಿ ಕೊಠಡಿಗಳು ಹೈಟೆಕ್

ಶಿಕ್ಷಣ ಕ್ಷೇತ್ರದಲ್ಲಿ, ಮೂಲಸೌಕರ್ಯ ಮತ್ತು ಶೈಕ್ಷಣಿಕ ವಿಷಯದಲ್ಲಿ ರಾಜ್ಯ ಸರ್ಕಾರವು ಅಭೂತಪೂರ್ವ ಹಸ್ತಕ್ಷೇಪಗಳನ್ನು ಕೈಗೊಳ್ಳುತ್ತಿದೆ. ಶಾಲಾ ಮೂಲಸೌಕರ್ಯಗಳ ಅಭಿವೃದ್ಧಿಗಾಗಿಯೇ ಸುಮಾರು 5000 ಕೋಟಿ ರೂ. ಹಣವನ್ನು ಈಗಾಗಲೇ ಹಂಚಿಕೆ ಮಾಡಲಾಗಿದೆ. ಐದು ಕೋಟಿ ವೆಚ್ಚದಲ್ಲಿ 141 ಶಾಲಾ ಕಟ್ಟಡಗಳನ್ನು ನವೀಕರಿಸಲಾಗುತ್ತಿದೆ. ಅವುಗಳಲ್ಲಿ 139 ಪೂರ್ಣಗೊಂಡಿವೆ. ಮೂರು ಕೋಟಿ ವೆಚ್ಚದಲ್ಲಿ 386 ಶಾಲಾ ಕಟ್ಟಡಗಳನ್ನು ನವೀಕರಿಸಲಾಗುತ್ತಿದೆ. ಅವುಗಳಲ್ಲಿ 179 ಪೂರ್ಣಗೊಂಡಿವೆ.

ಒಂದು ಕೋಟಿ ವೆಚ್ಚದಲ್ಲಿ ನವೀಕರಣಗೊಳ್ಳುತ್ತಿರುವ 446 ಶಾಲಾ ಕಟ್ಟಡಗಳ ಪೈಕಿ 195 ಪೂರ್ಣಗೊಂಡಿವೆ. ಹೀಗಾಗಿ ಒಟ್ಟು 973 ಶಾಲಾ ಕಟ್ಟಡಗಳನ್ನು ಮಂಜೂರು ಮಾಡಲಾಗಿದ್ದು, 513 ಪೂರ್ಣಗೊಂಡಿವೆ. 50,000ಕ್ಕೂ ಹೆಚ್ಚು ತರಗತಿ ಕೊಠಡಿಗಳನ್ನು ಹೈಟೆಕ್ ಆಗಿ ಪರಿವರ್ತಿಸಲಾಗಿದೆ. ಶಾಲೆಗಳಲ್ಲಿ ಟಿಂಕರಿಂಗ್ ಲ್ಯಾಬ್‌ಗಳು ಮತ್ತು ರೊಬೊಟಿಕ್ಸ್ ಲ್ಯಾಬ್‌ಗಳನ್ನು ಸ್ಥಾಪಿಸಲಾಗಿದೆ. ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಗೆ ಕೃತಕ ಬುದ್ಧಿಮತ್ತೆ ಕ್ಷೇತ್ರದಲ್ಲಿ ತರಬೇತಿ ನೀಡುವ ಮೊದಲ ರಾಜ್ಯ ಕೇರಳವಾಗಿದೆ.

(ಮುಂದಿನ ಸಂಚಿಕೆಯಲ್ಲಿ ಇನ್ನಷ್ಟು)

ಕನ್ನಡಕ್ಕೆ:ಸಿಚಿ



ಜರ್ಮನ್ ಪಾರ್ಲಿಮೆಂಟ್ ಭವನ ರೈಸ್ ತಾಗ್ ನಲ್ಲಿ ಬೆಂಕಿ

ಫ್ಯಾಸಿಸಂ ವಿರುದ್ಧ ವಿಜಯದ 80ನೇ ವಾರ್ಷಿಕೋತ್ಸವವನ್ನು ಇತ್ತೀಚೆಗೆ (ಮೇ8–9) ಜಗತ್ತಿನಾದ್ಯಂತ ಸಂಭ್ರಮದಿಂದ ಆಚರಿಸಲಾಯಿತು. ಈಗಲೂ ಈ ಸಂಭ್ರಮಾಚರಣೆ ಏಕೆ? ಫ್ಯಾಸಿಸಂ ಅನ್ನು ಏಕೆ ವಿರೋಧಿಸಬೇಕು? ಫ್ಯಾಸಿಸಂ ವಿರುದ್ಧದ ವಿಜಯದಲ್ಲಿ ವಿವಿಧ ದೇಶಗಳ ಸರಕಾರಗಳ, ರಾಜಕೀಯ ಶಕ್ತಿಗಳ ಪಾತ್ರವೇನಿತ್ತು? ಎರಡನೆಯ ಮಹಾಯುದ್ಧ ಏಕೆ ಫ್ಯಾಸಿಸಂ ಜತೆಗೆ ತಳುಕು ಹಾಕಿಕೊಂಡಿದೆ? ಫ್ಯಾಸಿಸಂ ವಿರುದ್ಧದ ವಿಜಯದಲ್ಲಿ ಮಿತ್ರಕೂಟದ ಸೈನ್ಯಗಳ ಪಾತ್ರವೇನಿತ್ತು? ಯುರೋಪಿಯನ್ ಜನತಾ ಪ್ರತಿರೋಧ ಗೆರಿಲ್ಲಾ ಸೈನ್ಯದ ಪಾತ್ರವೇನಿತ್ತು? ಆಗಿನ ಫ್ಯಾಸಿಸಂ ವಿರುದ್ಧ ಮಿತ್ರಕೂಟದ ಪಾಶ್ಚಿಮಾತ್ಯ ದೇಶಗಳು ಮತ್ತು ಮಾಜಿ ಸೋವಿಯೆಟ್ ದೇಶಗಳು ಬೇರೆ ಬೇರೆ ದಿನದಂದು ಬೇರೆ ಬೇರೆ ರೀತಿಯಲ್ಲಿ ಬೇರೆಯಾಗಿ ಏಕೆ ಆಚರಿಸುತ್ತಾರೆ? ಈ ಕುರಿತು ಏಳುವ ಈ ಕೆಲವು ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವುದು –ಈ ಲೇಖನ ಸರಣಿಯ ಉದ್ದೇಶ. ಈ ಸರಣಿಯ ಭಾಗ–1ರಲ್ಲಿ ಮೊದಲ 3 ಪ್ರಶ್ನೆಗಳನ್ನು ಉತ್ತರಿಸಲಾಗಿದೆ. ಈ ಭಾಗ–2ರಲ್ಲಿ ಮುಂದಿನ 3 ಪ್ರಶ್ನೆಗಳಿಗೆ ಉತ್ತರ ಕೊಡಲಾಗಿದೆ.

ಫ್ಯಾಸಿಸಂ ವಿರುದ್ಧ ವಿಜಯದ 80ನೇ ವಾರ್ಷಿಕೋತ್ಸವ–ಕೆಲವು ಪ್ರಶ್ನೆಗಳು

ವಸಂತರಾಜ ಎನ್.ಕೆ.

ಭಾಗ 2

4. ಫ್ಯಾಸಿಸಂ ಹುಟ್ಟು ಹೇಗಾಯಿತು ಮತ್ತು ಅದನ್ನು ಮೊದಲಿನಿಂದಲೂ ವಿರೋಧಿಸಿದ ರಾಜಕೀಯ ಶಕ್ತಿಗಳು ಯಾವುವು?

ಫ್ಯಾಸಿಸಂ ಹುಟ್ಟಿದ ಜರ್ಮನಿ, ಇಟಲಿ, ಸ್ಪೈನ್ ಗಳಲ್ಲಿ ಎರಡನೇ ಮಹಾಯುದ್ಧದ ಮೊದಲೇ ಅದರ ವಿರುದ್ಧ ಹೋರಾಟ ಆರಂಭವಾಗಿತ್ತು. ಈ ಹೋರಾಟವನ್ನು ಈ ದೇಶಗಳಲ್ಲಿ ಪ್ರಮುಖ ರಾಜಕೀಯ ಶಕ್ತಿಗಳಾಗಿದ್ದ ಸೋಶಲಿಸ್ಟ್, ಕಮ್ಯುನಿಸ್ಟ್ ಮತ್ತು ಇತರ ಎಡಶಕ್ತಿಗಳು ನಡೆಸಿದ್ದವು. ಫ್ಯಾಸಿಸಂ ಅಧಿಕಾರಕ್ಕೆ ಬರುವ ಮೊದಲೇ ಫ್ಯಾಸಿಸ್ಟ್ ಶಕ್ತಿಗಳೊಂದಿಗೆ ಇವು ಬೀದಿ ಕಾಳಗದಲ್ಲಿ ತೊಡಗಿದ್ದವು. ಫ್ಯಾಸಿಸ್ಟ್ ಪಕ್ಷಗಳು ಇಟಲಿಯಲ್ಲಿ 1922ರಲ್ಲಿ, ಜರ್ಮನಿಯಲ್ಲಿ 1933ರಲ್ಲಿ, ಸ್ಪೈನಿನಲ್ಲಿ 1938ರಲ್ಲಿ ಅಧಿಕಾರಕ್ಕೆ ಬಂದವು.

ಸ್ಪೈನಿನಲ್ಲಿ ಪ್ರಜಾಪ್ರಭುತ್ವವಾದಿಗಳು, ಕಮ್ಯುನಿಸ್ಟ್, ಸೋಶಲಿಸ್ಟ್ ಮತ್ತಿತರ ಪ್ರಗತಿಪರ ಶಕ್ತಿಗಳ ಬೆಂಬಲದಿಂದ 1936ರಲ್ಲಿ ಅಧಿಕಾರಕ್ಕೆ ಬಂದ 'ಜನಪ್ರಿಯ ರಂಗ'ದ ವಿರುದ್ಧ ಫ್ಯಾಸಿಸ್ಟರು ಅಂತರ್ಯುದ್ಧದಲ್ಲಿ ತೊಡಗಿದ್ದರು. ಜಗತ್ತಿನ ಹಲವು ಪ್ರಜಾಪ್ರಭುತ್ವವಾದಿಗಳು, ಸೋಶಲಿಸ್ಟರು, ಕಮ್ಯುನಿಸ್ಟರು ಈ ಅಂತರ್ಯುದ್ಧದಲ್ಲಿ ಭಾಗವಹಿಸಿದ್ದರು. ಜರ್ಮನಿ, ಇಟಲಿ, ಸ್ಪೈನ್ ಗಳಲ್ಲಿ ಪ್ರಬಲವಾಗಿ ಬೆಳೆಯುತ್ತಿದ್ದ ಪ್ರಮುಖ ರಾಜಕೀಯ ಶಕ್ತಿಗಳಾದ ಕಮ್ಯುನಿಸ್ಟರು, ಸೋಶಲಿಸ್ಟರು, ಪ್ರಜಾಪ್ರಭುತ್ವವಾದಿಗಳಿಗೆ ಸಿಗುತ್ತಿರುವ ಜನಬೆಂಬಲ ಕಂಡು ಬೆದರಿದ ಅಲ್ಲಿನ ಬಂಡವಾಳಶಾಹಿ ಆಳುವ ವರ್ಗಗಳು ಫ್ಯಾಸಿಸ್ಟ್ ಶಕ್ತಿಗಳ ಮೊರೆ ಹೊಕ್ಕವು. ಪ್ರಬಲ ಯುರೋಪಿಯನ್ ಶಕ್ತಿ ರಾಷ್ಟ್ರಗಳಾದ ಬ್ರಿಟನ್ ಮತ್ತು ಫ್ರಾನ್ಸ್ ನ ಆಳುವ ವರ್ಗಗಳು ಇದೇ ಕಾರಣಕ್ಕಾಗಿ ಫ್ಯಾಸಿಸಂ ವಿರುದ್ಧದ ಹೋರಾಟಗಳಿಗೆ ಬೆಂಬಲ ಕೊಡಲಿಲ್ಲ. ಉದಾಹರಣೆಗೆ ಸ್ಪೈನಿನ ಅಂತರ್ಯುದ್ಧದಲ್ಲಿ ಜರ್ಮನಿ, ಇಟಲಿ ಅಲ್ಲಿನ ಫ್ಯಾಸಿಸ್ಟರಿಗೆ ಮಿಲಿಟರಿ ಬೆಂಬಲ ಕೊಟ್ಟರೆ, "ಜನಪ್ರಿಯ ರಂಗ"ಕ್ಕೆ ಸಹಾಯಾರ್ಥವಾಗಿ ಬ್ರಿಟನ್, ಫ್ರಾನ್ಸ್ ತಮ್ಮ ಕಿರು ಬೆರಳನ್ನು ಎತ್ತಿಲ್ಲ.

ಪ್ರಜಾಪ್ರಭುತ್ವದ ವೈಫಲ್ಯವೇ ಸಮಸ್ಯೆಗಳಿಗೆ ಮೂಲವೆಂಬ ತಿಳುವಳಿಕೆ, ವರ್ಗ ತಿಕ್ಕಾಟಗಳನ್ನು ಅಡಗಿಸುವ ಉಗ್ರ ರಾಷ್ಟ್ರೀಯವಾದ, ಪ್ರಬಲ ಸೂಪರ್ ಮ್ಯಾನ್ ನಾಯಕನ ಸರ್ವಾಧಿಕಾರವೇ ಇದಕ್ಕೆ ಪರಿಹಾರ, ಸರ್ವಾಧಿಕಾರಿಯ ಬಂಟರಾದ ಬಂಡವಾಳಶಾಹಿ ಗುಂಪಿನ ಆರ್ಥಿಕ ಪ್ರಾಬಲ್ಯ, ಎಲ್ಲ ರಾಜಕೀಯ ವಿರೋಧಿಗಳ ಅದರಲ್ಲೂ ವಿಶೇಷವಾಗಿ ಸೋಶಲಿಸ್ಟರ, ಕಮ್ಯುನಿಸ್ಟರ ದ್ವೇಷ/ಹಿಂಸಾತ್ಮಕ ದಮನ, ರಾಷ್ಟ್ರದ ಗಡಿಗಳನ್ನು ವಿಸ್ತರಿಸಿ ಭೂತಕಾಲದ (ಉದಾ: ಇಟಲಿಯಲ್ಲಿ ಪ್ರಾಚೀನ ರೋಮ್) ಸಾಮ್ರಾಜ್ಯವನ್ನು ಮತ್ತೆ ಕಟ್ಟುವ ಹುಸಿ ಕನಸು, ಬಹುಸಂಖ್ಯಾತ (ಉದಾ: ಜರ್ಮನಿಯಲ್ಲಿ ಶುದ್ಧ ಆರ್ಯನ್) ಜನಾಂಗದ ಶ್ರೇಷ್ಟತೆ, ನಿರ್ದಿಷ್ಟ ಅಲ್ಪಸಂಖ್ಯಾತ ಜನಾಂಗ/ಧರ್ಮ/ಗುಂಪುಗಳೇ (ಉದಾ: ಜರ್ಮನಿಯಲ್ಲಿ ಜ್ಯೂ) ಹಲವು ಸಮಸ್ಯೆಗಳಿಗೆ ಮೂಲವಾದ್ದರಿಂದ ಅವರ ದ್ವೇಷ/ಹಿಂಸಾತ್ಮಕ ದಮನ– ಇವು ಫ್ಯಾಸಿಸಂ ನ ಸಾಮಾನ್ಯ ಗುಣಲಕ್ಷಣಗಳಾಗಿದ್ದವು. ಮೊದಲ ಮಹಾಯುದ್ಧದ ನಂತರ ಬ್ರಿಟನ್, ಫ್ರಾನ್ಸ್ ಮುಂತಾದ ಪ್ರಬಲ ರಾಷ್ಟ್ರಗಳು ಹೊರಿಸಿದ ಒಪ್ಪಂದಗಳ ರಾಷ್ಟ್ರೀಯವಾಗಿ ಅವಮಾನಕಾರಿ ಶರತ್ತುಗಳು, 1920ರ ದಶಕದ ಉತ್ತರಾರ್ಧ ಮತ್ತು 1930ರ ದಶಕದ ಆರಂಭದಲ್ಲಿ ಜಾಗತಿಕ ಮಹಾ ಬಿಕ್ಕಟ್ಟು– ಇವು ಜನಸಾಮಾನ್ಯರಿಗೆ ಉಂಟು ಮಾಡಿದ ಅಸಹನೀಯ ಜೀವನ ಪರಿಸ್ಥಿತಿ, ಇವುಗಳ ಪರಿಹಾರ ಮಾಡುವಲ್ಲಿ ಆಗಿನ ಸರಕಾರಗಳ ವೈಫಲ್ಯಗಳಿಂದ ಹತಾಶ ಜನತೆಯ ಕೆಲವು ವಿಭಾಗಗಳಲ್ಲಿ ಫ್ಯಾಸಿಸಂ ಗೆ ಬೆಂಬಲ ದೊರಕಿತು.


ನಾಜಿ ಪಡೆಗಳಿಂದ ಕಮ್ಯುನಿಸ್ಟರ ಸಾಮೂಹಿಕ ಬಂಧನ

5. ಎರಡನೇ ಮಹಾಯುದ್ಧದ ಐದು ಹಂತಗಳು ಯಾವುವು?

ಎರಡನೇ ಮಹಾಯುದ್ಧ ಎರಡು ಫ್ಯಾಸಿಸ್ಟ್ ಅಥವಾ ಅಕ್ಷ (ಆಕ್ಸಿಸ್) ಕೂಟ ಮತ್ತು ಫ್ಯಾಸಿಸ್ಟ್–ವಿರೋಧಿ ಅಥವಾ ಮಿತ್ರಕೂಟಗಳ ನಡುವೆ ನಡೆಯಿತು. ಈ ಕೂಟ ಮಹಾಯುದ್ಧ ಆರಂಭವಾಗುವಾಗ ಇರಲಿಲ್ಲ. ಫ್ಯಾಸಿಸ್ಟ್ ಅಥವಾ ಅಕ್ಷ ಕೂಟದಲ್ಲಿ ಪ್ರಮುಖವಾಗಿ ಜರ್ಮನಿ, ಇಟಲಿ, ಜಪಾನ್ ಹಾಗೂ ಫ್ಯಾಸಿಸ್ಟ್–ವಿರೋಧಿ ಅಥವಾ ಮಿತ್ರಕೂಟದಲ್ಲಿ ಪ್ರಮುಖವಾಗಿ ಬ್ರಿಟನ್, ಫ್ರಾನ್ಸ್, ಅಮೆರಿಕ, ಕೆನಡಾ, ಬೆಲ್ಜಿಯಂ, ಹಾಲೆಂಡ್ ಮತ್ತು ಹೆಚ್ಚಿನ ಪಶ್ಚಿಮ ಯುರೋಪಿನ ದೇಶಗಳು, ಅವುಗಳ ವಸಾಹತುಗಳು ಇದ್ದವು.

ಎರಡನೇ ಮಹಾಯುದ್ಧವನ್ನು ಐದು ಹಂತಗಳಾಗಿ ವಿಂಗಡಿಸಲಾಗುತ್ತದೆ.

1. ಹುಸಿ ಯುದ್ಧ (ಸೆಪ್ಟೆಂಬರ್ 1939– ಏಪ್ರಿಲ್ 1940)
2. ಮಿಂಚಿನ ದಾಳಿ (ಏಪ್ರಿಲ್ 1940– ಜೂನ್ 1940)
3. ಬ್ರಿಟಿಶ್ ಸಾಮ್ರಾಜ್ಯದ ಮೇಲೆ ದಾಳಿ (ಜುಲೈ 1940–ಜೂನ್ 1941)
4. ಸೋವಿಯೆಟ್ ಮೇಲೆ ದಾಳಿ, ತೀಕ್ಷ್ಣ ಪ್ರತಿರೋಧ ಮತ್ತು ನಾಜಿ ಹಿನ್ನಡೆ (1941–1943)
5. ಫ್ಯಾಸಿಸ್ಟ್ ಕೂಟದ ಪತನ (1944–45)

ಈ ಐದು ಹಂತಗಳಲ್ಲಿ ವಿವಿಧ ಫ್ಯಾಸಿಸ್ಟ್–ವಿರೋಧಿ ಶಕ್ತಿಗಳ ಪಾತ್ರ ವಿಭಿನ್ನವಾಗಿತ್ತು. ಹಿಟ್ಲರ್ ಯುದ್ಧ ಆರಂಭಿಸಿ ಪೋಲೆಂಡನ್ನು ಕ್ಷಿಪ್ರಗತಿಯಲ್ಲಿ ವಶಪಡಿಸಿಕೊಂಡ. ಬ್ರಿಟನ್, ಫ್ರಾನ್ಸ್‌ಗಳು ಜರ್ಮನಿಯ ಮೇಲೆ ಯುದ್ಧ ಸಾರಿದವು. ಆದರೆ ಈ ಮೊದಲ ಹಂತದಲ್ಲಿ ಮುಂಬರುವ ಯುದ್ಧಕ್ಕೆ ತಯಾರಿ, ಎದುರಾಳಿಗಳ ವಿರುದ್ಧ ಪ್ರಚಾರ ಬಿಟ್ಟರೆ ಮಿಲಿಟರಿ ನಡೆಗಳಿರಲಿಲ್ಲ. ಹಾಗಾಗಿಯೇ ಇದನ್ನು 'ಹುಸಿಯುದ್ಧ'ದ ಹಂತವೆಂದು ಕರೆಯಲಾಗುತ್ತದೆ.

ಎರಡನೇ ಹಂತದಲ್ಲಿ ನಾಜಿಗಳು ಪಶ್ಚಿಮದತ್ತ 'ಮಿಂಚಿನ ದಾಳಿ' ನಡೆಸಿ ಹೆಚ್ಚಿನ ಮಿಲಿಟರಿ ಪ್ರತಿರೋಧವಿಲ್ಲದೆ ಎರಡೇ ತಿಂಗಳಲ್ಲಿ ಫ್ರಾನ್ಸ್, ಹಾಲಂಡ್, ಬೆಲ್ಜಿಯಂ, ಡೆನ್ಮಾರ್ಕ್, ನಾರ್ವೇ ವಶಪಡಿಸಿಕೊಂಡರು. ಇಟಲಿ ನಾಜಿ (ಅಕ್ಷ) ಕೂಟದ ಭಾಗವಾಗಿ ಯುದ್ಧ ಪ್ರವೇಶಿಸಿತು. ಮೂರನೇ ಹಂತದಲ್ಲಿ ಇಡೀ ಪಶ್ಚಿಮ ಯುರೋಪ್ ಫ್ಯಾಸಿಸ್ಟ್ ಬೂಟುಗಾಲಿನಡಿ ಇದ್ದು, ಈಗ ಒಂಟಿಯಾಗಿದ್ದ ಬ್ರಿಟನ್ ಮತ್ತು ಅದರ ಆಫ್ರಿಕನ್ ಸಾಮ್ರಾಜ್ಯದ ಮೇಲೆ ದಾಳಿ ನಡೆಸಿತು. ಉತ್ತರ ಆಫ್ರಿಕಾದಿಂದ ಬ್ರಿಟಿಷ್ ಪಡೆಗಳನ್ನು ಹೊರದಬ್ಬಿತು. ಬ್ರಿಟಿಷ್ ಸೇನಾಪಡೆಗಳು 76 ದಿನಗಳ ಕಾಲ ಲಂಡನ್ನಿನ ಮತ್ತು ಇತರ ಕೆಲವು ನಗರಗಳ ಸತತ ಜರ್ಮನ್ ವಾಯುದಾಳಿಗೆ ಪ್ರತಿರೋಧವೊಡ್ಡಿದವು. ಆದರೆ ಶೀಘ್ರವೇ ಬ್ರಿಟನ್ನಿನ ಹಣ ಮತ್ತು ಶಸ್ತ್ರಾಸ್ತ್ರಗಳು ಖಾಲಿಯಾಗಿ ಅದು ಅಮೆರಿಕದಿಂದ ಹಣ ಮತ್ತು ಶಸ್ತ್ರಾಸ್ತ್ರಗಳ (ಯುದ್ಧದ ನಂತರ ಮರಳಿಸಬೇಕಾದ) ಸಾಲ ಮಾಡಬೇಕಾಯಿತು. ಇದೇ ಯುದ್ಧಾನಂತರದ ಬ್ರಿಟನಿನ ಅವನತಿಗೂ, ಅಮೆರಿಕದ ಉತ್ಕರ್ಷಕ್ಕೂ ಕಾರಣವಾಯಿತು.



ಮಿಂಚಿನ ದಾಳಿ (ಬ್ಲಿಟ್ಝ್ ಕ್ರಿಗ್) 1940



ಆಪರೇಶನ್ ಬಾರ್ಬರೋಸಾ

ಮೂರನೇ ಹಂತದಲ್ಲಿ ಜೂನ್ 1941ರಲ್ಲಿ ಹಿಟ್ಲರ್ ಸೋವಿಯೆಟ್ ಒಕ್ಕೂಟದತ್ತ ಕಣ್ಣು ಹಾಯಿಸಿ 'ಆಪರೇಶನ್ ಬಾರ್ಬರೋಸಾ' ಹೆಸರಿನ ಭಾರೀ ದಾಳಿಯನ್ನು ಆರಂಭಿಸಿದ. ಆರಂಭದ ತೀವ್ರ ಮುನ್ನಡೆಯ ನಂತರ ಸ್ಟಾಲಿನ್ ಗ್ರಾಡ್‌ನಲ್ಲಿ ನಾಜೀ ಪಡೆಗಳು ತೀಕ್ಷ್ಣ ಪ್ರತಿರೋಧ ಎದುರಿಸಿದವು. ಅಗಸ್ಟ್ 1942ರಿಂದ ಸ್ಟಾಲಿನ್ ಗ್ರಾಡ್(ವೊಲ್ಗೊಗ್ರಾಡ್)ನ ಜನತೆ ಮತ್ತು ಸೋವಿಯೆಟ್ ಪಡೆಗಳು ಹೋರಾಡಿ ಫೆಬ್ರವರಿ 1943ರ ವರೆಗೆ ಜರ್ಮನ್ ಮುನ್ನಡೆ ತಡೆದು ಹಿಮ್ಮೆಟ್ಟಿಸಿದವು. ಇದು ಎರಡನೇ ಮಹಾಯುದ್ಧದ ದಿಕ್ಕನ್ನೇ ಬದಲಿಸಿದ ಸಮರವಾಗಿತ್ತು. ಅದೇ ರೀತಿ ಸೆಪ್ಟೆಂಬರ್ 1941ರಿಂದ ಸುಮಾರು 30ಕ್ಕೂ ಹೆಚ್ಚು ತಿಂಗಳ ದೀರ್ಘ ಕಾಲ ನಾಜಿ ದಿಗ್ಬಂಧನ ಎದುರಿಸಿದ ಲೆನಿನ್ ಗ್ರಾಡ್ (ಸೈಂಟ್ ಪೀಟರ್ಸ್ ಬರ್ಗ್)ನ ಜನತೆ ಮತ್ತು ಸೋವಿಯೆಟ್ ಪಡೆಗಳು ಅವುಡುಗಚ್ಚಿ ಹೋರಾಡಿ ಜನವರಿ 1944ರಲ್ಲಿ ನಾಜಿ ಪಡೆಗಳನ್ನು ಹಿಮ್ಮೆಟ್ಟಿಸಿದವು.

ಫೆಬ್ರುವರಿ 1943ರಲ್ಲಿ ಸ್ಟಾಲಿನ್ ಗ್ರಾಡ್‌ನಲ್ಲಿ

ಪುಟ 14 ಕ್ಕೆ

ಮಾವೋವಾದಿಗಳ ಎನ್ಕೌಂಟರ್: ಸಿಪಿಐ(ಎಂ) ಪೊಲಿಟ್‌ಬ್ಯುರೊ ಖಂಡನೆ ಮಾತುಕತೆಗಳ ವಿನಂತಿಯನ್ನು ತಕ್ಷಣವೇ ಸ್ವೀಕರಿಸಲು ಆಗ್ರಹ

ಛತ್ತೀಸ್‌ಗಢದಲ್ಲಿ ಮಾವೋವಾದಿಗಳ ಪ್ರಧಾನ ಕಾರ್ಯದರ್ಶಿ ನಂಬಲ ಕೇಶವರಾವ್ ಸೇರಿದಂತೆ 27 ಮಾವೋವಾದಿಗಳ ಎನ್ಕೌಂಟರ್ ನಡೆಸಿರುವುದನ್ನು ಸಿಪಿಐ(ಎಂ) ಪೊಲಿಟ್‌ಬ್ಯುರೊ ಬಲವಾಗಿ ಖಂಡಿಸಿದೆ.

ಮಾತುಕತೆಗಾಗಿ ಮಾವೋವಾದಿಗಳಿಂದ ಪದೇ ಪದೇ ಬಂದ ಮನವಿಗಳನ್ನು ನಿರ್ಲಕ್ಷಿಸಿ, ಕೇಂದ್ರ ಸರ್ಕಾರ ಮತ್ತು ಬಿಜೆಪಿ ನೇತೃತ್ವದ ಛತ್ತೀಸ್‌ಗಢ ರಾಜ್ಯ ಸರ್ಕಾರ ಮಾತುಕತೆಯ ಮೂಲಕ ಒಂದು ಪರಿಹಾರವನ್ನು ಕಂಡುಕೊಳ್ಳುವ ಆಯ್ಕೆಯ ಬದಲಾಗಿ, ಹತ್ಯೆಗಳು ಮತ್ತು ಸಂಹಾರದ ಅಮಾನವೀಯ ನೀತಿಯನ್ನು ಅನುಸರಿಸುತ್ತಿವೆ.

ಕೇಂದ್ರ ಗೃಹ ಸಚಿವರು ನೀಡುತ್ತಿದ್ದ ಗಡುವನ್ನು ಪುನರುಚ್ಚರಿಸುವ ಹೇಳಿಕೆಗಳು ಮತ್ತು ಮಾತುಕತೆಯ ಅಗತ್ಯವಿಲ್ಲ ಎಂಬ ಛತ್ತೀಸ್‌ಗಢದ ಮುಖ್ಯಮಂತ್ರಿಯ ಹೇಳಿಕೆಯು ಮಾನವ ಜೀವಗಳನ್ನು ತೆಗೆದುಕೊಳ್ಳುವುದರಲ್ಲಿ ಖುಶಿಪಡುವಂತೆ ಕಾಣುವ ಫ್ಯಾಸಿಸ್ಟ್ ತೆರನ ಮನೋಭಾವವನ್ನು ಬಿಂಬಿಸುತ್ತವೆ, ಇದು ಪ್ರಜಾಪ್ರಭುತ್ವಕ್ಕೆ ವಿರುದ್ಧವಾಗಿದೆ ಎಂದು ಪೊಲಿಟ್‌ಬ್ಯುರೊ ಹೇಳಿದೆ.

ಅನೇಕ ರಾಜಕೀಯ ಪಕ್ಷಗಳು ಮತ್ತು ಕಾಳಜಿಯುಳ್ಳ ನಾಗರಿಕರು ಸಂವಾದದ ವಿನಂತಿಯನ್ನು ಪರಿಗಣಿಸುವಂತೆ ಸರ್ಕಾರಕ್ಕೆ ಮನವಿ ಮಾಡಿದ್ದಾರೆ. ಮಾವೋವಾದಿಗಳ ರಾಜಕೀಯಕ್ಕೆ ತಮ್ಮ ವಿರೋಧವಿರುವುದಾದರೂ, ಮಾತುಕತೆಗಾಗಿ ಅವರ ವಿನಂತಿಯನ್ನು ತಕ್ಷಣವೇ ಸ್ವೀಕರಿಸಬೇಕು ಮತ್ತು ಎಲ್ಲಾ ಅರೆಸೈನಿಕ ಕಾರ್ಯಾಚರಣೆಗಳನ್ನು ನಿಲ್ಲಿಸಬೇಕು ಎಂದು ತಾವು ಸರ್ಕಾರವನ್ನು ಆಗ್ರಹಿಸುವುದಾಗಿ ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ದೇಶದ ಹಿತದೃಷ್ಟಿಯಿಂದ ಸರಕಾರದ ರಾಜತಾಂತ್ರಿಕ ನಿಯೋಗದ ಭಾಗವಾಗಲು ಸಿಪಿಐ(ಎಂ) ಒಪ್ಪಿಗೆ "ಸರಕಾರದ ತಾರತಮ್ಯದ ನಡೆಗಳು ಬದಲಾಗಬೇಕು ಮತ್ತು ಆಳುವ ಪಕ್ಷದ ಮುಖಂಡರ ಕೋಮುವಾದಿ ನುಡಿಗಳು ನಿಲ್ಲಬೇಕು"

ಪಹಲ್ಗಾಮ್ ಭಯೋತ್ಪಾದಕ ದಾಳಿ ಮತ್ತು ನಂತರದ ಬೆಳವಣಿಗೆಗಳ ಕುರಿತು ಚರ್ಚಿಸಲು ಪ್ರಧಾನ ಮಂತ್ರಿಗಳು ಮತ್ತು ಅವರ ಸರ್ಕಾರ ಸಂಸತ್ತಿನ ವಿಶೇಷ ಅಧಿವೇಶನವನ್ನು ಕರೆಯಲು ನಿರಾಕರಿಸಿರುವುದು ದುರದೃಷ್ಟಕರ ಎಂದು ತಮ್ಮ ಪಕ್ಷ ಭಾವಿಸುವುದಾಗಿ ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ. ಸರ್ಕಾರವು ತಕ್ಷಣವೇ ಸಂಸತ್ತಿನ ಅಧಿವೇಶನವನ್ನು ಕರೆಯಬೇಕು, ಭಾರತದ ಜನರಿಗೆ ತಿಳಿಸಬೇಕು ಮತ್ತು ಏನಾದರೂ ಸ್ಪಷ್ಟೀಕರಣಗಳು ಬೇಕಾಗಿದ್ದರೆ, ಅವನ್ನು ಪಡೆಯಲು ಅವಕಾಶಗಳನ್ನು ಒದಗಿಸಬೇಕು ಎಂದು ಪೊಲಿಟ್‌ಬ್ಯುರೊ ಆಗ್ರಹಿಸಿದೆ.

ಆದರೆ ಪ್ರಧಾನ ಮಂತ್ರಿಗಳು, ಇದಕ್ಕೆ ಬದಲಾಗಿ ಬಿಜೆಪಿ–ಎನ್‌ಡಿಎ ಆಳ್ವಿಕೆಯ ರಾಜ್ಯಗಳ ಮುಖ್ಯಮಂತ್ರಿಗಳ ಸಭೆಯನ್ನು ಕರೆದು 'ಆಪರೇಷನ್ ಸಿಂಧೂರ್' ಬಗ್ಗೆ ಅವರಿಗೆ ಮಾಹಿತಿ ನೀಡಲು ನಿರ್ಧರಿಸಿದರು. ಇದು ತಾರತಮ್ಯದ ಕ್ರಮ, ವಿಶೇಷವಾಗಿ ರಾಷ್ಟ್ರೀಯ ಪ್ರಾಮುಖ್ಯತೆಯ ಒಂದು ವಿಷಯದಲ್ಲಿ ಎನ್ನುತ್ತ ಪೊಲಿಟ್‌ಬ್ಯುರೊ, ಆ ರೀತಿ ಮಾಹಿತಿ ಕೊಡಲು ಸರ್ಕಾರವು ವಿರೋಧ ಪಕ್ಷಗಳ ಮುಖ್ಯಮಂತ್ರಿಗಳು ಸೇರಿದಂತೆ ದೇಶದ ಎಲ್ಲಾ ಮುಖ್ಯಮಂತ್ರಿಗಳ ಸಭೆಯನ್ನು ಕರೆಯಬೇಕೆಂದು ಒತ್ತಾಯಿಸಿದೆ.

ಸರ್ಕಾರವು ಮೊದಲು ಭಾರತದ ಜನತೆಗೆ ಜವಾಬುದಾರವಾಗಿರಬೇಕು ಮತ್ತು ತನ್ನ ಕ್ರಿಯೆಗಳಲ್ಲಿ ಪಾರದರ್ಶಕವಾಗಿರಬೇಕು. ಆಳುವ ಪಕ್ಷದ ನಾಯಕರು ಮತ್ತು ರಾಜ್ಯ ಸಚಿವರುಗಳು ಸಹ ಪರಿಸ್ಥಿತಿಯನ್ನು ಕೋಮುಗ್ರಸ್ತಗೊಳಿಸುವ ಅಭಿಯಾನವನ್ನು ತಕ್ಷಣವೇ ನಿಲ್ಲಿಸಬೇಕು.

ಸರ್ಕಾರವು ರಾಜ್ಯಸಭೆಯಲ್ಲಿ ನಮ್ಮ ಪಕ್ಷದ ನಾಯಕರನ್ನು ಕರೆದು, ಸರಕಾರದ ರಾಜತಾಂತ್ರಿಕ ಸಂಪರ್ಕದ ಭಾಗವಾಗಿ ವಿವಿಧ ದೇಶಗಳಿಗೆ ವಿವಿಧ ನಿಯೋಗಗಳನ್ನು ಕಳಿಸಲು ನಿರ್ಧರಿಸಿರುವುದಾಗಿ ತಿಳಿಸಿತು. ಈಗಾಗಲೇ ವ್ಯಕ್ತಪಡಿಸಿರುವಂತೆ ಸಿಪಿಐ(ಎಂ)ಗೆ ಭಿನ್ನ ಅಭಿಪ್ರಾಯಗಳಿದ್ದರೂ, ತನ್ನ ಈ ಮೇಲಿನ ಆಗ್ರಹವನ್ನು ಪುನರುಚ್ಚರಿಸುತ್ತಲೇ, ವಿಶಾಲ ರಾಷ್ಟ್ರೀಯ ಹಿತದೃಷ್ಟಿಯಿಂದ ಅಂತಹ ಒಂದು ನಿಯೋಗದ ಭಾಗವಾಗಲು ಬಾಧ್ಯರಾಗಿದ್ದೇವೆ ಎಂಬುದು ಸಿಪಿಐ(ಎಂ)ನ ಭಾವನೆ ಎಂದು ಪೊಲಿಟ್‌ಬ್ಯುರೊ ಹೇಳಿದೆ.

ಗಾಜಾ ನರಮೇಧ ತಕ್ಷಣ ನಿಲ್ಲಬೇಕು–ಭಾರತ ಸರಕಾರ ಇಸ್ರೇಲ್ ಮೇಲೆ ಒತ್ತಡ ಹಾಕಬೇಕು: ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹ

ಗಾಜಾದ ಮೇಲೆ ಇಸ್ರೇಲಿನ ಆಕ್ರಮಣ ಮುಂದುವರೆಯುತ್ತಲೇ ಇರುವುದು ಅತ್ಯಂತ ಆತಂಕದ ಸಂಗತಿ, ಇಸ್ರೇಲಿ ದಾಳಿಗಳು ತಕ್ಷಣವೇ ಕೊನೆಗೊಳ್ಳಬೇಕು ಮತ್ತು ಕದನ ವಿರಾಮವನ್ನು ಜಾರಿಗೊಳಿಸಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಮೇ 20ರಂದು ನೀಡಿರುವ ಹೇಳಿಕೆಯಲ್ಲಿ ಆಗ್ರಹಿಸಿದೆ.

ಕೇವಲ ಏಪ್ರಿಲ್ 2025ರಲ್ಲಿಯೇ ಇಸ್ರೇಲ್ ವಾಯು ಮತ್ತು ನೆಲದಿಂದ ನಡೆಸಿದ ದಾಳಿಗಳಲ್ಲಿ 2,037 ಪ್ಯಾಲೆಸ್ಟೀನಿಯನ್ನರು ಕೊಲ್ಲಲ್ಪಟ್ಟಿದ್ದಾರೆ. ಕಳೆದ ಎರಡು ದಿನಗಳಲ್ಲಿ, 200 ಕ್ಕೂ ಹೆಚ್ಚು ಪ್ಯಾಲೆಸ್ಟೀನಿಯನ್ನರು ಪ್ರಾಣ ಕಳೆದುಕೊಂಡಿದ್ದಾರೆ. ಅಕ್ಟೋಬರ್ 7, 2023 ರಿಂದ, ಒಟ್ಟು 53,384 ಪ್ಯಾಲೆಸ್ಟೀನಿಯನ್ನರು ಕೊಲ್ಲಲ್ಪಟ್ಟಿದ್ದಾರೆ, ಅವರಲ್ಲಿ ಶೇ.94 ನಾಗರಿಕರು – ಶೇ.51 ಮಕ್ಕಳು, ಶೇ.16 ಮಹಿಳೆಯರು ಮತ್ತು ಶೇ.8 ವೃದ್ಧರು.

ಎರಡು ತಿಂಗಳಿಗಿಂತ ಹೆಚ್ಚು ಕಾಲ ನೆರವು ಟ್ರಕ್‌ಗಳ ಪ್ರವೇಶವನ್ನು ನಿರಾಕರಿಸಿದ ನಂತರ, ಇಸ್ರೇಲ್ ಗಾಜಾಗೆ ನಾಮಮಾತ್ರದ ಸಹಾಯ ತಲುಪಲು ಮಾತ್ರ ಅನುಮತಿ ಕೊಟ್ಟಿದೆ. ಪರಿಣಾಮವಾಗಿ, ಜನಗಳು ತೀವ್ರ ಮಟ್ಟದಲ್ಲಿ ಹಸಿದುಕೊಂಡಿರುವುದನ್ನು ಕಾಣುತ್ತಿದ್ದೇವೆ. ಅಮೆರಿಕದ ಬೆಂಬಲದಿಂದ ಉತ್ತೇಜನ ಪಡೆದಿರುವ ಇಸ್ರೇಲ್ ಈಗ ಇಡೀ ಗಾಜಾ ಪಟ್ಟಿಯನ್ನು ಆಕ್ರಮಿಸಿಕೊಳ್ಳುವ ಬಗ್ಗೆ ಮಾತನಾಡುತ್ತಿದೆ.

ಬಿಜೆಪಿ ನೇತೃತ್ವದ ಭಾರತ ಸರ್ಕಾರವು ಇಸ್ರೇಲ್ ತನ್ನ ನರಮೇಧದ ದಾಳಿಗಳನ್ನು ನಿಲ್ಲಿಸಲು ಅದರ ಮೇಲೆ ಒತ್ತಡ ಹೇರಬೇಕು, ಯುದ್ಧ–ಅಪರಾಧಗಳು ಮತ್ತು ನರಮೇಧಕ್ಕಾಗಿ ಅದರ ನಾಯಕರನ್ನು ವಿಚಾರಣೆಗೆ ಗುರಿಪಡಿಸಬೇಕು ಎಂಬ ಆಗ್ರಹಕ್ಕೆ ಧ್ವನಿಗೂಡಿಸಬೇಕು ಎಂದು ಆಗ್ರಹಿಸಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ, ಪ್ಯಾಲೆಸ್ಟೈನ್ ಜನರೊಂದಿಗೆ ಮತ್ತು 1967ರ ಪೂರ್ವದ ಗಡಿಗಳು ಹಾಗೂ ಪೂರ್ವ ಜೆರುಸಲೆಮ್ ಅನ್ನು ರಾಜಧಾನಿಯಾಗಿ ಹೊಂದಿರುವ ಪ್ಯಾಲೆಸ್ಟೈನ್ ರಾಷ್ಟ್ರಕ್ಕಾಗಿ ಅವರ ನ್ಯಾಯಯುತ ಬೇಡಿಕೆಯೊಂದಿಗೆ ತನ್ನ ಸೌಹಾರ್ದವನ್ನು ಪುನರುಚ್ಚರಿಸಿದೆ.

ಕದನ ವಿರಾಮದ ಬೆಳವಣಿಗೆಗಳು ಮತ್ತು ಸಂಬಂಧಿತ ರಾಷ್ಟ್ರೀಯ ತಲ್ಲಣಗಳ ಕುರಿತು ಸಂಸತ್ತಿನ ವಿಶೇಷ ಅಧಿವೇಶನ

–ಪ್ರಧಾನಿಗೆ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಪತ್ರ

ಭಾರತ ಮತ್ತು ಪಾಕಿಸ್ತಾನ ನಡುವೆ ಉಂಟಾದ ಉದ್ವಿಗ್ನ ವಾತಾವರಣ ತಿಳಿಗೊಳ್ಳಲಾರಂಭಿಸಿದೆ ಮತ್ತು ಕದನ ವಿರಾಮದ ಪ್ರಕಟಣೆಯಿಂದಾಗಿ ನಮ್ಮ ದೇಶದ ಎಲ್ಲ ಜನವಿಭಾಗಗಳು ಮತ್ತು ಅಂತರ್ರಾಷ್ಟ್ರೀಯ ಸಮುದಾಯವೂ ನಿಟ್ಟುಸಿರು ಬಿಡುವಂತಾಗಿದೆ. ಆದರೂ ಹಲವು ತಲ್ಲಣಗಳು ಇನ್ನೂ ಹಾಗೆಯೇ ಉಳಿದಿವೆ. ಇಂತಹ ಹಿನ್ನೆಲೆಯಲ್ಲಿ, ಸಂಸತ್ತಿನಲ್ಲಿ ಸಿಪಿಐ(ಎಂ)ನ ಸದನ ನಾಯಕರುಗಳು ಈಗಾಗಲೇ ವಿನಂತಿಸಿದಂತೆ, ಸಂಸತ್ತಿನ ವಿಶೇಷ ಅಧಿವೇಶನವನ್ನು ಕರೆಯಬೇಕು ಮತ್ತು ಸರ್ಕಾರದ ನಿಲುವನ್ನು ಸ್ಪಷ್ಟಪಡಿಸುವಲ್ಲಿ ಪ್ರಧಾನ ಮಂತ್ರಿ ವೈಯಕ್ತಿಕವಾಗಿ ಭಾಗವಹಿಸಬೇಕು ಎಂದು ವಿನಂತಿಸಿ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಎಂ.ಎ. ಬೇಬಿಯವರು ಪ್ರಧಾನ ಮಂತ್ರಿಗಳಿಗೆ ಮೇ 12ರಂದು ಪತ್ರ ಬರೆದಿದ್ದಾರೆ.

ಪತ್ರದ ಪೂರ್ಣ ಪಾಟವನ್ನು ಈ ಮುಂದೆ ಕೊಡಲಾಗಿದೆ:

"ಆತ್ಮೀಯ ಶ್ರೀ ನರೇಂದ್ರ ಮೋದೀಜಿ,

ಭಾರತ ಮತ್ತು ಪಾಕಿಸ್ತಾನ ನಡುವೆ ಉದ್ವಿಗ್ನ ವಾತಾವರಣ ತಿಳಿಗೊಳ್ಳುತ್ತಿರುವ ಮತ್ತು ಕದನ ವಿರಾಮ ಪ್ರಕಟಣೆಯಾಗಿರುವ ಇತ್ತೀಚಿನ ಬೆಳವಣಿಗೆಗಳ ಸಂದರ್ಭದಲ್ಲಿ ನಾನು ನಿಮಗೆ ಬರೆಯುತ್ತಿದ್ದೇನೆ. ಈ ಪ್ರಕಟಣೆಯು ನಮ್ಮ ದೇಶದ ಎಲ್ಲಾ ವಿಭಾಗಗಳಿಗೆ ಹಾಗೂ ಶಾಂತಿಪ್ರಿಯ ಅಂತರರಾಷ್ಟ್ರೀಯ ಸಮುದಾಯಕ್ಕೆ ಸಮಾಧಾನ ತಂದಿದೆ. ಆದಾಗ್ಯೂ, ಗಮನಿಸಲೇಬೇಕಾದ ಹಲವು ತಲ್ಲಣಗಳು ಪರಿಹಾರ ಕಾಣದೇ ಉಳಿದಿವೆ – ವಿಶೇಷವಾಗಿ ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕ ದಾಳಿಗೆ ಸಂಬಂಧಿಸಿದವುಗಳು.

ಏಪ್ರಿಲ್ 22ರಂದು ಮುಗ್ಧ ಪ್ರವಾಸಿಗರ ಮೇಲೆ ನಡೆದ ಘೋರ ದಾಳಿಯು ರಾಷ್ಟ್ರದ ಆತ್ಮಸಾಕ್ಷಿಯನ್ನು ಆಳವಾಗಿ ಕಲಕಿದೆ. ಆದರೂ, ಅದರ ನಂತರ ದೇಶಾದ್ಯಂತ ನಾಗರಿಕರು ಪ್ರದರ್ಶಿಸಿದ ಅಗಾಧವಾದ ಐಕ್ಯತೆಯು ಒಂದು ಪ್ರಬಲ ಮತ್ತು ಅಮೂಲ್ಯವಾದ ಶಕ್ತಿಯಾಗಿದೆ. ಈ ಒಗ್ಗಟ್ಟನ್ನು ದೇಶದೊಳಗಿನ ಮತ್ತು ವಿದೇಶಿ ಭಯೋತ್ಪಾದಕರು ಮತ್ತು ಅವರ ಬೆಂಬಲಿಗರನ್ನು ಮೂಲೆಗುಂಪು ಮಾಡಲು ಬಳಸಿಕೊಳ್ಳಬೇಕು.

ವಿಷಾದಕರವೆಂದರೆ, ರಾಷ್ಟ್ರೀಯ ಐಕ್ಯತೆಯ ಈ ಕ್ಷಣವನ್ನು ದ್ವೇಷ ಮತ್ತು ಅಂಧಾಭಿಮಾನದ ವಿಷಕಾರೀ ಅಭಿಯಾನಗಳ ಮೂಲಕ ಹಾಗೂ ಕೆಲವು ಮಾಧ್ಯಮಗಳು ಮತ್ತು ಸಾಮಾಜಿಕ ಮಾಧ್ಯಮಗಳಲ್ಲಿ ತಪ್ಪು ಮಾಹಿತಿಗಳನ್ನು ಹರಡಿ ದುರ್ಬಲಗೊಳಿಸಲಾಗುತ್ತಿದೆ. ಈ ಕ್ರಿಯೆಗಳು ಸಾರ್ವಜನಿಕರಲ್ಲಿ ಗಮನಾರ್ಹ ಗೊಂದಲ ಮತ್ತು ಅಶಾಂತಿಯನ್ನು ಉಂಟುಮಾಡಿವೆ.

ಇಷ್ಟೇ ಅಲ್ಲ, ಕದನ ವಿರಾಮದ ಬಗ್ಗೆ ನಮ್ಮ ಪ್ರತಿನಿಧಿಗಳಿಂದ ಯಾವುದೇ ಅಧಿಕೃತ ಹೇಳಿಕೆ ಬರುವ ಮೊದಲೇ ಅಮೆರಿಕ ಅಧ್ಯಕ್ಷರು ಪ್ರಕಟಣೆ ಮಾಡಿರುವುದು ಗಂಭೀರ ಕಳವಳಗಳನ್ನು ಹುಟ್ಟುಹಾಕಿದೆ. ನಾವು ನಮ್ಮ ವಿವಾದಗಳನ್ನು ದ್ವಿಪಕ್ಷೀಯವಾಗಿ, ಯಾವುದೇ ಮೂರನೇಯವರ ವ್ಯಕ್ತಿಯ ಹಸ್ತಕ್ಷೇಪಕ್ಕೆ ಅವಕಾಶ ನೀಡದೆ, ಇತ್ಯರ್ಥಪಡಿಸಿಕೊಳ್ಳುವುದು ನಮ್ಮ ದೇಶದ ಸ್ಪಷ್ಟವಾಗಿ ಒಪ್ಪಿಕೊಂಡಿರುವ ನೀತಿಯಾಗಿದೆ. ಆದ್ದರಿಂದ, ಈ ಪರಿಸ್ಥಿತಿಯ ಬಗ್ಗೆ ನಮ್ಮ ಸರ್ಕಾರದ ಅತ್ಯುನ್ನತ ಮಟ್ಟಗಳಿಂದ ಸ್ಪಷ್ಟ ಮತ್ತು ಆಧಿಕಾರಿಕ ಸ್ಪಷ್ಟೀಕರಣದ ಅಗತ್ಯವಿದೆ.

ಈ ಎಲ್ಲ ಪ್ರಶ್ನೆಗಳ ವಿಷಯಗಳ ಹಿನ್ನೆಲೆಯಲ್ಲಿ, ಸಿಪಿಐ(ಎಂ)ನ ಸದನ ನಾಯಕರುಗಳು ಈಗಾಗಲೇ ವಿನಂತಿಸಿರುವಂತೆ, ಸಂಸತ್ತಿನ ವಿಶೇಷ ಅಧಿವೇಶನವನ್ನು ಕರೆಯಬೇಕು ಎಂದು ಆಗ್ರಹಿಸುತ್ತೇನೆ ಮತ್ತು ಸರ್ಕಾರದ ನಿಲುವನ್ನು ಸ್ಪಷ್ಟಪಡಿಸುವಲ್ಲಿ ಪ್ರಧಾನ ಮಂತ್ರಿಯಾಗಿ ತಾವು ವೈಯಕ್ತಿಕವಾಗಿ ಭಾಗವಹಿಸಬೇಕು ಎಂದು ಕೋರುತ್ತೇನೆ."

ಕೊನೆಯ ದೃಶ್ಯ ಮುಗಿದಿದೆ.... ಪುಟ 6 ರಿಂದ

ರಾಜ್ಯಪಾಲರ ಅನಿರ್ದಿಷ್ಟ ವಿಳಂಬಕ್ಕೆ ಅವಕಾಶ ನೀಡಬಾರದು

1974ರ ಶಂಶೇರ್ ಪ್ರಕರಣದಿಂದ 2015ರ ತಮಿಳುನಾಡು ಪ್ರಕರಣದವರೆಗೆ ಹಲವಾರು ಪ್ರಕರಣಗಳಲ್ಲಿ ಇಂತಹ ವಿಷಯಗಳು ಚರ್ಚೆಯಾಗಿವೆ. ತೀರ್ಪುಗಳನ್ನು ಸಹ ನೀಡಲಾಗಿದೆ. ಈಗ ಈ ಕುರಿತು ಸುಪ್ರೀಂ ಕೋರ್ಟ್‌ನಲ್ಲಿ ವಿವರಣೆ ಕೇಳುವುದು ಅನಗತ್ಯ. ನ್ಯಾಯಾಲಯವು ಹಾಗೆ ಒಂದು ಅಭಿಪ್ರಾಯವನ್ನು ನೀಡಿದರೂ, ರಾಜ್ಯಗಳು ಅದನ್ನು ಒಪ್ಪಿಕೊಳ್ಳುತ್ತವೆ ಎಂಬುದಕ್ಕೆ ಯಾವುದೇ ಭರವಸೆ ಇಲ್ಲ. "ಸಾಧ್ಯವಾದಷ್ಟು ಬೇಗ" ಎಂಬುದಕ್ಕೆ ಎರಡು ತಿಂಗಳ ಕಾಲಾವಕಾಶವಿದ್ದರೆ, ನಾವು ಸಂವಿಧಾನದ 200ನೇ ವಿಧಿಗೆ ಬಹಳ ಉದಾರವಾದ ವ್ಯಾಖ್ಯಾನವನ್ನು ನೀಡುತ್ತಿದ್ದೇವೆ ಎಂದರ್ಥ.

ಅತ್ಯಂತ ಸಂಕೀರ್ಣವಾದ "ಆಪರೇಷನ್ ಸಿಂಧೂರ್" ಬಗ್ಗೆ ಬಹಳ ಕಡಿಮೆ ಅವಧಿಯಲ್ಲಿ ನಿರ್ಧಾರ ತೆಗೆದುಕೊಳ್ಳಬಹುದಾದ ನಾವು, ಜನರಿಂದ ಆಯ್ಕೆಯಾದ ಶಾಸಕಾಂಗವು ಅಂಗೀಕರಿಸಿದ ಕಾನೂನನ್ನು ಕೇಂದ್ರ ಸರ್ಕಾರವು ನೇಮಿಸಿದ ರಾಜ್ಯಪಾಲರು ತಮ್ಮ ರಾಜಕೀಯ ಅಗತ್ಯಗಳಿಗಾಗಿ ಸಹಿ ಮಾಡದೆ, ರಾಜಕೀಯ ಫುಟ್ಬಾಲ್ ಆಡಲು ಮತ್ತು ಅನಿರ್ದಿಷ್ಟವಾಗಿ ವಿಳಂಬ ಮಾಡಲು ಬಿಡಬಾರದು. ಕಾನೂನು ನೆರವು ಸೇವೆಯು ಬಡವರಿಗೆ ಕಾನೂನು ಸೇವೆಗಳನ್ನು ಒದಗಿಸಲು ರಚಿಸಲಾದ ಒಂದು ಸಂಸ್ಥೆಯಾಗಿದೆ. ಅತ್ಯಂತ ಐಷಾರಾಮಿ ಮಹಲುಗಳಲ್ಲಿ ವಾಸಿಸುವವರಿಗೆ ನ್ಯಾಯಾಲಯದಿಂದ ಉಚಿತ ವಿವರಣೆ ಪಡೆಯುವುದು ಈ ವ್ಯವಸ್ಥೆಯ ಉದ್ದೇಶವಲ್ಲ! ಯಾವುದೇ ಸಂದರ್ಭದಲ್ಲಿ, ಅಂತಹ ವ್ಯಾಖ್ಯಾನವು ಯಾರನ್ನೂ ನಿಯಂತ್ರಿಸಲು ಹೋಗುವುದಿಲ್ಲ.

ಕೃಪೆ: ಟೈಮ್ಸ್ ಆಫ್ ಇಂಡಿಯಾ (19.5.25)

ಕನ್ನಡಕ್ಕೆ: ಸಿ.ಸಿದ್ದಯ್ಯ

ನಾಜಿ ಜರ್ಮನಿಯ ಸೋಲಿನ 80ನೇ ವಾರ್ಷಿಕೋತ್ಸವದ ಮಾಸ್ಕೋ ಸಂಭ್ರಮಾಚರಣೆಯನ್ನು ಪಾಶ್ಚಾತ್ಯ ಶಕ್ತಿಗಳು ಬಹಿಷ್ಕರಿಸಿರುವುದನ್ನು ಪುಟಿನ್ ಅವರ ಉಕ್ರೇನ್ ಯುದ್ಧ ವಿರೋಧದ ಪರಿಭಾಷೆಯಲ್ಲಿ ವ್ಯಕ್ತಪಡಿಸಲಾಗಿದೆ. ಆದರೂ ಅವರ ಬಹಿಷ್ಕಾರದಲ್ಲಿ ಅಚ್ಚರಿಯೇನಿಲ್ಲ. ಏಕೆಂದರೆ, ನಾಜಿ ಜರ್ಮನಿಯನ್ನು ಅಂತಿಮವಾಗಿ ಸೋಲಿಸಿದ್ದು ಸೋವಿಯತ್ ಒಕ್ಕೂಟವೇ ಆಗಿದ್ದರೂ, ಅದನ್ನು ಅಂದಿನಿಂದಲೇ ಮರೆಮಾಚಲು ಪ್ರಯತ್ನಿಸಿದ್ದು ಅವರು ಆರಂಭಿಸಿದ ಶೀತಲ ಸಮರದ ಉದ್ದೇಶಕ್ಕೆ ಅನುಗುಣವಾಗಿಯೇ ಇತ್ತು. ಈಗ ಬಹುತೇಕ ಪಾಶ್ಚಿಮಾತ್ಯ ಸರ್ಕಾರಗಳು ಒಂದೋ ಸ್ವತಃ ಫ್ಯಾಸಿಸ್ಟ್ ಆಗಿವೆ ಅಥವಾ ಹೊಸದಾಗಿ ಹೊರಹೊಮ್ಮುತ್ತಿರುವ ಫ್ಯಾಸಿಸ್ಟ್ ಪಕ್ಷಗಳೊಂದಿಗೆ ವ್ಯವಹಾರ ಕುದುರಿಸುವ ಹವಣಿಕೆಯಲ್ಲಿವೆ. ಆದ್ದರಿಂದ ಸತ್ಯವನ್ನು ಅಳಿಸಿ ಹಾಕುವ ಪ್ರಯತ್ನ ಟ್ರಂಪ್ ಶೈಲಿಯಲ್ಲಿ ತಾರಕಕ್ಕೆ ಏರಿದೆ.

ಪ್ರೊ. ಪ್ರಭಾತ್ ಪಟ್ನಾಯಕ್
ಅನು: ಕೆ.ಎಂ.ನಾಗರಾಜ್



ನಾಜಿ ಸೋಲಿನ ಬಗ್ಗೆ ಸತ್ಯವನ್ನು ಅಳಿಸಿ ಹಾಕುವ ಪಾಶ್ಚಿಮಾತ್ಯ ಪ್ರಯತ್ನ ತಾರಕಕ್ಕೆ ಏರಿದೆ

ನಾಜಿ ಜರ್ಮನಿಯನ್ನು ಅಂತಿಮವಾಗಿ ಸೋಲಿಸಿದ್ದು ಸೋವಿಯತ್ ಒಕ್ಕೂಟವೇ. ಆ ಯುದ್ಧದಲ್ಲಿ ತಮ್ಮ ದೇಶದ ರಕ್ಷಣೆಗಾಗಿ ಸೋವಿಯತ್ ಜನತೆ ಮಾಡಿದ ತ್ಯಾಗ ಬಲಿದಾನಗಳನ್ನು ಸಮಗ್ರವಾಗಿ ಊಹಿಸಿಕೊಳ್ಳುವುದೂ ಕಷ್ಟವೇ. ಆದರೂ, ಈ ತ್ಯಾಗ ಬಲಿದಾನಗಳ ಸತ್ಯವನ್ನು ಅಳಿಸಿಹಾಕುವ ಪ್ರಯತ್ನವನ್ನುಪಾಶ್ಚ್ಯಾತ್ಯಶಕ್ತಿಗಳುಆರಂಭದಿಂದಲೂ ಮಾಡಿವೆ ಮತ್ತು ತಮ್ಮ ಸಾಹಸ–ಪರಾಕ್ರಮಗಳಿಂದ ನಾಜಿ ಜರ್ಮನಿಯನ್ನು ಸೋಲಿಸಿದ್ದು ತಾವೇ ಎಂದು ಹೇಳಿಕೊಳ್ಳುತ್ತವೆ ಮತ್ತು ಇಂಥಹ ಒಂದು ನಿರೂಪಣೆಯನ್ನು ಆರಂಭದಲ್ಲಿ ಸದ್ದಿಲ್ಲದೆ ಪ್ರಯತ್ನಿಸಲಾಗಿತ್ತು. ಈ ಯುದ್ಧವನ್ನು ಕಣ್ಣಾರೆ ಕಂಡ ಮತ್ತು ಅದು ಹೇಗೆ ಮುಂದುವರೆಯಿತು ಎಂಬುದನ್ನು ಅರಿತಿದ್ದ ಪಾಶ್ಚ್ಯಾತ್ಯ ಬುದ್ಧಿಜೀವಿಗಳ ಮಾತಿರಲಿ, ಜನ ಸಾಮಾನ್ಯರೂ ಸಹ ಇವನ್ನು ಕಿವಿಗೆ ಹಾಕಿಕೊಳ್ಳಲಿಲ್ಲ.

ಕೇಂಬ್ರಿಡ್ಜ್ ವಿಶ್ವವಿದ್ಯಾಲಯದ ಸೆಮಿನಾರ್‌ಗಳಲ್ಲಿ ಸೋವಿಯತ್ ಒಕ್ಕೂಟವನ್ನು ಯಾರಾದರೂ ಅತಿಯಾಗಿ ಟೀಕಿಸಿದ ಸಂದರ್ಭಗಳಲ್ಲಿ, ಪ್ರಖ್ಯಾತ ಕೀನ್ಸ್‌ವಾದಿ ಎಡ ಅರ್ಥಶಾಸ್ತ್ರಜ್ಞೆ ಪ್ರೊಫೆಸರ್ ಜೋನ್ ರಾಬಿನ್ಸನ್, "ಸೋವಿಯತ್ ಒಕ್ಕೂಟ ಇಲ್ಲದೆ ಹೋಗಿದ್ದರೆ ನಾವು ಇಂದು ಇಲ್ಲಿ ಹೀಗೆ ಕುಳಿತುಕೊಳ್ಳುತ್ತಿರಲಿಲ್ಲ ಎಂಬುದನ್ನು ಮರೆಯಬೇಡಿ" ಎಂದು ಹೇಳಿದ್ದ ಮಾತುಗಳನ್ನು ನಾನು ವೈಯಕ್ತಿಕವಾಗಿ ಜ್ಞಾಪಿಸಿಕೊಳ್ಳುತ್ತೇನೆ. ಅವರು ಪ್ರಖ್ಯಾತ ಬ್ರಿಟಿಷ್ ಜನರಲ್ (ಫ್ರೆಡ್ರಿಕ್ ಮಾರಿಸ್)ರ ಪುತ್ರಿ ಮತ್ತು ಯಾವ ರೀತಿಯಲ್ಲಿ ನೋಡಿದರೂ ಅವರೇನೂ ಕಮ್ಯುನಿಸಂ ಪರವಾಗಿ ಇದ್ದವರಲ್ಲ. ಆದರೆ, ಇದು ಸೋವಿಯತ್ ಒಕ್ಕೂಟದ ಬಗ್ಗೆ ಅವರ ಗ್ರಹಿಕೆಯಾಗಿತ್ತು. ಇದೇ ರೀತಿಯ ಗ್ರಹಿಕೆಯನ್ನು ಪಾಶ್ಚ್ಯಾತ್ಯ ಅಕೆಡೆಮಿಕ್‌ಗಳು ಯುದ್ಧಾನಂತರ ಸುದೀರ್ಘವಾಗಿ ಹೊಂದಿದ್ದರು. ಆದಾಗ್ಯೂ, ಈ ಸತ್ಯವನ್ನು ಅಳಿಸಿಹಾಕುವ ಪ್ರಯತ್ನವು ಕಾಲಕ್ರಮದಲ್ಲಿ ಒಂದು ವೇಗವನ್ನು ಪಡೆಯಿತು. ಯುದ್ಧವನ್ನು ಕಣ್ಣಾರೆ ಕಂಡಿರದ ಅಥವಾ ಅದರ ಬಗ್ಗೆ ಹೆಚ್ಚು ತಿಳಿದಿಲ್ಲದ ಹೊಸ ಹೊಸ ತಲೆಮಾರುಗಳ ಮಧ್ಯೆ ನಾಜಿ ಸೋಲಿನ ಸತ್ಯವನ್ನು ಅಳಿಸಿಹಾಕುವ ಈ ಪ್ರಯತ್ನವು ಒಂದು ರೀತಿಯ ಬಲ ಪಡೆಯಿತು ಮತ್ತು ಯಶಸ್ವಿಯಾಯಿತು ಕೂಡಾ.

ಸತ್ಯವನ್ನು ಅಳಿಸಿಹಾಕುವ ಈ ಪ್ರಯತ್ನದಲ್ಲಿ ಹಾಲಿವುಡ್ ಸಿನೆಮಾಗಳೂ ಸಹ, ಬಹುಶಃ ತಮಗರಿವಿಲ್ಲದೇ, ಪಾತ್ರವಹಿಸಿವೆ. ದಿ ಲಾಂಗೆಸ್ಟ್ ಡೇ ಮತ್ತು ದಿ ಗನ್ಸ್ ಆಫ್ ನವರೋನ್ ಅಂತಹ ಚಲನಚಿತ್ರಗಳಿಂದ ಹಿಡಿದು ಸೇವಿಂಗ್ ಪ್ರೈವೇಟ್ ರಯಾನ್ ನಂತಹ ಹಲವಾರು ಪ್ರಭಾವಶಾಲಿ ಮತ್ತು ಪರಿಣಾಮಕಾರಿ ಚಲನಚಿತ್ರಗಳನ್ನು ಹಾಲಿವುಡ್ ನಿರ್ಮಿಸಿತು. ಮೂಲತಃ ಪಾಶ್ಚ್ಯಾತ್ಯ ಶಕ್ತಿಗಳು ಮಾತ್ರ ನಾಜಿಗಳ ವಿರುದ್ಧ ಶೌರ್ಯದಿಂದ ಹೋರಾಡಿ ಅವರನ್ನು ಸೋಲಿಸಿದವು ಎಂಬುದನ್ನು ಈ ಚಲನಚಿತ್ರಗಳು ತೋರಿಸಿದವು. ಈ ಚಲನಚಿತ್ರಗಳನ್ನು ಪಾಶ್ಚ್ಯಾತ್ಯ ಪ್ರೇಕ್ಷಕರಿಗಾಗಿಯೇ ನಿರ್ಮಿಸಲಾಗಿತ್ತು ಎಂಬುದನ್ನು ಅವುಗಳ ಮೂಲ ಕಥಾಹಂದರವೇ ವಿವರಿಸುತ್ತದೆ. ಹಾಗಾಗಿ, ಎರಡನೆಯ ಮಹಾಯುದ್ಧವು ಪ್ರಧಾನವಾಗಿ ಒಂದೆಡೆಯಲ್ಲಿ ಪಾಶ್ಚ್ಯಾತ್ಯ ಶಕ್ತಿಗಳು ಮತ್ತು ಮತ್ತೊಂದೆಡೆಯಲ್ಲಿ ನಾಜಿಗಳು ಮತ್ತು ಅವರ ಮಿತ್ರ–ದೇಶಗಳ ನಡುವೆ ನಡೆಯಿತು ಮತ್ತು ನಾಜಿಗಳನ್ನು ಸೋಲಿಸುವಲ್ಲಿ ಪಾಶ್ಚ್ಯಾತ್ಯ ಶಕ್ತಿಗಳು ನಿರ್ಣಾಯಕವಾಗಿ ಪಾತ್ರವಹಿಸಿದವು ಎಂಬ ನಿರೂಪಣೆಯ ಯಶಸ್ಸಿಗೆ ಅವು ಒಂದು ಬಹು ದೊಡ್ಡ ಕೊಡುಗೆಯನ್ನು ನೀಡಿವೆ ಎಂಬುದರಲ್ಲಿ ಅನುಮಾನವಿಲ್ಲ.

ಸಾರ್ವಜನಿಕ ವಿಸ್ಮೃತಿ

ಸೈನಿಕರು ಮತ್ತು ನಾಗರಿಕರೂ ಸೇರಿದಂತೆ ಈ ಯುದ್ಧದಲ್ಲಿ ಮಡಿದ ಸೋವಿಯತ್ ಒಕ್ಕೂಟದ 27 ಮಿಲಿಯನ್ ಜನರಿಗೆ ಹೋಲಿಸಿದರೆ, ಅರ್ಧ ಮಿಲಿಯನ್‌ಗಿಂತಲೂ ಕಡಿಮೆ ಸಂಖ್ಯೆಯ ಜನರನ್ನು ಇಂಗ್ಲೆಂಡ್ ಕಳೆದುಕೊಂಡಿತು ಮತ್ತು ಅಮೆರಿಕವು ಇನ್ನೂ ಸ್ವಲ್ಪ ಸಣ್ಣ ಸಂಖ್ಯೆಯ ಜನರನ್ನು ಕಳೆದುಕೊಂಡಿತು ಎಂಬ ಅಂಶವು ಪಾಶ್ಚ್ಯಾತ್ಯ ದೇಶಗಳ ಸಾರ್ವಜನಿಕರ ನೆನಪಿನಿಂದ ಕ್ರಮೇಣ ಹಿನ್ನೆಲೆಗೆ ಸರಿಯಿತು. ಖಚಿತವಾಗಿ ಹೇಳುವುದಾದರೆ, ಸಾವಿನ ಸಂಖ್ಯೆಯನ್ನು ಹೋಲಿಸುವುದು ಒಂದು ಹೊಟಗಟೆ ಉರಿಸಬಲ್ಲ ಸಂಗತಿ, ಏಕೆಂದರೆ ಮಡಿದವರ ಸಂಖ್ಯೆ ಎಷ್ಟೇ ಸಣ್ಣದಿರಲಿ, ಯುದ್ಧದಲ್ಲಿ ಮಡಿದ ಎಲ್ಲರನ್ನೂ ಗೌರವಿಸಲೇಬೇಕು. ಆದರೆ, ನಾವಿಲ್ಲಿ ಚರ್ಚಿಸುತ್ತಿರುವುದು, ಸೋವಿಯತ್ ಜನರು ಮಾಡಿದ ತ್ಯಾಗ–ಬಲಿದಾನಗಳ ಅಗಾಧತೆಯ ಬಗ್ಗೆ ಪಾಶ್ಚ್ಯಾತ್ಯ ದೇಶಗಳ ಸಾರ್ವಜನಿಕ ವಿಸ್ಮೃತಿ ಹೆಚ್ಚುತ್ತಾ ಹೋಯಿತು ಎಂಬುದನ್ನು.

ಸತ್ಯವನ್ನು ಅಳಿಸಿಹಾಕುವ ಈ ಪ್ರಯತ್ನವು ಪಾಶ್ಚ್ಯಾತ್ಯ ದೇಶಗಳ ಶೀತಲ ಸಮರದ ಉದ್ದೇಶಕ್ಕೆ ಹೊಂದಿಕೆಯಾಯಿತು. ಫ್ಯಾಸಿಸಂಅನ್ನು ಸೋಲಿಸುವಲ್ಲಿ ಸೋವಿಯತ್ ಒಕ್ಕೂಟವು ವಹಿಸಿದ ಪಾತ್ರವನ್ನು ಅಳಿಸಿಹಾಕುವುದರ ಜೊತೆಗೆ, ಈ ಪಾಶ್ಚ್ಯಾತ್ಯ ಶಕ್ತಿಗಳು ಮತ್ತೊಂದು ಭಯಾನಕ ಸುಳ್ಳನ್ನು – ಸೋವಿಯತ್ ಒಕ್ಕೂಟವು ಪಶ್ಚಿಮ ಯುರೋಪನ್ನು ಕಬಳಿಸುವ ಆಕ್ರಮಣಕಾರಿ ಹವಣಿಕೆಯನ್ನು ಹೊಂದಿರುವ ಒಂದು ವಿಸ್ತರಣಾವಾದಿ ಶಕ್ತಿಯಾಗಿದೆ ಎಂಬ ಸುಳ್ಳನ್ನು – ಹರಡುತ್ತಿದ್ದವು. ಆದರೆ, ಆಗಷ್ಟೇ ಕೊನೆಗೊಂಡ ಯುದ್ಧದಲ್ಲಿ 27 ಮಿಲಿಯನ್ ಜನರನ್ನು ಕಳೆದುಕೊಂಡು, ಅಪಾರ ಕಷ್ಟ–ನಷ್ಟ–ವಿನಾಶಗಳಿಗೆ ಒಳಗಾಗಿ ಏದುಸಿರು ಬಿಡುತ್ತಿರುವ ಸೋವಿಯತ್ ಒಕ್ಕೂಟವು ಯೂರೋಪಿನ ದೇಶಗಳನ್ನು ನುಂಗುವುದು ಸಂಭವವೇ ಎಂಬುದು ಅವರ ಮನಸ್ಸಿಗೆ ಹೊಳೆಯಲಿಲ್ಲ. ಆದರೆ, ವಿನ್ಸ್ಟನ್ ಚರ್ಚಿಲ್ ಅವರಂತಹ ಕೆಲವು ಕಟ್ಟಾ–ಸಾಮ್ರಾಜ್ಯಶಾಹಿಗಳು, ಯುರೋಪಿಗೆ ಸೋವಿಯತ್ ಒಕ್ಕೂಟದಿಂದ ಅಪಾಯವಿದೆ ಎಂಬ ಕಥನವನ್ನು ಸೃಷ್ಟಿಸಿದವು ಮತ್ತು ಅದನ್ನು ಆಕ್ರಮಣಕಾರಿಯಾಗಿ ಪ್ರಚುರಪಡಿಸಿದವು. ಈ ಉದ್ದೇಶಪೂರ್ವಕ ಕಥನವನ್ನು ಯುದ್ಧಾನಂತರದ ದಿನಗಳಲ್ಲಿ ತಮ್ಮ ಆಧಿಪತ್ಯಕ್ಕೆ ಒಂದು ಗಂಭೀರ ಬೆದರಿಕೆ ಎದುರಾಗಿರುವ ಬಗ್ಗೆ ಹೆದರಿದ್ದ ಯುರೋಪಿನ ಆಳುವ ವರ್ಗಗಳನ್ನು ಬಲಪಡಿಸುವ ಸಲುವಾಗಿ ಸೃಷ್ಟಿಸಲಾಗಿತ್ತು. ಈ ಬೆದರಿಕೆಯು ಆಳುವ ವರ್ಗಗಳು ಕೆಲವು ರಿಯಾಯಿತಿಗಳಿಗೆ ಒಪ್ಪುವಂತೆ ಮಾಡಿತು. ಅವುಗಳಲ್ಲಿ ಒಂದು ರಿಯಾಯಿತಿಯು ದೇಶದೊಳಗೆ ಕಲ್ಯಾಣ ಪ್ರಭುತ್ವದ ರಚನೆಗೆ ಸಂಬಂಧಿಸಿತ್ತು. ಮತ್ತೊಂದು, ವಿದೇಶದಲ್ಲಿ ಅವರು ಹೊಂದಿದ್ದ ವಸಾಹತುಗಳಿಗೆ ಸ್ವಾತಂತ್ರ್ಯವನ್ನು ನೀಡುವುದಕ್ಕೆ ಸಂಬಂಧಿಸಿತ್ತು (ಶೀತಲ ಸಮರದ ಶಿಲ್ಪಿ ಚರ್ಚಿಲ್, ವಸಾಹತುಗಳ ಸ್ವಾತಂತ್ರ್ಯವನ್ನು ವಿರೋಧಿಸಿದ್ದರು).

ಒಂದು ವಾಸ್ತವ ಸಂಗತಿಯೆಂದರೆ, ಸೋವಿಯತ್ ಒಕ್ಕೂಟವು, ಫ್ಯಾಸಿಸಂ–ವಿರೋಧಿ ಹೋರಾಟ ಬಣಗಳು ಯಾಲ್ಟಾ ಮತ್ತು ಪಾಟ್ಸ್‌ಡ್ಯಾಮ್ ಸಮ್ಮೇಳನಗಳಲ್ಲಿ ತಲುಪಿದ ತಿಳುವಳಿಕೆಯನ್ನು ಕಟ್ಟುನಿಟ್ಟಾಗಿ ಪಾಲಿಸಿತ್ತು. ಅದು



ಗ್ರೀಕ್ ಕ್ರಾಂತಿಯ ಸಹಾಯಕ್ಕೆ ಹೋಗಲಿಲ್ಲ ಮತ್ತು ಗ್ರೀಕ್ ಕ್ರಾಂತಿಯ ಸೋಲಿಗೆ ಒಂದು ಕಾರಣವೂ ಆಯಿತು. ಆದರೆ, ಸಾಮ್ರಾಜ್ಯಶಾಹಿಯು ತನ್ನ ಅಸ್ತಿತ್ವಕ್ಕೆ ಎದುರಾಗಿದ್ದ ಪರಿಸ್ಥಿತಿಯಲ್ಲಿ ಬೆಂಬಲ ಪಡೆಯುವುದಕ್ಕಾಗಿ, ಸೋವಿಯತ್ ಬೆದರಿಕೆಯ ಕಥನವನ್ನು ಮುಂದುವರಿಸುವ ಬಗ್ಗೆ ಸ್ವಲ್ಪವೂ ಹಿಂದೆ ಮುಂದೆ ನೋಡಲಿಲ್ಲ.

ವಸಾಹತು ಭಾರತದ ಜನರಿಂದ, ವಿಶೇಷವಾಗಿ ಬಂಗಾಳದ ಜನರಿಂದ, ಬಲವಂತವಾಗಿ ಪಡೆದ ಬಲಿದಾನವು ಎರಡನೇ ಮಹಾಯುದ್ಧದ ಸಮಯದಲ್ಲಿ ಪಾಶ್ಚ್ಯಾತ್ಯ ದೇಶಗಳು ಮಾಡಬೇಕಾಗಿ ಬಂದ ತ್ಯಾಗ–ಬಲಿದಾನಗಳಿಗಿಂತ ಅನೇಕ ಪಟ್ಟು ಹೆಚ್ಚಿನದಾಗಿದೆ ಎಂಬುದನ್ನು ಹಲವು ಸಂದರ್ಭಗಳಲ್ಲಿ ಗುರುತಿಸಲಾಗಿಲ್ಲ. ಉದಾಹರಣೆಗೆ ಜಪಾನ್ ವಿರುದ್ಧ ಪೂರ್ವದ ರಣಾಂಗಣದಲ್ಲಿ ಬ್ರಿಟನ್ ನಡೆಸಿದ ಯುದ್ಧಕ್ಕೆ ವಸಾಹತು ಭಾರತದ ಸರ್ಕಾರವು ಬೃಹತ್ ಪ್ರಮಾಣದ 'ವಿತ್ತೀಯ ಕೊರತೆ'ಯ ಮೂಲಕ ಗಣನೀಯ ಪ್ರಮಾಣದ ಹಣ ಒದಗಿಸಿತು. ಈ ವಿತ್ತೀಯ ಕೊರತೆಯ ಬಹು ಪಾಲು ಹಣವನ್ನು ವಸಾಹತುಶಾಹಿ ಸರ್ಕಾರದ ಯುದ್ಧ ವೆಚ್ಚಗಳಿಗಾಗಿ ಖರ್ಚುಮಾಡಲಾಗಿತ್ತು. ಏಕೆಂದರೆ, ಯುದ್ಧದಲ್ಲಿ ಭಾಗವಹಿಸುವ ಸಂಬಂಧವಾಗಿ ಭಾರತದ ಜನತೆಯೊಂದಿಗೆ ಯಾವ ಸಮಾಲೋಚನೆಯನ್ನೂ ಮಾಡದೆ ಭಾರತವನ್ನು ಯುದ್ಧಕ್ಕೆ ಎಳೆಯಲಾಯಿತು. ಅದೇನೇ ಇರಲಿ, ಹಣ ಮುದ್ರಿಸುವ ರೂಪದ ಈ ವಿತ್ತೀಯ ಕೊರತೆಯು, ಪೂರ್ವದ ರಣಾಂಗಣದಲ್ಲಿ ಮಿತ್ರದೇಶಗಳ ಯುದ್ಧ ವೆಚ್ಚಕ್ಕಾಗಿ ಬ್ರಿಟಿಷ್ ಸರ್ಕಾರವು ಭಾರತದಿಂದ ತೆಗೆದುಕೊಂಡ ಬಲವಂತದ ಸಾಲವಾಗಿತ್ತು. ಬ್ರಿಟನ್ ಪಡೆದ ಈ ಸಾಲಗಳನ್ನು "ಸ್ಟರ್ಲಿಂಗ್ ಬ್ಯಾಲೆನ್ಸ್" ಎಂದು ಕರೆದು ಅವುಗಳನ್ನು ಬ್ರಿಟನ್ ವಿರುದ್ಧ ಭಾರತದ ಹಕ್ಕುಗಳಾಗಿ ದಾಖಲಿಸಲಾಗಿತ್ತು. ಮುದ್ರಿಸಿದ ಈ ಹಣವನ್ನು ಮೀಸಲು (ವಿದೇಶಿ ವಿನಿಮಯ) ಎಂದೇ ಪರಿಗಣಿಸಲಾಗಿತ್ತು. ಆದರೆ, ಯುದ್ಧ ಮುಗಿದ ಬಹಳ ಕಾಲದ ನಂತರವೂ ಈ 'ಮೀಸಲು'ಗಳ ಒಂದಿಷ್ಟು ಭಾಗವನ್ನಾದರೂ ವಾಸ್ತವವಾಗಿ ಪಡೆಯಲಾಗಲಿಲ್ಲ. ಈ ರೀತಿಯ ವಿತ್ತೀಯ ಕೊರತೆಯು ಆಹಾರ ಧಾನ್ಯಗಳ ಬೆಲೆಗಳ ತೀವ್ರ ಏರಿಕೆಗೆ ಕಾರಣವಾಯಿತು. ಗ್ರಾಮೀಣ ಪ್ರದೇಶಗಳಲ್ಲಿ ಆಹಾರ ವಿತರಣೆಯ ಯಾವುದೇ ಪಡಿತರ ವ್ಯವಸ್ಥೆ ಇಲ್ಲದ ಕಾರಣದಿಂದ ಬಂಗಾಳದಲ್ಲಿ ಉಂಟಾದ ಕ್ಷಾಮದಿಂದ ಕನಿಷ್ಠ ಮೂವತ್ತು ಲಕ್ಷ ಜನರು ಸಾವನ್ನಪ್ಪಿದರು (ಹೋಲಿಕೆಯಲ್ಲಿ, ಮಹಾ ಯುದ್ಧದ ಇಡೀ ಅವಧಿಯಲ್ಲಿ 5ಲಕ್ಷ ಜನರು ಬ್ರಿಟನ್‌ನಲ್ಲಿ ಸಾವನ್ನಪ್ಪಿದ್ದರು). ವಿಪರ್ಯಾಸವೆಂದರೆ ಬ್ರಿಟನ್ ಭಾರತಕ್ಕೆ ಪಾವತಿಸಬೇಕಾದ ಸಂಚಿತ "ಸ್ಟರ್ಲಿಂಗ್ ಬ್ಯಾಲೆನ್ಸ್" ಸಹ ಅದರ ಹೆಚ್ಚಿನ ಮೌಲ್ಯವನ್ನು ಕಳೆದುಕೊಂಡಿತು, ಭಾಗಶಃ ಯುದ್ಧದಿಂದ ಮತ್ತು ಯುದ್ಧಾನಂತರದ ತಕ್ಷಣದ ವರ್ಷಗಳಲ್ಲಿ ಉಂಟಾದ ಅತಿ–ಹಣದುಬ್ಬರದಿಂದಾಗಿ ಮತ್ತು ಭಾಗಶಃ 1949ರಲ್ಲಿ ಪೌಂಡ್ ಸ್ಟರ್ಲಿಂಗ್‌ನ ಅಪಮೌಲ್ಯದಿಂದಾಗಿ. ಬಂಗಾಳದಲ್ಲಿ ಮೂವತ್ತು ಲಕ್ಷ ಜನರು ಮಡಿದರು. ಯುದ್ಧದಲ್ಲಿ ಅವರು ಇಚ್ಛಾಪೂರ್ವಕವಾಗಿ ಭಾಗವಹಿಸದಿದ್ದರೂ, ಯುದ್ಧ ಸಾವುನೋವುಗಳು ಎಂಬ ಪುಟ 14 ಕ್ಕೆ

ನಾಜಿ ಸೋಲಿನ ಬಗ್ಗೆ ಸತ್ಯವನ್ನು ಅಳಿಸಿ ಹಾಕುವ... ಪುಟ 13 ರಿಂದ

ಪದ ಹೊಂದಿದ ಯಾವ ಅರ್ಥದಲ್ಲಿಯೂ ಅವರ ಸಾವು ಯುದ್ಧ–ಸಂಬಂಧಿತ ಸಾವೇ ಆಗಿತ್ತು.

ಟ್ರಂಪ್ ಶೈಲಿಯ ಪರಾಕಾಷ್ಠೆ

ಫ್ಯಾಸಿಸಂಅನ್ನು ಸೋಲಿಸುವಲ್ಲಿ ಸೋವಿಯತ್ ಒಕ್ಕೂಟವು ವಹಿಸಿದ ಪಾತ್ರವನ್ನು ಅಳಿಸಿಹಾಕುವ ಪ್ರಯತ್ನವು, ಡೊನಾಲ್ಡ್ ಟ್ರಂಪ್ ಆಗಮನದೊಂದಿಗೆ ಅದರ ಪರಾಕಾಷ್ಠೆಯನ್ನು ತಲುಪಿದೆ. ನಾಜಿ ಜರ್ಮನಿಯ ವಿರುದ್ಧ ಹೋರಾಡುವಲ್ಲಿ ಸೋವಿಯತ್ ಒಕ್ಕೂಟವು ವಹಿಸಿದ ಪಾತ್ರವು ಪ್ರಧಾನವಾದದ್ದು ಎಂಬುದನ್ನು ಗುರುತಿಸುವ ವಿಷಯದಲ್ಲಿ ಟ್ರಂಪ್ ಮೌನವಾಗಿದ್ದಾರೆ ಮಾತ್ರವಲ್ಲ; ನಾಜಿ ಜರ್ಮನಿಯನ್ನು ಸೋಲಿಸುವಲ್ಲಿ ಪ್ರಧಾನ ಪಾತ್ರ ವಹಿಸಿದ್ದು ಅಮೆರಿಕವೇ ಎಂದು ಹೇಳಿಕೊಳ್ಳುವಷ್ಟು ನಿರ್ಲಜ್ಜರೂ ಆಗಿದ್ದಾರೆ. ಟ್ರಂಪ್ ಅವರ ಅತಿರೇಕದ ಹೇಳಿಕೆಗೆ ಅವರ ಅಜ್ಞಾನವೇ ಕಾರಣ ಎಂದು ಕೆಲವರು ಹೇಳುತ್ತಾರೆ. ಆದರೆ, 1946ರಲ್ಲಿ ಜನಿಸಿದ ಅವರಿಗೆ, ಯುದ್ಧಾನಂತರದ ಪರಿಣಾಮಗಳ ನೇರ ಅನುಭವವನ್ನು ಹೊಂದುವಷ್ಟು ಮತ್ತು ಅದರ ಬೆಳವಣಿಗೆಯ ಹಾದಿಯ ಬಗ್ಗೆ ಸಾಕಷ್ಟು ಜ್ಞಾನವನ್ನು ಹೊಂದುವಷ್ಟು ವಯಸ್ಸಾಗಿದೆ. ಅವರ ಈ ನಿರ್ಲಜ್ಜ ಹೇಳಿಕೆಯನ್ನು ಅತ್ಯಂತ ನಾಚಿಕೆಗೇಡಿನ ಟ್ರಂಪ್ ಶೈಲಿಯಲ್ಲಿ ವ್ಯಕ್ತಪಡಿಸಲಾಗಿದೆ ಮತ್ತು ಅದು ಮಹಾ ಯುದ್ಧವು ಅಂತ್ಯಗೊಂಡ ಕಾಲದಿಂದಲೂ ಕುತಂತ್ರದ ಪ್ರಚಾರ ಮಾಡುತ್ತಿರುವ ಪಾಶ್ಚ್ಯಾತ್ಯ ಸಾಮ್ರಾಜ್ಯಶಾಹಿ ಸುಳ್ಳಿನ ಅಂತಿಮ ಮಿತಿಯಾಗಿದೆ.

ನಾಜಿ ಜರ್ಮನಿಯ ಸೋಲಿನ 80ನೇ ವಾರ್ಷಿಕೋತ್ಸವದ ಮಾಸ್ಕೋ ಸಂಭ್ರಮಾಚರಣೆಯನ್ನು ಬಹಿಷ್ಕರಿಸುವ ಪಾಶ್ಚ್ಯಾತ್ಯ ಶಕ್ತಿಗಳ ನಿರ್ಧಾರವನ್ನು ಪುಟಿನ್ ಅವರ ಉಕ್ರೇನ್ ಯುದ್ಧ ವಿರೋಧದ ಪರಿಭಾಷೆಯಲ್ಲಿ ವ್ಯಕ್ತಪಡಿಸಲಾಗಿದೆಯಾದರೂ, ಈ ಸಂಭ್ರಮಾಚರಣೆಯನ್ನು ಬಹಿಷ್ಕರಿಸುವ ಪಾಶ್ಚ್ಯಾತ್ಯ ಶಕ್ತಿಗಳ ನಿರ್ಧಾರವು ಈಗ ಚಾಲ್ತಿ ಪಡೆದುಕೊಳ್ಳುತ್ತಿರುವ ಈ ಸುಳ್ಳಿನ ಮೇಲೆ ನಿಂತಿದೆ. ನಿಜ, ಪುಟಿನ್‌ಗೂ ಮತ್ತು ಸೋವಿಯತ್ ಒಕ್ಕೂಟಕ್ಕೂ ಸಂಬಂಧವಿಲ್ಲ. ಈ ವಾರ್ಷಿಕೋತ್ಸವದ ಸಂಭ್ರಮಾಚರಣೆಯನ್ನು, ಸೋವಿಯತ್ ಒಕ್ಕೂಟದ ಗತ ವೈಭವಗಳ ಒಂದು ಪಾಲನ್ನು ಬಾಚಿಕೊಳ್ಳುವ ಉದ್ದೇಶದಿಂದ ಪುಟಿನ್ ರೂಪಿಸಿದ್ದಾರೆ. ಆದರೆ, ಪಾಶ್ಚ್ಯಾತ್ಯ ಶಕ್ತಿಗಳು ತಮ್ಮ ಬಹಿಷ್ಕಾರವನ್ನು ಸೋವಿಯತ್ ಒಕ್ಕೂಟ ಮತ್ತು ಪುಟಿನ್ ನಡುವಿನ ವ್ಯತ್ಯಾಸವನ್ನು ತೋರಿಸುವ ಮೂಲಕ ಸಮರ್ಥಿಸಿಕೊಳ್ಳಲಿಲ್ಲ.

ಈ ಸನ್ನಿವೇಶದಲ್ಲಿ ಗಮನಾರ್ಹವಾದ ಅಂಶವೆಂದರೆ, ಚೀನಾ, ವಿಯೆಟ್ನಾಂ ಮತ್ತು ಕ್ಯೂಬಾ ಮಾತ್ರವಲ್ಲದೆ, ಬ್ರೆಜಿಲ್, ವೆನೆಜುವೆಲಾ ಮತ್ತು ಬುರ್ಕಿನಾ ಫಾಸೊ (ಅದು ಪ್ರಸ್ತುತ ಫ್ರಾಂಕೊ–ಅಮೇರಿಕನ್ ನವ–ವಸಾಹತುಶಾಹಿಯನ್ನು ಕಿತ್ತೊಗೆಯಲು ಪ್ರಯತ್ನಿಸುತ್ತಿದೆ) ಸೇರಿದಂತೆ ದಕ್ಷಿಣದ ಹೆಚ್ಚಿನ ಸಂಖ್ಯೆಯ ದೇಶಗಳು ಈ ಸಂಭ್ರಮಾಚರಣೆಯಲ್ಲಿ ಭಾಗವಹಿಸಿದವು. ಭಾರತದ ಗೈರುಹಾಜರು ನಿರೀಕ್ಷಿತವೇ ಆಗಿತ್ತು. ಹೇಳಿ ಕೇಳಿ ಪ್ರಸ್ತುತ ಹಿಂದುತ್ವ ನಾಯಕರ ಪೂರ್ವಜರು ಎರಡನೇ ಮಹಾಯುದ್ಧದ ಸಮಯದಲ್ಲಿ ಮುಸೊಲಿನಿ ಮತ್ತು ಹಿಟ್ಲರ್‌ನ ಪರಮ ಅಭಿಮಾನಿಗಳಾಗಿದ್ದರು ಮತ್ತು ವಿಶ್ವದ ಬಹುಪಾಲು ಜನರ ವಿರುದ್ಧವಾಗಿದ್ದ ಶಕ್ತಿಗಳೊಂದಿಗೆ ಗುರುತಿಸಿಕೊಂಡಿದ್ದರು.

ಫ್ಯಾಸಿಸಂನ ಮರುಜನ್ಮದ ಹಿನ್ನೆಲೆಯಲ್ಲಿ

ಒಂದು ಹೆಚ್ಚುವರಿ ಅಂಶವು ಇಲ್ಲಿ ಕೆಲಸ ಮಾಡುತ್ತಿದೆ. ಎಂಟು ದಶಕಗಳ ಹಿಂದೆ ಫ್ಯಾಸಿಸಂ ವಿರುದ್ಧ ಸಾಧಿಸಿದ ವಿಜಯದ ಆಚರಣೆಯೂ ಸಹ, ವಿಶ್ವದ ಹಲವಾರು ದೇಶಗಳಲ್ಲಿ ಫ್ಯಾಸಿಸಂ ಮತ್ತೆ ಹುಟ್ಟಿಕೊಂಡಿರುವುದರಿಂದ, ಪಾಶ್ಚ್ಯಾತ್ಯ ಶಕ್ತಿಗಳಿಗೆ ಒಂದು ಆದ್ಯತೆಯ ವಿಷಯವಾಗುವುದಿಲ್ಲ. ಪಶ್ಚಿಮದ ಬಹುತೇಕ ಸರ್ಕಾರಗಳು ಒಂದೋ ಸ್ವತಃ ಫ್ಯಾಸಿಸ್ಟ್ ಆಗಿವೆ ಅಥವಾ ಹೊಸದಾಗಿ ಹೊರಹೊಮ್ಮುತ್ತಿರುವ ಫ್ಯಾಸಿಸ್ಟ್ ಪಕ್ಷಗಳೊಂದಿಗೆ ವ್ಯವಹಾರ ಕುದುರಿಸುವ ಹವಣಿಕೆಯಲ್ಲಿವೆ. ಡೊನಾಲ್ಡ್ ಟ್ರಂಪ್ ಮೊದಲ ವರ್ಗಕ್ಕೆ ಸೇರಿದವರು. ಅವರ ಸಹೋದ್ಯೋಗಿ ಮತ್ತು ಆಪ್ತಮಿತ್ರ ಇಲಾನ್ ಮಸ್ಕ್ ಜರ್ಮನಿಯ ಎಎಫ್‌ಡಿಯ (ಜರ್ಮನಿಯ ಪರ್ಯಾಯ ಎಂಬ ಪಕ್ಷದ) ಘೋಷಿತ ಬೆಂಬಲಿಗರಾಗಿದ್ದಾರೆ. ಸ್ಪಷ್ಟವಾಗಿ ಹೇಳುವುದಾದರೆ, ಎಎಫ್‌ಡಿಯು ನವ–ನಾಜಿ ಪಕ್ಷವೇ. ರಷ್ಯಾದೊಂದಿಗೆ ಯುದ್ಧದಲ್ಲಿ ತೊಡಗಿರುವ ಮತ್ತು ಸಾಮ್ರಾಜ್ಯಶಾಹಿ ಶಕ್ತಿಗಳ ಬೆಂಬಲವನ್ನು ಹೊಂದಿರುವ ಉಕ್ರೇನ್ ಆಡಳಿತವು, ಎರಡನೇ ಮಹಾಯುದ್ಧದ ಸಮಯದಲ್ಲಿ ನಾಜಿಗಳ ಕುಖ್ಯಾತ ಸಹಯೋಗಿ ಸ್ಟೆಪನ್ ಬಂಡೇರಾ ಅವರ ಅನುಯಾಯಿಗಳಿಂದ ತುಂಬಿಹೋಗಿದೆ.

ವ್ಲಾಡಿಮಿರ್ ಪುಟಿನ್, ಸೋವಿಯತ್ ಒಕ್ಕೂಟದ ಗತ ವೈಭವದ ಒಂದು ಭಾಗವನ್ನು ಬಾಚಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆಂದು ಒಪ್ಪಿಕೊಂಡರೂ, ವೈಭವ ಎಲ್ಲಿದೆ ಎಂಬುದನ್ನು ಅರಿತ ಪ್ರಶಂಶೆ ಅವರಿಗೆ ಸಲ್ಲುತ್ತದೆ. ಅದೇ ಮಾತನ್ನು ಪಾಶ್ಚ್ಯಾತ್ಯ ಸಾಮ್ರಾಜ್ಯಶಾಹಿ ಶಕ್ತಿಗಳ ಬಗ್ಗೆ ಹೇಳಲಾಗದು.

ಫ್ಯಾಸಿಸಂ ವಿರುದ್ಧ ವಿಜಯದ 80ನೇ ವಾರ್ಷಿಕೋತ್ಸವ.......... ಪುಟ 16 ರಿಂದ

ನಾಜಿ ಸೋಲಿನ ನಂತರ, ಫ್ಯಾಸಿಸ್ಟ್ ಕೂಟದ ಪತನದ ಅಂತಿಮ ಹಂತ ಆರಂಭವಾಗುತ್ತದೆ. ಕುರ್ಸ್ಕ್ ನಿಂದ ಆರಂಭಿಸಿ ಸೋವಿಯೆಟ್ ಪಡೆಗಳು ಹಿಮ್ಮೆಟ್ಟುತ್ತಿದ್ದ ಜರ್ಮನ್ ಪಡೆಗಳನ್ನು ಅಟ್ಟಿಸುತ್ತಾ ಹಿಂಬಾಲಿಸಿದವು. ಜರ್ಮನಿ ವಶಪಪಡಿಸಿಕೊಂಡಿದ್ದ ಪೂರ್ವ ಯುರೋಪಿನ ದೇಶಗಳನ್ನು ವಿಮೋಚನೆ ಮಾಡಿ ಅಲ್ಲಿನ ರಾಷ್ಟ್ರೀಯ ವಿಮೋಚನಾ ಸೈನ್ಯದ ನಾಯಕತ್ವ ವಹಿಸಿದ್ದ (ಹೆಚ್ಚಾಗಿ ಕಮ್ಯುನಿಸ್ಟ್) ರಾಜಕೀಯ ಶಕ್ತಿಗಳಿಗೆ ಹಸ್ತಾಂತರ ಮಾಡಿದವು. ನವೆಂಬರ್ 1944ರಲ್ಲಿ ಜರ್ಮನ್ ಪೂರ್ವ ಭಾಗ ತಲುಪಿ ಅದನ್ನು ವಶಪಡಿಸಿಕೊಂಡು ಎಪ್ರಿಲ್ 1945ರಲ್ಲಿ ಬರ್ಲಿನ್ ಹತ್ತಿರ ಬರುತ್ತಿದ್ದಂತೆ ಹಿಟ್ಲರ್ ಆತ್ಮಹತ್ಯೆ ಮಾಡಿಕೊಂಡ.

ಇತ್ತ ಜಪಾನ್ ಪರ್ಲ್ ಹಾರ್ಬರ್ ಮೇಲೆ ಬಾಂಬ್ ದಾಳಿ ಮಾಡಿದ ನಂತರ ಅಮೆರಿಕ ಮಹಾಯುದ್ಧ ಪ್ರವೇಶಿಸುತ್ತದೆ. ಈ ನಡುವೆ ಜನವರಿ 1942ರಲ್ಲಿ ಫ್ಯಾಸಿಸ್ಟ್ ಕೂಟವನ್ನು ಸೋಲಿಸಲು ನಾಲ್ಕು ಶಕ್ತಿ ರಾಷ್ಟ್ರಗಳ ಕೂಟ ಜಂಟಿಯಾಗಿ ಹೋರಾಡಿ ಎಲ್ಲ ರಂಗಗಳಲ್ಲಿ ನಾಜಿ ಪಡೆ ಶರಣಾಗತಿ ಆಗುವವರೆಗೆ ಪ್ರತ್ಯೇಕ ಕದನ ನಿಲುಗಡೆ ಅಥವಾ ಶಾಂತಿ ಒಪ್ಪಂದ ಮಾಡಿಕೊಳ್ಳಬಾರದು ಎಂಬ 'ಅಟ್ಲಾಂಟಿಕ್ ಚಾರ್ಟರ್'ಗೆ ಸಹಿ ಹಾಕಿದವು. ಅಮೆರಿಕನ್ ಪಡೆಗಳು ಉತ್ತರ ಆಫ್ರಿಕಾದ ಮೊರೊಕ್ಕೊ ಅಲ್ಜೀರಿಯಾಗಳ ಆಕ್ರಮಣ ಮಾಡಿದವು. ಮಿತ್ರಕೂಟದ ಪಡೆಗಳು ಜುಲೈ 1943ರಲ್ಲಿ ಇಟಲಿಯ ಮೇಲೆ ಆಕ್ರಮಣ ಮಾಡಿ, ಗೆರಿಲ್ಲಾಗಳ ಜತೆ ಸೇರಿ ಮುಸೊಲಿನಿ ಸರಕಾರ ಉರುಳಿಸಿ ಅವನನ್ನು ಬಂಧಿಸಲಾಗುತ್ತದೆ. ಆದರೆ ಜರ್ಮನ್ ಪಡೆಗಳು ಇಟಲಿಯನ್ನು ಮತ್ತೆ ವಶಪಡಿಸಿಕೊಂಡು ಮುಸೊಲಿನಿಯನ್ನು ಬಿಡುಗಡೆ ಮಾಡುತ್ತವೆ. ರಾಷ್ಟ್ರೀಯ ಪ್ರತಿರೋಧದ ಪಡೆಗಳು ಹೋರಾಟದಲ್ಲಿ ತೊಡಗಿದ್ದಂತೆ ಇಟಲಿ ಜರ್ಮನ್ ಪಡೆಗಳ ನಿಯಂತ್ರಣದಲ್ಲಿದ್ದು, ಎಪ್ರಿಲ್ 26, 1945ರಲ್ಲಷ್ಟೇ ಪೂರ್ಣವಾಗಿ ವಿಮೋಚನೆ ಹೊಂದುತ್ತದೆ.

ಜೂನ್ 1944ರಲ್ಲಿ ಅಮೆರಿಕ, ಬ್ರಿಟಿಶ್, ಕೆನಡಾ ಮುಂತಾದ ಮಿತ್ರಕೂಟದ ಪಡೆಗಳು ಫ್ರಾನ್ಸಿನ ಅಟ್ಲಾಂಟಿಕ್ ಕರಾವಳಿಯ ನಾರ್ಮಂಡಿ ಎಂಬ ಪಟ್ಟಣದಲ್ಲಿ ದೊಡ್ಡ ಸಂಖ್ಯೆಯಲ್ಲಿ ಗುಟ್ಟಾಗಿ ಇಳಿಯುತ್ತವೆ. ಬ್ರಿಟಿಷ್–ಅಮೆರಿಕನ್ ಪಡೆಗಳು ಪಶ್ಚಿಮ ಯುರೋಪಿನ ದೇಶಗಳನ್ನು ಜರ್ಮನ್ ವಶದಿಂದ ವಿಮೋಚನೆ ಮಾಡುವ ಕೆಲಸ ಆರಂಭಿಸುತ್ತವೆ. ಅಗಸ್ಟ್ 25, 1944ರಂದು ಪ್ಯಾರೀಸ್‌ನ ವಿಮೋಚನೆಯಾಗುತ್ತದೆ. ಬೆಲ್ಜಿಯಂ ಫೆಬ್ರುವರಿ 1945ರಲ್ಲಿ ಮತ್ತು ಹಾಲಂಡ್ ಎಪ್ರಿಲ್ 1945ರಲ್ಲಿ ವಿಮೋಚನೆ ಹೊಂದುತ್ತವೆ. ಏಪ್ರಿಲ್‌ನಲ್ಲಿ ಪಶ್ಚಿಮದಿಂದ ಮಿತ್ರಕೂಟದ ಪಡೆಗಳು ಮತ್ತು ಪೂರ್ವದಿಂದ ಸೋವಿಯೆಟ್ ಕೆಂಪು ಸೈನ್ಯ ಜರ್ಮನಿಯನ್ನು ಪೂರ್ಣವಾಗಿ ವಶಪಡಿಸಿಕೊಂಡು ಮೇ9 ರಂದು ಜರ್ಮನಿ ಶರಣಾಗತವಾಗುತ್ತದೆ.

ಜಪಾನ್ ಮತ್ತು ಚೀನಾ 1937ರಿಂದಲೇ ಯುದ್ಧದಲ್ಲಿ ತೊಡಗಿದ್ದು, 1941ರಿಂದ ಇದು ಎರಡನೇ ಮಹಾಯುದ್ಧದ ಭಾಗವಾಗುತ್ತದೆ. ಜಪಾನ್ ಫ್ಯಾಸಿಸ್ಟ್ ಅಕ್ಷ ಕೂಟದ ಮತ್ತು ಚೀನಾ ಫ್ಯಾಸಿಸ್ಟ್–ವಿರೋಧಿ ಮಿತ್ರಕೂಟದ ಭಾಗವಾಗುತ್ತದೆ. 1941ರಿಂದ ಆರಂಭಿಸಿ ಫ್ರೆಂಚ್ ಇಂಡೋ–ಚೀನಾ, ಫಿಲಿಪ್ಪೀನ್ಸ್, ಇಂಡೋನೇಶ್ಯಾಗಳನ್ನು ಜಪಾನ್ ವಶಪಡಿಸಿಕೊಳ್ಳುತ್ತದೆ. 1942ರಿಂದ ಅಮೆರಿಕ ಮತ್ತು ಮಿತ್ರಕೂಟದ ಜಂಟಿ ಪಡೆಗಳು ಒಂದೊಂದಾಗಿ ಈ ದೇಶಗಳನ್ನು ಜಪಾನ್ ವಶದಿಂದ ಬಿಡುಗಡೆ ಮಾಡುತ್ತವೆ. ಯುಎಸ್ ಜಪಾನಿನ ಮೇಲೆ ಸಹ ಎಪ್ರಿಲ್ 1945ರಲ್ಲಿ ಆಕ್ರಮಣ ಮಾಡುತ್ತದೆ. ಅಗಸ್ಟ್ ನಲ್ಲಿ ಸೋವಿಯೆಟ್ ಪಡೆಗಳು ಸಹ ಜಪಾನ್ ವಿರುದ್ಧ ಯುದ್ಧದಲ್ಲಿ ಸೇರುತ್ತವೆ. ಜಪಾನ್ ಪಡೆಗಳು ಇನ್ನೇನು ಪೂರ್ಣ ಸೋತು ಶರಣಾಗತರಾಗುತ್ತವೆ ಎನ್ನುವಷ್ಟರಲ್ಲೇ ಅಗಸ್ಟ್ 6 ಮತ್ತು 9ರಂದು ಹಿರೋಶಿಮಾ ನಾಗಾಸಾಕಿಗಳ ಮೇಲೆ ಅಮೆರಿಕ ಅಣು ಬಾಂಬ್ ದಾಳಿ ಮಾಡುತ್ತದೆ. ಅಗಸ್ಟ್ 15ರಂದು ಜಪಾನ್ ಶರಣಾಗತವಾಗುವುದರೊಂದಿಗೆ ಎರಡನೇ ಮಹಾಯುದ್ಧ ಏಷ್ಯಾದಲ್ಲೂ ಕೊನೆಗೊಳ್ಳುತ್ತದೆ.

6. ಫ್ಯಾಸಿಸಂ ವಿರುದ್ಧ ಸಮರ ಮತ್ತು ಅದರ ವಿಜಯದಲ್ಲಿ ಸೋವಿಯೆಟ್ ಸೈನ್ಯ, ಸರಕಾರ ಮತ್ತು ಜನತೆಯ ಪಾತ್ರವೇನಿತ್ತು

ಎರಡನೇ ಮಹಾಯುದ್ಧದ ಈ ಐದು ಹಂತಗಳ ಸ್ಥೂಲ ನಿರೂಪಣೆ ಮತ್ತು ಹಿಂದೆ ವಿವಿಧ ದೇಶಗಳ ಸೈನಿಕರ ಮತ್ತು ನಾಗರೀಕರ ಸಾವು–ನೋವುಗಳ ಸಂಖ್ಯೆಯೇ ಈ ಯುದ್ಧದಲ್ಲಿ ತೊಡಗಿದ್ದ ಶಕ್ತಿಗಳ ಪಾತ್ರದ ಬಗ್ಗೆ ಭಾಗಶಃ ತಿಳಿಸುತ್ತವೆ. ಇವುಗಳಿಂದ ಸೋವಿಯೆಟ್ ಕೆಂಪು ಸೈನ್ಯ, ಸರಕಾರ ಮತ್ತು ಜನತೆಯ ಪಾತ್ರ ಅತಿ ದೊಡ್ಡದು ಎಂದು ತಿಳಿಯುತ್ತದೆ. ಈ ಭೀಕರ ಯುದ್ಧದಲ್ಲಿ ಸತ್ತ ಸೈನಿಕರಲ್ಲೂ ನಾಗರಿಕರಲ್ಲೂ ಹೆಚ್ಚು ಕಡಿಮೆ ಅರ್ಧದಷ್ಟು ಸೋವಿಯೆಟ್ ಪ್ರಜೆಗಳು. 1939ರ ಸೋವಿಯೆಟ್ ಜನಸಂಖ್ಯೆಯ ಶೇ. 13ರಷ್ಟು ಜನ ಯುದ್ಧಕ್ಕೆ ಬಲಿಯಾದರು. ಅದು ಮಾತ್ರವಲ್ಲ, ಪ್ರಬಲ ಮಿಲಿಟರಿ ಶಕ್ತಿ ಫ್ರಾನ್ಸ್ ನಿಂದ ಆರಂಭಿಸಿ ಪಶ್ಚಿಮ ಯುರೋಪಿನ ಎಲ್ಲ ದೇಶಗಳು ಹೆಚ್ಚಿನ ಪ್ರತಿರೋಧ ತೋರದೆ ಸೋತವು.

ಹಿಟ್ಲರನ ಕಮ್ಯುನಿಸ್ಟ್–ದ್ವೇಷದಿಂದಾಗಿ ಸೋವಿಯೆಟ್ ಒಕ್ಕೂಟದ ಮೇಲೆ ಮೊದಲು ಆಕ್ರಮಣ ಮಾಡಬಹುದು ಎಂಬ ಅಂದಾಜಿನಿಂದ ಅವರು ಅಗತ್ಯ ತಯಾರಿ ನಡೆಸಿರಲಿಲ್ಲ. ಈ ದೇಶಗಳ ಆಳುವ ವರ್ಗಗಳಿಗೆ ಫ್ಯಾಸಿಸಂ ಬಗ್ಗೆ ತೀವ್ರ ವಿರೋಧವೂ ಇರಲಿಲ್ಲ. ನಾಜಿ ಜರ್ಮನಿಯನ್ನು ಸೋವಿಯೆಟ್ ಒಕ್ಕೂಟ ಮತ್ತು ಎಲ್ಲೆಡೆ ಕಮ್ಯುನಿಸ್ಟರನ್ನು ಮಟ್ಟಹಾಕಲು ಬಳಸಬಹುದು ಎಂಬುದೂ ಅವರ ನಿರೀಕ್ಷೆಯಾಗಿತ್ತು. ಇದು ಹಿಟ್ಲರನನ್ನು ಸೋವಿಯೆಟ್ ಒಕ್ಕೂಟದ ಮೇಲೆ ಪೂರ್ಣ ಬಲದಿಂದ ಆಕ್ರಮಣ ಮಾಡಲು ಹುರಿದುಂಬಿಸಿತು. 1941–43 ಅವಧಿಯಲ್ಲಿ ಸೋವಿಯೆಟ್ ಒಕ್ಕೂಟದ ತೀಕ್ಷ್ಣ ಪ್ರತಿರೋಧವಿಲ್ಲದಿದ್ದರೆ ಹಿಟ್ಲರನ ಜಾಗತಿಕ ವಿಜಯದ ಕನಸು ನಿಜವಾಗುತ್ತಿತ್ತು. 1942ರಿಂದಲೇ ಪಶ್ಚಿಮದಿಂದ ಬ್ರಿಟಿಶ್–ಅಮೆರಿಕನ್ ಪಡೆಗಳು ಆಕ್ರಮಣ ಆರಂಭಿಸಬೇಕು ಎಂದು ಸೋವಿಯೆಟ್ ನಾಯಕತ್ವ ಕೇಳಿಕೊಂಡರೂ ಅದನ್ನು ಮಾಡಿರಲಿಲ್ಲ. ಸೋವಿಯೆಟ್ ಕೆಂಪು ಸೈನ್ಯ ಜರ್ಮನಿ ಪಡೆಗಳನ್ನು ಅಟ್ಟಿಸಿಕೊಂಡು ಬಂದು ಜರ್ಮನಿ ಮತ್ತು ಪಶ್ಚಿಮ ಯುರೋಪನ್ನು ವಿಮೋಚನೆ ಮಾಡುವುದು ಖಚಿತವಾಗುತ್ತಿದ್ದಂತೆ ಜೂನ್ 1944ರಲ್ಲಷ್ಟೇ ಮಿತ್ರಕೂಟ ಪಶ್ಚಿಮದಿಂದ ಗಂಭಿರ ದಾಳಿ ಆರಂಭಿಸಿತು.



ಸ್ಟಾಲಿನ್ ಗ್ರಾಡ್ ಸಮರ

ಬಂಡಾಯದ ಬಾನುಗೆ ಬೂಕರ್ ಗೌರವ......

ಪುಟ 16 ರಿಂದ

ದಶಕವಾಗಿತ್ತು. ಒಂದೆಡೆ ದಲಿತ ಚಳುವಳಿ, ರೈತ ಚಳುವಳಿ ಜೊತೆಗೆ ಬಂಡಾಯ ಸಾಹಿತ್ಯ ಸಂಘಟನೆಯ ರಾಜ್ಯ ಸಂಚಾಲಕರಾಗಿ ಸಾಹಿತಿ ಬರಗೂರು ರಾಮಚಂದ್ರಪ್ಪ ಅವರ ಮಾರ್ಗದರ್ಶನದಲ್ಲಿ ತಮ್ಮ ಬರವಣಿಗೆಗೆ ಮತ್ತಷ್ಟು ತೀಕ್ಷ್ಣತೆಯನ್ನು ರೂಪಿಸಿಕೊಂಡರು.

ಕಥೆಗಾರ್ತಿ ಮಾತ್ರ ಅಲ್ಲ, ಒಂದು ಧ್ವನಿ: ಅನುಪಮಾ

ಬೂಕರ್ ಪ್ರಶಸ್ತಿ ಘೋಷಣೆಯಾದ ನಂತರ ಸಾಹಿತಿ ಎಚ್.ಎಸ್. ಅನುಪಮಾರವರು ಆಡಿದ ಮಾತುಗಳು. ಬಾನು ಮುಷ್ತಾಕ್ ಅವರ 'ಹಾರ್ಟ್ ಲ್ಯಾಂಪ್" ಕೃತಿಗೆ ಲಭಿಸಿರುವ ಬೂಕರ್ ಪ್ರಶಸ್ತಿಯು ಕನ್ನಡಿಗರಿಗೆ ಹೆಮ್ಮೆಯ ಕ್ಷಣ. ಅವರು ಒಬ್ಬ ಕಥೆಗಾರ್ತಿ ಮಾತ್ರ ಅಲ್ಲ. ಅವರು ಒಂದು ಧ್ವನಿ. ಸಮಾಜದಲ್ಲಿ ದಮನಕ್ಕೊಳಗಾಗಿರುವ, ಧ್ವನಿ ಇಲ್ಲದವರ ಧ್ವನಿ. ಅವರು ಈ ಪ್ರಶಸ್ತಿ ಪಡೆದುಕೊಂಡಿರುವುದು ಕೇವಲ ಕಥೆಗಳಿಗಾಗಿ ಅಲ್ಲ. ಅವರು ರೂಪಿಸಿಕೊಂಡ ಸಂವೇದನಾಶೀಲ ಬದುಕು, ಹೋರಾಟದ ಮನೋಭಾವ ಹಾಗೂ ಮೌನ ಹೇರಿಕೊಳ್ಳಲು ತೋರಿದ ನಿರಾಕರಣೆ ಸಹಾ ಈ ಪ್ರಶಸ್ತಿಗೆ ಹಕ್ಕುದಾರರಾಗಿವೆ. ಸಮಾಜದ ಅನ್ಯಾಯ, ವೈರುಧ್ಯಗಳನ್ನು ಪ್ರಶ್ನಿಸಲು ಸೃಜನಶೀಲ ಬರವಣಿಗೆಯನ್ನು ಆಯ್ದುಕೊಂಡ ಬಾನು ಅವರ ಕೃತಿಗೆ ಸಿಕ್ಕಿರುವ ಮಾನ್ಯತೆಯು ಅವರ ಸಾಮುದಾಯಿಕ, ಭಾಷಿಕ, ಸಾಮಾಜಿಕ, ಸಾಂಸ್ಕೃತಿಕ ಹಿನ್ನೆಲೆಗಳ ಕಡೆಗೂ ಜಗತ್ತಿನ ಗಮನ ಸೆಳೆಯುವುದರಿಂದ ಮುಖ್ಯವಾಗಿದೆ.

ಇಂದಿನ ಕಾಲಘಟ್ಟದಲ್ಲಿ, ಭಾರತದ ಬಹುಸಂಖ್ಯಾತ ಕೋಮುವಾದ, ಬಹುಸಂಖ್ಯಾತ ಧಾರ್ಮಿಕ ಮೂಲಭೂತವಾದಗಳು ಅಲ್ಪಸಂಖ್ಯಾತ ಸಮುದಾಯದವರ ದನಿಯನ್ನು ಅಡಗಿಸುತ್ತಾ, ಮಹಿಳೆಯರ ಧ್ವನಿಯನ್ನು ಹತ್ತಿಕ್ಕುತ್ತಿವೆ. ಜಾಗತಿಕವಾಗಿ ಬೆಳೆಯುತ್ತಿರುವ ಇಸ್ಲಾಮೋಫೋಬಿಯಾ ಮುಸ್ಲಿಂ ಹೆಣ್ಣುಮಕ್ಕಳ ಬಿಕ್ಕಟ್ಟನ್ನು ಹೆಚ್ಚು ಮಾಡಿದೆ. 'ಇದು ಸಂಕ್ರಮಣ ಕಾಲ, ಈಗ ಮಾತನಾಡಬೇಡಿ, ನಿಮ್ಮ ಕುಟುಂಬ ಬಿಕ್ಕಟ್ಟಿನಲ್ಲಿದೆ. ನಿಮ್ಮ ಜಾತಿ ಬಿಕ್ಕಟ್ಟಿನಲ್ಲಿದೆ, ನಿಮ್ಮ ಧರ್ಮ ಬಿಕ್ಕಟ್ಟಿನಲ್ಲಿದೆ. ದೇಶ ಬಿಕ್ಕಟ್ಟಿನಲ್ಲಿದೆ. ಈಗ ನೀವು ಅಪಸ್ವರ ಎತ್ತಿ ನಮ್ಮ ಮರ್ಯಾದೆ ಕಳೆಯಬೇಡಿ. ನಿಮ್ಮ ಸಮಸ್ಯೆಗಳನ್ನು ನಂತರ ಪರಿಹರಿಸೋಣ, ಮೊದಲು ನಾವು ಎದುರಿಸುತ್ತಿರುವ ಮಹಾ ಬಿಕ್ಕಟ್ಟನ್ನು ಸರಿಪಡಿಸಿಕೊಳ್ಳೋಣ" ಎಂದು ಹೇಳುತ್ತಾ ಅವರ ಮನದ ಮಾತುಗಳನ್ನು ಹೇಳಲು ಸಾಧ್ಯವೇ ಆಗದ ಪರಿಸ್ಥಿತಿಯನ್ನು ನಿರ್ಮಾಣ ಮಾಡಲಾಗಿದೆ.

ಈ ದೃಷ್ಟಿಯಿಂದ ನೋಡಿದರೆ ಬಾನು ದಿಟ್ಟವಾಗಿ ಎಲ್ಲ ರೀತಿಯ ಮೂಲಭೂತವಾದವನ್ನು ಎದುರಿಸಿದ್ದಾರೆ. ಸ್ವಧರ್ಮದ ಧಾರ್ಮಿಕ ಮೂಲಭೂತವಾದಿಗಳನ್ನೂ ಎದುರು ಹಾಕಿಕೊಂಡಿದ್ದಾರೆ. ಯಾವುದೇ ರಾಜಿ ಮಾಡಿಕೊಳ್ಳದೆ ತಮ್ಮಿಷ್ಟದಂತೆ ಬದುಕನ್ನು ಕಟ್ಟಿಕೊಂಡಿದ್ದಾರೆ. ಉಡುಪು, ವೃತ್ತಿ, ಉದ್ಯೋಗ, ಭಾಷೆ, ಪ್ರವೃತ್ತಿಗಳ ಆಯ್ಕೆಯ ಸಂದರ್ಭದಲ್ಲಿ ಸ್ವಾಯತ್ತತೆ ಪ್ರದರ್ಶಿಸಿದ್ದಾರೆ. ಮಸೀದಿಯಲ್ಲಿ ಹೆಣ್ಣುಮಕ್ಕಳಿಗೆ ಪ್ರಾರ್ಥನೆಯ ಅವಕಾಶ ಇಲ್ಲದುದನ್ನು ಪ್ರಶ್ನಿಸಿದ್ದಾರೆ. ಸ್ವಾಯತ್ತತೆ ಮತ್ತು ಘನತೆಯ ಬದುಕು ಯಾವುದೇ ಹೋರಾಟಗಾರರ, ಬರಹಗಾರರ ಮೂಲ ಆಶಯ. ಅದನ್ನು ಅವರು ಸ್ವಧರ್ಮದ ಧಾರ್ಮಿಕ ಮೂಲಭೂತವಾದ ಮತ್ತು ಬಹು ಸಂಖ್ಯಾತ ಧಾರ್ಮಿಕ ಮೂಲಭೂತವಾದ ಎರಡನ್ನೂ ಮೆಟ್ಟಿ ನಿಂತು ದಿಟ್ಟವಾಗಿ ತಮಗೆ ಏನು ಅನಿಸುತ್ತದೆಯೋ, ಏನು ಬರೆಯಬೇಕೋ ಅದನ್ನು ಬರೆದಿದ್ದಾರೆ. ಹಾಗೆಯೇ ನ್ಯಾಯಯುತವಾಗಿ ಬದುಕಿದ್ದಾರೆ. ದಶಕಗಳ ಹಿಂದೆಯೇ ಪ್ರಭುವೇ, ನೀನು ಹೆಣ್ಣಾಗಿದ್ದರೆ ಅವಳ ಸಂಕಟ ಅರಿವಾಗುತ್ತಿತ್ತು ಎಂದು ಕಥೆಯೊಂದರಲ್ಲಿ ಬರೆದ ಬಾನು ವಿರುದ್ಧ ಫತ್ವಾ ಹೊರಡಿಸಲಾಗಿತ್ತು. ಆ ಘಟನೆ ಅವರ ಕೌಟುಂಬಿಕ, ಸಾಮಾಜಿಕ ಸುರಕ್ಷತೆ, ಬದುಕಿಗೆ ಸಾಕಷ್ಟು ಪ್ರಭಾವ ಬೀರಿದರೂ ಅವರು ಹೆಜ್ಜೆ ಹಿಂದಿಡಲಿಲ್ಲ. ಬರವಣಿಗೆ ನಿಲ್ಲಿಸಲಿಲ್ಲ. ಬದಲಿಗೆ ಲೇಖಕಿಯಾಗಿ ಮಾತ್ರವಲ್ಲ, ವಕೀಲೆಯಾಗಿ, ಕಾರ್ಯಕರ್ತೆಯಾಗಿ, ಹೋರಾಟಗಾರ್ತಿಯಾಗಿ, ಸಂಘಟನೆಯ ಸದಸ್ಯಳಾಗಿ ತಮ್ಮ ಅಭಿಪ್ರಾಯವನ್ನು ಎತ್ತಿ ಹಿಡಿದರು.

ಇಂದು ಕನ್ನಡಿಗರಿಗೇ ಕನ್ನಡದ ಮೇಲೆ ಅಭಿಮಾನ ಕುಂದುತ್ತಿರುವಾಗ ಅವರ 'ಹಾರ್ಟ್ ಲ್ಯಾಂಪ್" ಕಥಾಸಂಕಲನಕ್ಕೆ ದೊರೆತ ಬೂಕರ್ ಪ್ರಶಸ್ತಿ ಕನ್ನಡಿಗರ ಕಣ್ತೆರೆಸಲಿ. ಕನ್ನಡ ಸಾಹಿತ್ಯದ ಬಗೆಗೆ ಅಭಿಮಾನ ಬೆಳೆಸಲಿ. ಇದು ಕೇವಲ ಬಾನು ಅವರ ಸಂತಸದ ಘಳಿಗೆಯಲ್ಲ. ಇದು ಕನ್ನಡ ಭಾಷೆಯ, ಅಭಿವ್ಯಕ್ತಿಯ ಪುನರುತ್ಥಾನದ ದೃಷ್ಟಿಯಿಂದ ಎಲ್ಲರೂ ಸಂಭ್ರಮಿಸಬೇಕಾದ ಘಳಿಗೆ. ಬಾನು ಅವರ ಕೃತಿಗೆ ಜಾಗತಿಕ ಪ್ರಶಸ್ತಿ ಲಭಿಸಿರುವುದು ಕನ್ನಡ ಭಾಷೆಯೆಡೆಗೆ ವಿಶ್ವದ ಗಮನವನ್ನು ಸೆಳೆಯುವುದರೊಂದಿಗೆ ಕನ್ನಡಿಗರ ಗಮನವನ್ನೂ ಸೆಳೆಯುವುದರಿಂದ ಮಹತ್ವದ್ದಾಗಿದೆ. ಬಾನು ಅವರ ಕೃತಿ, ದೀಪಾ ಭಾಸ್ತಿ ಅವರ ಅನುವಾದ ಹಾಗೂ ಅವರಿಬ್ಬರಿಗೂ ದೊರೆತ ಈ ಪ್ರಶಸ್ತಿ ಕನ್ನಡದಂತಹ ಪುರಾತನ ಭಾಷಾ ಸಾಹಿತ್ಯದ ಕಡೆಗೆ ವಿಶ್ವದ ಗಮನ ಸೆಳೆಯುವುದು ಧನಾತ್ಮಕ ಬೆಳವಣಿಗೆಯಾಗಿದೆ.

ಹೋರಾಟಗಾರ್ತಿ ಕೂಡ

ಬಾನು ಮುಷ್ತಾಕ್ ಅವರೊಂದಿಗೆ ಸಾಮಾಜಿಕ ಹೋರಾಟಗಳಲ್ಲಿ ಒಡನಾಟವಿರುವ ಧರ್ಮೇಶ್ರವರು ಹೀಗೆ ಹೇಳಿದ್ದಾರೆ. ಬಾನು ಮುಷ್ತಾಕ್ ಅವರು ಲೇಖಕಿಯಷ್ಟೇ ಅಲ್ಲ, ಪತ್ರಕರ್ತೆ, ವಕೀಲೆ ಮಾತ್ರವಲ್ಲದೆ, ರೈತ, ದಲಿತ, ಪ್ರಗತಿಪರ ಹೋರಾಟಗಾರ್ತಿ ಕೂಡ. ಮೊದಲಿಗೆ ಲಂಕೇಶ್ ಪತ್ರಿಕೆಯಲ್ಲಿ ವರದಿಗಾರ್ತಿಯಾಗಿ ಬರವಣಿಗೆ ಆರಂಭಿಸಿದರು. ಶಿವಮೊಗ್ಗ, ಹಾಸನ, ಮೈಸೂರು ಭಾಗದಲ್ಲಿ ಲಂಕೇಶ್ ಪತ್ರಿಕೆಗೆ ಬರೆಯುತ್ತ ಲಂಕೇಶ್ ಬಳಗದಲ್ಲಿ ಗುರುತಿಸಿಕೊಂಡಿದ್ದರು. ಈ ಒಡನಾಟವೇ ಸಾಮಾಜಿಕ ಹಿನ್ನೆಲೆಯೊಂದನ್ನು ರೂಪುಗೊಳಿಸಿತು. ನಂತರದ ದಿನಗಳಲ್ಲಿ ಲಂಕೇಶ್ ಪತ್ರಿಕೆಯಲ್ಲಿ ಬರೆಯುವುದು ಕಡಿಮೆಯಾದ ಬಳಿಕ ವಕೀಲ ವೃತ್ತಿ ಆರಂಭಿಸಿದರು. ಜತೆ ಜತೆಯಲ್ಲೇ ಚಂದ್ರಪ್ರಸಾದ್ ತ್ಯಾಗಿ ಅವರೊಂದಿಗೆ ದಲಿತ ಹೋರಾಟ, ವೆಂಕಟೇಶಮೂರ್ತಿ, ಮಂಜುನಾಥದತ್ತ ಅವರೊಂದಿಗೆ ಸೇರಿ ರೈತ ಹೋರಾಟದಲ್ಲಿ ತೊಡಗಿಸಿಕೊಂಡರು. ಇದರ ನಡುವೆ ಕಾಂಗ್ರೆಸ್ ಪಕ್ಷದಿಂದ ಎರಡು ಬಾರಿ ನಗರಸಭೆ ಸದಸ್ಯೆಯೂ ಆಗಿ ಜನರ ಧ್ವನಿಯಾಗಿದ್ದರು. ರಾಜಕೀಯ ಅವರ ಮನಸ್ಥಿತಿಗೆ ಒಗ್ಗದ ಕಾರಣ ವಕೀಲ ವೃತ್ತಿಯೊಂದಿಗೆ ಬರವಣಿಗೆಯಲ್ಲಿ ಹೆಚ್ಚು ತೊಡಗಿಸಿಕೊಂಡರು ಹಾಗೂ ಸಾಮಾಜಿಕ ಹೋರಾಟಗಳಲ್ಲಿ ಗುರುತಿಸಿಕೊಂಡರು.

ಬಾಬಾ ಬುಡನ್ ಗಿರಿ ಸತ್ಯಶೋಧನಾ ಸಮಿತಿಯಲ್ಲಿ

ಚಿಕ್ಕಮಗಳೂರಿನ ಸೌಹಾರ್ದತೆಯ ತಾಣ ಬಾಬಾ ಬುಡನ್ ಗಿರಿಯನ್ನು ಕೋಮು ರಾಜಕೀಯದ ಪ್ರಯೋಗಶಾಲೆ ಮಾಡಲು ಹೊರಟಾಗ, ಅದರ ವಿರುದ್ಧ ರೂಪುಗೊಂಡ ಚಳವಳಿಯಲ್ಲಿ ಸಕ್ರಿಯರಾಗಿದ್ದರು. 2003ರಲ್ಲಿ ಗಿರೀಶ್ ಕಾರ್ನಾಡ್, ಯು.ಆರ್. ಅನಂತಮೂರ್ತಿ, ಕೆ. ಮರುಳ ಸಿದ್ದಪ್ಪ, ಗೌರಿ ಲಂಕೇಶ್, ಶೂದ್ರ ಶ್ರೀನಿವಾಸ್ ಇತ್ಯಾದಿ ಪ್ರಮುಖರ ಜತೆಗೆ ಬಾಬಾ ಬುಡನ್ ಗಿರಿ ಸತ್ಯಶೋಧನಾ ಸಮಿತಿ ಭಾಗವಾಗಿ ಸತ್ಯಶೋಧನಾ ವರದಿ ತಯಾರಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಅದೇ ಸಂದರ್ಭದಲ್ಲಿ ಬಾಬಾ ಬುಡನ್ ಗಿರಿ ಉಳಿಸಿ ಹೋರಾಟ ತೀವ್ರಗೊಳ್ಳುತ್ತಿದ್ದ ಸಂದರ್ಭ ಕೋಮುಶಕ್ತಿಗಳ ವಿರುದ್ಧ ಸೌಹಾರ್ದ ಪರಂಪರೆಯ ತಾಣ ಉಳಿಸಲು ಚಳವಳಿ ಆರಂಭವಾಗಿತ್ತು. ಇದರಲ್ಲೂ ಸಂಪೂರ್ಣ ತೊಡಗಿಸಿಕೊಂಡಿದ್ದರು.

ಜನನುಡಿ, ಉಡುಪಿ ಚಲೋ ರೀತಿಯ ಹೋರಾಟಗಳನ್ನು ಸಂಘಟಿಸಲು ಪ್ರಮುಖ ಪಾತ್ರ ವಹಿಸಿದ್ದರು. ಧಾರ್ಮಿಕ ಸೂಕ್ಷ್ಮತೆ, ಅಸ್ಪೃಶ್ಯತೆ, ಕೋಮುವಾದ ವಿಷಯ ಬಂದಾಗ ನೇರವಾಗಿ ನಿಂತು ಮಾತನಾಡುವ ಎದೆಗಾರ್ತಿ. ಅಸ್ಪೃಶ್ಯತೆ ವಿರುದ್ಧ ನಡೆದ ಸಿಗರನಹಳ್ಳಿ ಹೋರಾಟದಲ್ಲೂ ಸಕ್ರೀಯವಾಗಿ ಭಾಗವಹಿಸಿದ್ದರು. ಮಹಿಳೆಯರ ಮೇಲಿನ ಅನ್ಯಾಯಗಳ ವಿರುದ್ಧ, ಲೈಂಗಿಕ ಪ್ರಕರಣಕ್ಕೆ ಸಂಬಂಧಿಸಿ ಪ್ರಜ್ವಲ್ ರೇವಣ್ಣ ವಿರುದ್ಧ ನಡೆದ ದೊಡ್ಡ ಮಟ್ಟದ ಹೋರಾಟದಲ್ಲಿ ಮತ್ತು ಸಂಘಟನೆಯಲ್ಲಿ ಅವರು ತೊಡಗಿಕೊಂಡಿದ್ದರು.

'ಬೆಂಕಿಮಳೆ' ಕಥಾಸಂಕಲನದ ಕರಿನಾಗರಗಳು ಕಥೆಯನ್ನು ಆಧರಿಸಿ ಗಿರೀಶ್ ಕಾಸರವಳ್ಳಿ ಅವರು 'ಹಸೀನಾ' ಚಿತ್ರ ನಿರ್ದೇಶಿಸಿದ್ದರು. – ಈ ಚಲನಚಿತ್ರ ಮೂರು ರಾಷ್ಟ್ರ ಪ್ರಶಸ್ತಿ ಗಳಿಸಿದೆ. ಬಾನು ಅವರ ಅನೇಕ ಕಥೆಗಳು ಹಿಂದಿ, ಇಂಗ್ಲಿಷ್, ಉರ್ದು, ಮಲಯಾಳಂ, ತಮಿಳು ಭಾಷೆಗಳಿಗೆ ಅನುವಾದಗೊಂಡಿವೆ. ಇದೀಗ ದೀಪಾ ಭಾಸ್ತಿ ಅವರಿಂದ 'ಎದೆಯ ಹಣತೆ'ಯು 'ಹಾರ್ಟ್ ಲ್ಯಾಂಪ್' ಆಗಿ ಇಂಗ್ಲೀಷಿಗೆ ಭಾಷಾಂತರಗೊಂಡು ಬೂಕರ್ ಪ್ರಶಸ್ತಿಗೆ ಭಾಜನವಾಗಿರುವ ಈ ಕೃತಿ 2024ರಲ್ಲಿ ಅತ್ಯುತ್ತಮ ಅನುವಾದಕ್ಕೆ ಪೆನ್ ಪ್ರಶಸ್ತಿಯನ್ನು ಕೂಡ ಪಡೆದುಕೊಂಡಿತ್ತು. ಕನ್ನಡದ ಹೆಮ್ಮೆಯ ವಿಷಯವೆಂದರೆ ಇದೇ ಮೊಟ್ಟ ಮೊದಲ ಬಾರಿಗೆ ಕನ್ನಡದಿಂದ ಅನುವಾದಗೊಂಡ ಕಥೆಗಳಿಗೆ ಪ್ರತಿಷ್ಠಿತ "ENGLISH PEN" ಪ್ರಶಸ್ತಿ ಲಭಿಸಿರುವುದು.


ಅಭಿನಂದನೆ ಸಲ್ಲಿಸದ ಪ್ರಧಾನಿ

ಈ ಮಧ್ಯೆ ಜಗತ್ತಿನ ವಿವಿಧ ದೇಶಗಳಲ್ಲಿ ಅಭಿನಂದನೆಗಳ ಮಹಾಪೂರವೇ ಹರಿದು ಬರುತ್ತಿರುವಾಗ ಸಾಹಿತ್ಯ ಕ್ಷೇತ್ರದಲ್ಲಿ ದೇಶದ ಗೌರವವನ್ನು ಹೆಚ್ಚಿಸುವ ಬಾನು ಮುಷ್ತಾಕ್ ಮತ್ತು ದೀಪಾ ಭಾಸ್ತಿಗೆ ಒಂದು ಸಾಲಿನ ಅಭಿನಂದನೆಗಳನ್ನು ಹೇಳಲು ಪುರುಸೊತ್ತಿರದ ನಮ್ಮ ಪ್ರಧಾನಿಗಳ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕ ಟೀಕೆಗಳು ವ್ಯಕ್ತವಾಗುತ್ತಿವೆ. ಇವರು ಈಗ ಮಾತ್ರವಲ್ಲ ಈ ಹಿಂದೆ 2019ರಲ್ಲಿ ಪತ್ರಕರ್ತ ರವೀಶ್ ಕುಮಾರ್ ಅವರು 'ರಾಮನ್ ಮ್ಯಾಗ್ಸೆಸೆ" ಪುರಸ್ಕೃತರಾದಾಗ, 2022 ರಲ್ಲಿ ಗೀತಾಂಜಲಿ ಶ್ರೀಯವರಿಗೆ "ಅಂತರರಾಷ್ಟ್ರೀಯ ಬೂಕರ್" ಪ್ರಶಸ್ತಿ ಲಭಿಸಿದಾಗಲೂ ಪ್ರಧಾನ ಮಂತ್ರಿಗಳಿಗೆ ಶುಭಕೋರಲು ಆಸಕ್ತಿ ಇರಲಿಲ್ಲ. ಇದರ ಹಿಂದಿನ ರಾಜಕೀಯ, ಸಾಮಾಜಿಕ ಚಿಂತನೆಗಳನ್ನು ಅರ್ಥ ಮಾಡಿಕೊಳ್ಳಬೇಕಿದೆ.

NEW No. MAG(3)/NPP/205/2021-2022
JANASHAKTHI KANNADA VARA PATRIKE May 26-June-01, 2025 Price: Rs. 10/- Date of Publication: 23 May 2025 RNI No. KARKAN/2006/17926 Posted on 28-05-2025
Posted at BG PSO, BG - 560026 **Posted at Periodical Rate -** Rs. 2

ಬಂಡಾಯದ ಬಾನುಗೆ ಬೂಕರ್ ಗೌರವ

ಎಚ್.ಆರ್.ಎನ್. ಹಾಸನ




ಬಾನು ಮುಷ್ತಾಕ್ ಅವರ ಕೃತಿ, ದೀಪಾ ಭಾಸ್ತಿ ಅವರ ಅನುವಾದ ಹಾಗೂ ಅವರಿಬ್ಬರಿಗೂ ದೊರೆತ ಅಂತರರಾಷ್ಟ್ರೀಯ ಬೂಕರ್ ಪ್ರಶಸ್ತಿ ಕನ್ನಡದಂತಹ ಪುರಾತನ ಭಾಷಾ ಸಾಹಿತ್ಯದ ಕಡೆಗೆ ವಿಶ್ವದ ಗಮನ ಸೆಳೆಯುವಲ್ಲಿ ಒಂದು ಧನಾತ್ಮಕ ಬೆಳವಣಿಗೆಯಾಗಿದೆ. ಬಾನು ಮುಷ್ತಾಕ್ ಅವರು ಸಾಹಿತ್ಯ ಕೃಷಿ, ಪತ್ರಕರ್ತೆ, ಹೋರಾಟ, ಸಾಮಾಜಿಕ ಚಟುವಟಿಕೆ, ವಕೀಲೆಯಾಗಿ ಎಲ್ಲಾ ಕ್ಷೇತ್ರಗಳಲ್ಲಿಯೂ ತಮ್ಮನ್ನು ತಾವು ತೊಡಗಿಸಿಕೊಂಡವರು. ಮಹಿಳೆಯರ ಹಕ್ಕುಗಳಿಗಾಗಿ ಧ್ವನಿ ಎತ್ತಿದ್ದಕ್ಕೆ 2000 ದಲ್ಲಿ ಮುಸ್ಲಿಂ ಧಾರ್ಮಿಕ ಮೂಲಭೂತವಾದಿ ಶಕ್ತಿಗಳು ಬಾನು ಮುಷ್ತಾಕ್ ಅವರನ್ನು ಸಾಮಾಜಿಕವಾಗಿ ಬಹಿಷ್ಕರಿಸಿ ಫತ್ವಾ ಹೊರಡಿಸಿದ್ದರು. ಸಾಹಿತಿ ಎಚ್.ಎಸ್. ಅನುಪಮಾರವರು ಆಡಿದ ಮಾತುಗಳಂತೆ, ಬಾನು ಒಬ್ಬ ಕಥೆಗಾರ್ತಿ ಮಾತ್ರ ಅಲ್ಲ. ಅವರು ಒಂದು ಧ್ವನಿ. ಸಮಾಜದಲ್ಲಿ ದಮನಕ್ಕೊಳಗಾಗಿರುವ, ಧ್ವನಿ ಇಲ್ಲದವರ ಧ್ವನಿ.

ಭಾರತೀಯರೆಲ್ಲರೂ ಹೆಮ್ಮೆ ಪಡುವ, ಅದರಲ್ಲೂ ಕನ್ನಡಿಗರು ಇನ್ನಿಲ್ಲದಂತೆ ಸಂತಸ ಪಡಲು ಒಂದು ಬಲವಾದ ಕಾರಣ ಈ ಬಾರಿಯ ಅಂತರರಾಷ್ಟ್ರೀಯ ಬೂಕರ್ ಪ್ರಶಸ್ತಿ. ಪ್ರಥಮ ಬಾರಿಗೆ ಕನ್ನಡದ ಕೃತಿಯೊಂದಕ್ಕೆ ಜಾಗತಿಕ ಮನ್ನಣೆಯ ಅಂತರರಾಷ್ಟ್ರೀಯ ಬೂಕರ್ ಪ್ರಶಸ್ತಿ ಲಭಿಸಿರುವುದು ಕನ್ನಡಿಗರಿಗೆಲ್ಲಾ ಹೆಮ್ಮೆ ತರುವ ಸಂಗತಿ. ಹೌದು ಕರ್ನಾಟಕದ ಹಾಸನ ಜಿಲ್ಲೆಯವರಾದ ಬಾನು ಮುಷ್ತಾಕ್ರವರು 1990 ರಿಂದ 2023 ರವರೆಗೂ ಬರೆದ ಹಲವು ಕಥೆಗಳಲ್ಲಿ 12 ಕಥೆಗಳನ್ನು ಆಯ್ದು ಇಂಗ್ಲೀಷ್ ಅನುವಾದ ಕೃತಿ "ಹಾರ್ಟ್ ಲ್ಯಾಂಪ್"ಗೆ 2025 ನೇ ಸಾಲಿನ ಅಂತರರಾಷ್ಟ್ರೀಯ ಬೂಕರ್ ಪ್ರಶಸ್ತಿ ದೊರೆತಿದೆ. ಸೊಗಸಾದ ಕನ್ನಡ ಭಾಷೆಯಲ್ಲಿ ಕಥೆಯ ಪಾತ್ರಗಳಿಗೆ ಜೀವ ತುಂಬಿದ್ದ ಬಾನು ಮುಷ್ತಾಕ್ ಅವರ ಭಾವನೆಗಳಿಗೆ ಯಾವ ರೀತಿಯಲ್ಲೂ ದಕ್ಕೆಯಾಗದಂತೆ, ಅತ್ಯಂತ ಸಮರ್ಥವಾಗಿ ಅವುಗಳನ್ನು ಇಂಗ್ಲೀಷ್ ಭಾಷೆಗೆ ಅನುವಾದಗೊಳಿಸುವ ಮೂಲಕ ಕರ್ನಾಟಕದ ಕೊಡಗಿನವರಾದ ದೀಪಾ ಭಾಸ್ತಿಯವರೂ ಈ ಪ್ರಶಸ್ತಿಯನ್ನು ಸಮಾನವಾಗಿ ಹಂಚಿಕೊಂಡಿದ್ದಾರೆ. ಮಾತ್ರವಲ್ಲ ಕನ್ನಡದ ಕಂಪನ್ನು ಜಾಗತಿಕ ಮಟ್ಟದಲ್ಲಿ ಪಸರಿಸುವಂತೆ ಮಾಡಲು ನಿರ್ಣಾಯಕ ಪಾತ್ರ ವಹಿಸಿದ್ದಾರೆ.



ಸಾಹಿತ್ಯ ಕ್ಷೇತ್ರಕ್ಕೆ ಕೊಡಮಾಡುವ ಅತ್ಯಂತ ಪ್ರತಿಷ್ಠಿತ ಜಾಗತಿಕ ಪ್ರಶಸ್ತಿ

ನಾವೆಲ್ಲ ಹೆಮ್ಮೆಪಡುವಂತೆ ಮಾಡಿರುವ ಬಾನು ಮುಷ್ತಾಕ್ ಅವರ ಬದುಕು, ಬರಹದ ಕುರಿತು ತಿಳಿಯುವ ಮುನ್ನ ಸಾಹಿತ್ಯ ಕ್ಷೇತ್ರದಲ್ಲಿ ಅತ್ಯಂತ ಪ್ರತಿಷ್ಠಿತ ಪ್ರಶಸ್ತಿಯಾದ ಬೂಕರ್ ಬಗ್ಗೆ ಸ್ವಲ್ಪ ತಿಳಿಯೋಣ.



ಬೂಕರ್ ಸಾಹಿತ್ಯ ಕ್ಷೇತ್ರಕ್ಕೆ ಕೊಡಮಾಡುವ ಅತ್ಯಂತ ಪ್ರತಿಷ್ಠಿತ ಜಾಗತಿಕ ಪ್ರಶಸ್ತಿ. ಬೂಕರ್ ಪ್ರಶಸ್ತಿಯಲ್ಲಿ ಎರಡು ರೀತಿಯ ಪ್ರಶಸ್ತಿಗಳಿವೆ. ಮೊದಲನೆಯದು 1969 ರಲ್ಲಿ ಆರಂಭವಾದ ಮ್ಯಾನ್ ಬೂಕರ್ ಪ್ರೈಜ್ (Man Booker Prize) ಇದು ಇಂಗ್ಲೀಷ್ನಲ್ಲೇ ರಚನೆಯಾದ ಬ್ರಿಟನ್ ಮತ್ತು ಐರ್ಲೆಂಡ್ನಲ್ಲಿ ಪ್ರಕಟವಾದ ಕಾದಂಬರಿಗಳಿಗೆ ನೀಡುವ ಬಹುಮಾನ. ಇದನ್ನು ಈಗ 'ಬೂಕರ್ ಬಹುಮಾನ' ಎನ್ನಲಾಗುತ್ತದೆ. 1997 ರಲ್ಲಿ ಭಾರತೀಯರಾದ ಅರುಂದತಿ ರಾಯ್ ಅವರ ಕಾದಂಬರಿ "ಗಾಡ್ ಆಫ್ ಸ್ಮಾಲ್ ಥಿಂಗ್ಸ್" ಮತ್ತು 2008 ರಲ್ಲಿ ಅರವಿಂದ ಅಡಿಗ ಅವರ ಕೃತಿ "ದಿ ವೈಟ್ ಟೈಗರ್" ಗೆ ಪ್ರಶಸ್ತಿ ಲಭಿಸಿದೆ.



ಎರಡನೆಯದು 2005 ರಿಂದ ಆರಂಭಿಸಿದ ಮ್ಯಾನ್ ಬೂಕರ್ ಇಂಟರ್ ನ್ಯಾಷನಲ್ ಪ್ರೈಜ್ (Man Booker International Prize) ಇದು ಜಗತ್ತಿನ ಯಾವುದೇ ಭಾಷೆಯಿಂದ ಇಂಗ್ಲೀಷ್ಗೆ ಅನುವಾದವಾಗಿರುವ, ಬ್ರಿಟನ್ ಅಥವಾ ಐರ್ಲೆಂಡ್ನಲ್ಲಿ ಪ್ರಕಟವಾದ ಸೃಜನಶೀಲ ಸಾಹಿತ್ಯ ಕೃತಿಯ ಮೂಲ ಲೇಖಕರು ಮತ್ತು ಅನುವಾದಕರಿಗೆ ಸೇರಿ ಕೊಡುವ ಪ್ರಶಸ್ತಿ. 2022 ರಲ್ಲಿ ಗೀತಾಂಜಲಿ ಶ್ರೀಯವರ ಹಿಂದಿ ಕಾದಂಬರಿ "ಟಾಂಬ್ ಆಫ್ ಸ್ಯಾಂಡ್" ಕೃತಿಗೆ ಪ್ರಶಸ್ತಿ ಲಭಿಸಿತ್ತು. ಈಗ ಬಾನು ಮುಷ್ತಾಕ್ ಮತ್ತು ದೀಪಾ ಭಾಸ್ತಿಯವರಿಗೆ ಲಭಿಸಿರುವುದು ಇದೇ ಪ್ರಶಸ್ತಿ. ಬಾನು ಮುಷ್ತಾಕ್ ಈ ಪ್ರಶಸ್ತಿಯನ್ನು ಪಡೆಯುತ್ತಿರುವ ಮೊದಲ ಕನ್ನಡಿಗರು ಎಂಬ ಹಿರಿಮೆಗೆ ಪಾತ್ರರಾದರೆ, ದೀಪಾ ಬಾಸ್ತಿಯವರು ಈ ಪ್ರಶಸ್ತಿಯನ್ನು ಪಡೆಯುತ್ತಿರುವ ಭಾರತದ ಮೊದಲ ಅನುವಾದಕಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದ್ದಾರೆ. ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಲಭ್ಯವಾಗಿರುವ ಮೊಟ್ಟ ಮೊದಲ ಅಂತರರಾಷ್ಟ್ರೀಯ ಬೂಕರ್ ಪ್ರಶಸ್ತಿ ಇದಾಗಿದ್ದು. ಸಣ್ಣಕಥೆಗಳಿಗೆ ಸಿಗುತ್ತಿರುವ ಮೊದಲ ಪ್ರಶಸ್ತಿಯೂ ಇದಾಗಿದೆ. ಮಹಿಳೆಯಾಗಿ ಅದರಲ್ಲೂ ಮುಸ್ಲಿಂ ಮಹಿಳೆಯಾಗಿ ಭಾರತದ ಕೀರ್ತಿಯನ್ನು ಜಾಗತಿಕ ಭೂಪಟದಲ್ಲಿ ವಿರಾಜಮಾನವಾಗಿಸಿದ ಬಾನು ಮುಷ್ತಾಕ್ ಅವರು ಸಾಹಿತ್ಯ ಕೃಷಿ, ಪತ್ರಕರ್ತೆ, ಹೋರಾಟ, ಸಾಮಾಜಿಕ ಚಟುವಟಿಕೆ, ವಕೀಲೆಯಾಗಿ ಎಲ್ಲಾ ಕ್ಷೇತ್ರಗಳಲ್ಲಿಯೂ ತಮ್ಮನ್ನು ತಾವು ತೊಡಗಿಸಿಕೊಂಡವರು.

ಸಾಮಾಜಿಕ ಬಹಿಷ್ಕಾರ ಎದುರಿಸಿ ನಿಂತ ಬಾನು ಮುಷ್ತಾಕ್

ಮಹಿಳೆಯರ ಹಕ್ಕುಗಳಿಗಾಗಿ ಧ್ವನಿ ಎತ್ತಿದ್ದಕ್ಕೆ 2000 ರಲ್ಲಿ ಮುಸ್ಲಿಂ ಧಾರ್ಮಿಕ ಮೂಲಭೂತವಾದಿ ಶಕ್ತಿಗಳು ಬಾನು ಮುಷ್ತಾಕ್ ಅವರನ್ನು ಸಾಮಾಜಿಕವಾಗಿ ಬಹಿಷ್ಕರಿಸಿ ಫತ್ವಾ ಹೊರಡಿಸಿದ್ದರು. ಮಸೀದಿಗೆ ತೆರಳಿ ಪ್ರಾರ್ಥನೆ ಸಲ್ಲಿಸಲು ಮಹಿಳೆಯರಿಗೂ ಅವಕಾಶ ಕೊಡಬೇಕು. ಕುರಾನಿನಲ್ಲಿ ಮಸೀದಿಗೆ ಮಹಿಳೆಯರ ಪ್ರವೇಶವನ್ನು ನಿರಾಕರಿಸಿಲ್ಲ ಎಂದು ಹೇಳಿದ ಮಾತ್ರಕ್ಕೆ ಅವರ ಮೇಲೆ ಬಹಿಷ್ಕಾರ ಹೇರಲಾಯಿತು. ಇಂತಹ ಏಕಪಕ್ಷಿಯವಾದ ಫತ್ವಾಗಳನ್ನು ಹೊರಡಿಸುವ ಮೂಲಕ ಅವರ ಅಭಿವ್ಯಕ್ತಿ ಸ್ವಾತಂತ್ರವನ್ನು ದಮನ ಮಾಡುವ ಪ್ರಯತ್ನ ನಡೆಸಲಾಯಿತು. ಇಂತಹ ಸವಾಲುಗಳನ್ನು ಎದುರಿಸಲು ದಿಟ್ಟತನ ತೋರಿದವರು ಬಾನು. ಸಾಮಾಜಿಕ ಬಹಿಷ್ಕಾರದಂತಹ ಕಠಿಣ ಸವಾಲುಗಳನ್ನೂ ಮೆಟ್ಟಿನಿಂತು ಸಾಧನೆಗೈದ ಅಪ್ರತಿಮ ಸಾಹಸಿ. ನಿರ್ಭೀತ ನಿಲುವುಗಳಿಗೆ ಹೆಸರಾದವರು ಬಾನು.

ತಾವು ಸ್ವತ: ತಮ್ಮ ಜೀವನದಲ್ಲಿ ಅನುಭವಿಸಿದ ನೋವುಗಳು ಮತ್ತು ತಮ್ಮ ಸುತ್ತಮುತ್ತಲಿನ ಸಮಾಜದಲ್ಲಿ ಮಹಿಳೆಯರು ಅದರಲ್ಲೂ ಮುಸ್ಲಿಂ ಮಹಿಳೆಯರು ಅನುಭವಿಸುತ್ತಿರುವ ಸಂಕಟಗಳಿಗೆ ದನಿಯಾಗಿ ಅವುಗಳಿಗೆ ಅಕ್ಷರ ರೂಪ ಕೊಟ್ಟು ಅಚ್ಚುಕಟ್ಟಾಗಿ ಜೋಡಿಸಿ ಸೊಗಸಾದ ಕನ್ನಡದಲ್ಲಿ ಕಥೆ ಹೆಣೆಯಲು ಆರಂಭಿಸಿದರು.

1948 ಏಪ್ರಿಲ್ 3 ರಂದು ಹಾಸನ ನಗರದ ವಲ್ಲಭಬಾಯಿಯಲ್ಲಿ ಜನಿಸಿದ ಭಾನು ಮುಷ್ತಾಕ್ ಮಾತೃಭಾಷೆ ಉರ್ದು ಭಾಷೆಯಾಗಿದ್ದರೂ, ಶಿಕ್ಷಣದಲ್ಲಿ ಉರ್ದು ತಲೆಗೆ ಹತ್ತದ ಕಾರಣ ಅವರ ತಂದೆ ಕನ್ನಡವನ್ನಾದರೂ ಕಲಿಯಲಿ ಎಂದು ಶಿವಮೊಗ್ಗದ ಕ್ರಿಶ್ಚಿಯನ್ ಶಾಲೆಗೆ ಸೇರಿಸಿದರು. ಬಳಿಕ ಪದವಿಯವರೆಗೂ ಅಲ್ಲಿಯೇ ವಿದ್ಯಾಭ್ಯಾಸ ಮಾಡಿದರು. ನಂತರ ಬಿಎಸ್ಸಿ ಮತ್ತು ಎಲ್‌ಎಲ್‌ಬಿ ಪದವಿ ಪಡೆದು ವಕೀಲಿ ವೃತ್ತಿ ಆರಂಭಿಸಿದರು. ಸಿನಿಮಾ ನೋಡಿ ಬಂದ ಮುಸ್ಲಿಂ ಮಹಿಳೆಗೆ ಬಹಿಷ್ಕಾರ ಹಾಕಿದ ಪ್ರಕರಣವನ್ನು ವರದಿ ಮಾಡುವ ಮೂಲಕ ತಮ್ಮ ಬರವಣಿಗೆಯನ್ನು ಲಂಕೇಶ್ ಪತ್ರಿಕೆಯ ಮೂಲಕ ಆರಂಭಿಸಿದ ಬಾನು ಮುಷ್ತಾಕ್ ಅವರಿಗೆ ಪಿ. ಲಂಕೇಶರ ಸಲಹೆ ಮತ್ತು ಮಾರ್ಗದರ್ಶನ ಅವರ ಬರವಣಿಗೆ ಒಂದು ರೂಪ ಪಡೆಯಲು ಸಹಕಾರಿಯಾಯಿತು.

80 ರ ದಶಕವು ರಾಜ್ಯದಲ್ಲಿ ಚಳುವಳಿಗಳ

ಪುಟ 15 ಕ್ಕೆ

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **S.Y.GURUSHANTH**